ಡಿಸೆಂಬರ್ 1, 2024
40ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1961
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ಅಧ್ಯಕ್ಷ ಸ್ಥಾನದಲ್ಲಿ ಮುಂದುವರೆಯಲು ಅಡ್ಡಿಯಾಗಿದ್ದ ಉಪಾಧ್ಯಕ್ಷೆಯ

# ಪತಿಯ ಹೆಣ ಬೀಳಿಸಿದ ಗ್ರಾ.ಪಂ. ಸದಸ್ಯ!





## ಎಳೆಯ ಪ್ರಿಯತಮನ ಸಂಗ ಬಿಟ್ಟಿರಲಾರದ ಸೆಕ್ಸಿ ಆಂಟಿ ಕಾಮದಾಟಕ್ಕೆ ಅಡ್ಡಿಯಾಗಿದ್ದ ಗಂಡನನ್ನು ಕೊಲ್ಲಿಸಿದಳು!

## ಪ್ರೊಫೆಸರ್‌ಗೆ ಹನಿಟ್ರ್ಯಾಪ್ ಮಾಡಿ 3 ಕೋಟಿ ಲೂಟಿ!

## ಪ್ರಿಯತಮೆಯ ಕತ್ತು ಕೊಯ್ದು ಕೊಲೆ ಮಾಡಿದ ಪ್ರಿಯಕರ!





## ಮಕ್ಕಳಿಬ್ಬರನ್ನು ಕೊಂದು ಆತ್ಮಹತ್ಯೆಗೆ ಯತ್ನಿಸಿದ ತಾಯಿ!



ಕೊಲೆಯಾದ ನಂಜುಂಡಸ್ವಾಮಿ

**ರಾಜಕೀಯ ಎಷ್ಟರಮಟ್ಟಿಗೆ ಗಬ್ಬೆದ್ದು ಹೋಗಿದೆ ಎಂದರೆ ರಾಷ್ಟ್ರಮಟ್ಟದಿರಲಿ ಗ್ರಾ.ಪಂ. ಮಟ್ಟದಲ್ಲಿಯೇ ಅಧಿಕಾರಕ್ಕಾಗಿ ಕೊಲೆ ಮಾಡುವ ಮಟ್ಟಕ್ಕೆ ಹೋಗುತ್ತಿದ್ದಾರೆ. ಇದು ನಿಜವಾಗಿಯೂ ಒಳ್ಳೆ ಬೆಳವಣಿಗೆಯಲ್ಲ. ಯಾರನ್ನೋ ಕೊಂದು ಅಧಿಕಾರ ಪಡೆಯಲು ಹವಣಿಸುವುದು ಎಷ್ಟರ ಮಟ್ಟಿಗೆ ಸರಿ ಎಂಬ ಪ್ರಶ್ನೆಗಳು ಮೂಡಲಾರಂಭಿಸಿವೆ. ಇದಕ್ಕೊಂದು ಅಂತ್ಯ ಹಾಡದೆ ಹೋದರೆ ರಾಜಕೀಯ ದ್ವೇಷದಲ್ಲಿ ಅಂತ್ಯವಾಗುವ ಸಾಧ್ಯತೆಯಿದೆ. ಇದಕ್ಕೆ ನಂಜನಗೂಡು ತಾಲೂಕಿನ ದೇವರಸನಹಳ್ಳಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಪತಿಯ ಕೊಲೆ ಸಾಕ್ಷಿಯಾಗಿದೆ.**

# ಹೆಣ ಬೀಳಿಸಿದ ಗ್ರಾ.ಪಂ. ಸದಸ್ಯ!

**ಮೈಸೂರು**

✍ ಬಿ.ಎಂ. ಲವಕುಮಾರ್

ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನದಲ್ಲಿ ಮುಂದುವರೆಯಲು ಅಡ್ಡಿಯಾಗಿದ್ದ ಉಪಾಧ್ಯಕ್ಷೆಯನ್ನು ಹಣಿಯಲು ಆಕೆಯ ಮೇಲೆ ನೇರವಾಗಿ ಅಟ್ಯಾಕ್ ಮಾಡಲು ಸಾಧ್ಯವಾಗದ ಕಾರಣದಿಂದ ಆಕೆಯ ಪತಿಯನ್ನು ಮುಗಿಸಿ ಮಾನಸಿಕವಾಗಿ ಕುಗ್ಗುವಂತೆ ಮಾಡಿ ತಮ್ಮ ಹಾದಿಯನ್ನು ಸುಗಮ ಮಾಡಿಕೊಳ್ಳಲು ಹೋದವರ ಕಥೆ ಇದಾಗಿದೆ. ಎಂತಹ ಕಲಿಯುಗ ಬಂತು ನೋಡಿ? ಇಲ್ಲಿ ಯಾರೂ ಶಾಶ್ವತವಲ್ಲ ಹೀಗಿರುವಾಗ ಅಧಿಕಾರವೂ ಶಾಶ್ವತವಾಗಿರಲ್ಲ. ಇಷ್ಟು ಗೊತ್ತಿದ್ದರೂ ಯಾರನ್ನೋ ಮುಗಿಸಿಬಿಟ್ಟರೆ ನಮ್ಮ ಹಾದಿ ಸುಗಮವಾಗಿ ನೆಮ್ಮದಿಯಾಗಿರಬಹುದೆಂದು ಬಯಸುವುದು ಎಷ್ಟು ಸರಿ?

ಗ್ರಾಮಪಂಚಾಯಿತಿಯಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳು ಬಹುತೇಕ ಒಪ್ಪಂದದ ಮೇಲೆ ಆಗುತ್ತದೆ. ತಮ್ಮ ಅಧಿಕಾರ ಅವಧಿ ಮುಗಿದ ಬಳಿಕ ಮುಂದಿನವರಿಗೆ ಬಿಟ್ಟುಕೊಡಲೇ ಬೇಕಾಗುತ್ತದೆ. ಬಹಳಷ್ಟು ಗ್ರಾಮ ಪಂಚಾಯಿತಿಗಳಲ್ಲಿ ಹೆಂಡತಿ ಸದಸ್ಯೆಯಾದರೆ ಗಂಡನೇ ಮುಂದೆ ನಿಂತು ಆಕೆಯ ಪರವಾಗಿ ಕೆಲಸ ಮಾಡುತ್ತಿರುತ್ತಾನೆ. ಅದು ಸಾಮಾನ್ಯವಾಗಿದೆ. ಇದೇ ರೀತಿಯ ಕಥೆ ನಂಜನಗೂಡು ತಾಲೂಕಿನ ದೇವರಸನಹಳ್ಳಿಯಲ್ಲಿಯೂ ನಡೆದಿತ್ತು.

ಈ ಗ್ರಾಮ ಪಂಚಾಯಿತಿ ಅಧ್ಯಕ್ಷೆಯಾಗಿ ಸುಮತಿ ಮತ್ತು ಉಪಾಧ್ಯಕ್ಷೆಯಾಗಿ ಸೌಭಾಗ್ಯ ಅವರು ಕಾರ್ಯ ನಿರ್ವಹಿಸುತ್ತಾ ಬಂದಿದ್ದು ಅಧಿಕಾರವಧಿ ಮುಗಿದಿದ್ದರಿಂದ ತಮ್ಮ ಸ್ಥಾನವನ್ನು ಬಿಟ್ಟುಕೊಡಬೇಕಾಗಿತ್ತು. ಸುಮತಿ ಅಧ್ಯಕ್ಷೆ ಸ್ಥಾನವನ್ನು ಉಪಾಧ್ಯಕ್ಷೆ ಸೌಭಾಗ್ಯ ಅವರಿಗೆ ಬಿಟ್ಟುಕೊಡಬೇಕಾಗಿತ್ತು. ಆದರೆ ಸುಮತಿ ಅಧ್ಯಕ್ಷೆಯಾಗಿದ್ದರೂ ಆಡಳಿತ ಮತ್ತು ಓಡಾಟಗಳೆಲ್ಲವೂ ಸಂಬಂಧಿ ಹಾಲಿ ದೇವರಸನಹಳ್ಳಿ ಗ್ರಾಪಂ ಸದಸ್ಯ ಗೋವರ್ಧನ್ (36) ದ್ದಾಗಿತ್ತು. ಈತ ರಾಜಕೀಯವಾಗಿ ಓಡಾಡುತ್ತಿದ್ದನು.

ಬಿಜೆಪಿ ಗ್ರಾಮಾಂತರ ಮಂಡಲ ಯುವ ಮೋರ್ಚಾ ಅಧ್ಯಕ್ಷನಾಗಿದ್ದ ಗೋವರ್ಧನ್ ರಾಜಕೀಯವಾಗಿ ಅದೇನೋ ಮಾಡುತ್ತೇನೆಂಬ ಹುಂಬ ಮನಸ್ಸಿನವನಾಗಿದ್ದನು. ಸುಮತಿ ಅಧಿಕಾರದಲ್ಲಿದ್ದಷ್ಟು ದಿನ ಈತನ ಆಟ ನಡೆದಿತ್ತು. ಹೀಗಾಗಿ ಮುಂದೆ ಸೌಭಾಗ್ಯ ಪಂಚಾಯಿತಿ ಅಧ್ಯಕ್ಷೆಯಾದರೆ ತನಗೆ ಕಷ್ಟವೆಂದರಿತಿದ್ದನು. ಏಕೆಂದರೆ ಸೌಭಾಗ್ಯನ ಪತಿ ಕೆಬ್ಬೇಪುರ ಗ್ರಾಮದ ನಂಜುಂಡಸ್ವಾಮಿ(47) ರಾಜಕೀಯವಾಗಿ ತಿಳಿದು ಕೊಂಡಿದ್ದನು. ಹೀಗಾಗಿ ಆತನೇ ಪತ್ನಿ ಪರವಾಗಿ ಎಲ್ಲ ಕಡೆ ಓಡಾಡುತ್ತಿದ್ದನು. ರಾಜಕೀಯವಾಗಿಯೂ ಒಂದಷ್ಟು ಅನುಭವವಿತ್ತು.

ಒಂದೆಡೆ ಸುಮತಿಯನ್ನು ಅಧ್ಯಕ್ಷೆ ಸ್ಥಾನದಲ್ಲಿ ಕೂರಿನ ಅಧಿಕಾರವನ್ನು ತಾನೇ ನಡೆಸುತ್ತಿದ್ದ ಗೋವರ್ಧನ್‌ಗೆ ಒಪ್ಪಂದದಂತೆ 20 ತಿಂಗಳ ಬಳಿಕ ಅಧ್ಯಕ್ಷೆ ಸ್ಥಾನವನ್ನು ಸುಮತಿಯು ಉಪಾಧ್ಯಕ್ಷೆಯಾಗಿದ್ದ ಸೌಭಾಗ್ಯರಿಗೆ ಬಿಟ್ಟುಕೊಡಬೇಕಾಗಿತ್ತು. ಅಧಿಕಾರ ಬಿಟ್ಟು ಕೊಡುವಲ್ಲಿ ಸುಮತಿಗೆ ಯಾವುದೇ ಬೇಸರವಿಲ್ಲವಾದರೂ ಗ್ರಾಪಂ ಸದಸ್ಯ ಗೋವರ್ಧನನಿಗೆ ಮಾತ್ರ ಬುಡಕ್ಕೆ ಮೆಣಸು ಇಟ್ಟಂತಾಗಿತ್ತು. ಅದಕ್ಕೆ ಕಾರಣವೂ ಇತ್ತು. ಅದು ಏನೆಂದರೆ ಇನ್ನು ಸ್ವಲ್ಪ ದಿನಗಳ ಕಾಲ ಅಧಿಕಾರದಲ್ಲಿ ಸುಮತಿ ಇದ್ದರೆ ಈತನಿಗೆ ಒಂದಷ್ಟು ಹಣವನ್ನು ಗುಳುಂ ಮಾಡುವ ಅಥವಾ ಕಮೀಷನ್ ಕೀಳುವ ಅವಕಾಶವಿತ್ತು. ಆದರೆ ಅಧಿಕಾರ ಬದಲಾವಣೆ ಆಗಿ ಅಧ್ಯಕ್ಷೆ ಸ್ಥಾನಕ್ಕೆ ಸೌಭಾಗ್ಯ ಬಂದರೆ ಗೋವರ್ಧನ್ ಆಟ ನಡೆಯುವುದಿಲ್ಲ. ಇದರಿಂದ ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗುತ್ತದೆಯಲ್ಲ ಎಂಬ ಆತಂಕ ಕಾಡಲಾರಂಭಿಸಿತ್ತು.




ಎಸ್ಪಿ ವಿಷ್ಣುವರ್ಧನ

ಇಷ್ಟಕ್ಕೂ ಬರಬೇಕಾಗಿದ್ದ ಆ ಹಣ ಯಾವುದು? ಎಂಬುದನ್ನು ನೋಡುತ್ತಾ ಹೋದರೆ ಒಂದಷ್ಟು ಮಾಹಿತಿ ಹೊರ ಬರುತ್ತವೆ. ಅದು ಏನೆಂದರೆ ಕೆಲವೇ ತಿಂಗಳಲ್ಲಿ ದೇವರಸನಹಳ್ಳಿ ಗ್ರಾಮಪಂಚಾಯಿತಿಗೆ ಅನುದಾನವಾಗಿ ಜಿಲ್ಲಾ ಪಂಚಾಯಿತಿಯಿಂದ 15ನೇ ಹಣಕಾಸು ಆಯೋಗದ ಅಡಿ 1.20 ಕೋಟಿ ಅನುದಾನ ಬಿಡುಗಡೆ ಆಗುವುದರಲ್ಲಿತ್ತು. ಈ ಹಣ ಬರುವ ವೇಳೆಗೆ ತನ್ನ ಸಂಬಂಧಿ ಸುಮತಿ ಅವರು ಗ್ರಾಪಂ ಅಧ್ಯಕ್ಷ ಸ್ಥಾನದಿಂದ ಇಳಿಯುವುದರಿಂದ ಈ ಹಣದಲ್ಲಿ ತಮಗೆ ಯಾವುದೇ ಕಮೀಷನ್ ಸಿಗುವುದಿಲ್ಲ. ಅಲ್ಲದೆ ಅನುದಾನ ಬಳಕೆ ವಿಚಾರಕ್ಕೆ ಸಂಬಂಧಿಸಿದಂತೆ ತನ್ನ ಆಟ ನಡೆಯಲ್ಲ. ಹೀಗಾಗಿ ಸುಮತಿ ಅವರನ್ನೇ ಮುಂದುವರೆಸಬೇಕೆಂಬ ತೀರ್ಮಾನಕ್ಕೆ ಗೋವರ್ಧನ್ ಬಂದು ಬಿಟ್ಟಿದ್ದನು.

ಗೋವರ್ಧನ್ ಹೇಳಿದಂತೆ ಸುಮತಿಯೇ ಅಧ್ಯಕ್ಷೆಯಾಗಿ ಮುಂದುವರೆಯ ಬೇಕಾದರೆ ಉಪಾಧ್ಯಕ್ಷೆಯಾಗಿದ್ದ ಸೌಭಾಗ್ಯವಾಗಲೀ ಅವರ ಪತಿ ನಂಜುಂಡಸ್ವಾಮಿಯಾಗಲೀ ಸುತರಾಂ ಒಪ್ಪಿರಲಿಲ್ಲ. ಒಪ್ಪಂದದಂತೆ ಅಧಿಕಾರ ಸ್ಥಾನ ಬಿಟ್ಟುಕೊಡುವಂತೆ ಪಟ್ಟು ಹಿಡಿದಿದ್ದರು. ಇದು ಗೋವರ್ಧನ್‌ಗೆ ನುಂಗಲಾರದ ತುಪ್ಪವಾಗಿ ಪರಿಣಮಿಸಿತ್ತು. ಮುಂದೇನು ಮಾಡುವುದೆಂದು ತೋಚದೆ ಹುಚ್ಚನಾಗಿದ್ದನು. ಆದರೆ ಏನಾದರೊಂದು ಮಸಲತ್ತು ಮಾಡಲೇಬೇಕೆಂದ ನಿರ್ಧಾರಕ್ಕೂ ಬಂದು ಬಿಟ್ಟನು. ಈ ಸಲ ಏನಾದರೂ ಮಾಡಿ ಸುಮತಿಯನ್ನು ಅಧ್ಯಕ್ಷೆ ಸ್ಥಾನದಲ್ಲಿ ಉಳಿಸದೇ ಹೋದರೆ ಜಿಪಂನಿಂದ ಬಂದಿರುವ ಅನುದಾನದಲ್ಲಿ ತನಗೇನು ಸಿಗಲ್ಲ ಆದ್ದರಿಂದ ಸೌಭಾಗ್ಯ ಅಧ್ಯಕ್ಷೆ ಸ್ಥಾನ ಒಪ್ಪಿಕೊಳ್ಳದಂತೆ ಏನಾದರೊಂದು ಮಾಡಲೇಬೇಕೆಂಬ ತೀರ್ಮಾನಕ್ಕೆ ಬಂದು ಬಿಟ್ಟನು.

ಒಳ್ಳೆಯ ಮಾತಲ್ಲಿ ಹೇಳಿದರೆ ಸೌಭಾಗ್ಯ ಕೇಳಲ್ಲ ಅದಕ್ಕಿಂತ ಹೆಚ್ಚಾಗಿ ಆಕೆಗೆ ಬೆನ್ನೆಲುಬಾಗಿ ನಿಂತಿರುವುದು ಆಕೆಯ ಗಂಡ ನಂಜುಂಡಸ್ವಾಮಿ. ಆತನೇ ಎಲ್ಲವನ್ನು ಮಾಡಿಸುತ್ತಿದ್ದಾನೆ. ಹೀಗಾಗಿ ಅವನನ್ನೇ ಮುಗಿಸಿಬಿಟ್ಟರೆ ಸೌಭಾಗ್ಯ ಆ ನೋವಿನಲ್ಲಿ ರಾಜಕೀಯದಿಂದ ದೂರ ಉಳಿದು ಬಿಡುತ್ತಾಳೆ. ಅಷ್ಟೇ ಅಲ್ಲದೆ ಸುಮತಿಯ ತಂಟೆಗೂ ಬರಲ್ಲ. ನಾವು ನೆಮ್ಮದಿಯಾಗಿರಬಹುದೆಂದು ಆಲೋಚನೆ ಮಾಡಿದ್ದನು. ಆದರೆ ನಂಜುಂಡಸ್ವಾಮಿಯನ್ನು ಮುಗಿಸುವುದು ಹೇಗೆ? ಹೀಗೆ ಯೋಚಿಸುತ್ತಿರುವಾಗ ತಾನು ಹಣ ಕೊಟ್ಟರೆ ಸಹಾಯ ಮಾಡಬಲ್ಲ ನಾಲ್ವರನ್ನು ಕರೆಯಿಸಿಕೊಂಡಿದ್ದನು.

ಪಿಸ್ತೂಲ್ ಮಾರಾಟ ಪ್ರಕರಣದಲ್ಲಿ ಭಾಗಿಯಾಗಿ ಜೈಲಿಗೆ ಹೋಗಿ ಬಂದಿದ್ದ ನಂಜನಗೂಡಿನ ರೌಡಿಶೀಟರ್ ಧನರಾಜ್ ಭೋಲಾ ಸೇರಿದಂತೆ ನೀಲಕಂಠ ನಗರ ನಿವಾಸಿ ಜಾಹಿರ್ (25), ಹಳ್ಳದಕೇರಿ ನಿವಾಸಿ ಮಣಿಕಂಠ (24), ಕೆಎಚ್‌ಬಿ ಕಾಲೋನಿ ನಿವಾಸಿ ಮಹೇಂದ್ರ (25) ಎಂಬುವರನ್ನು ಕರೆಯಿಸಿಕೊಂಡು ಅವರಿಗೆ ಚೆನ್ನಾಗಿ ತಿನ್ನಿಸಿ ಕುಡಿಸಿ ತನ್ನ ಮನದಾಳದ ವಿಚಾರವನ್ನು ಅವರೊಂದಿಗೆ ಹೇಳಿದ್ದನು. ನಿಮಗೆ ತಿನ್ನುವಷ್ಟು, ಕುಡಿಯುವಷ್ಟು ಕೊಡುವುದಲ್ಲದೆ ಕೈಗೆ ಒಂದಿಷ್ಟು ಹಣವನ್ನು ನೀಡುತ್ತೇನೆ. ನೀವು ನಂಜುಂಡಸ್ವಾಮಿಯನ್ನು ರಸ್ತೆಬದಿಯ ನಿರ್ಜನ ಪ್ರದೇಶದಲ್ಲಿ ಎತ್ತಿ ಬಿಡಿ.



ಪ್ರಮುಖ ಆರೋಪಿ ಗೋವರ್ಧನ್

ಮೇಲ್ನೋಟಕ್ಕೆ ಅದು ಎಕ್ಸಿಡೆಂಟ್ ಅಂಥ ಕಾಣುವಂತಿದ್ದರೆ ಜನ ಹಿಟ್ ಅಂಡ್ ರನ್ ಅಂಥ ನಂಬುತ್ತಾರೆ. ನಂಜಂಡಸ್ವಾಮಿ ಕಥೆ ಮುಗಿಸಿದರೆ ಆತನ ಹೆಂಡತಿ ಸೌಭಾಗ್ಯ ತೆಪ್ಪಗಾಗುತ್ತಾಳೆ ರಾಜಕೀಯದ ಸಹವಾಸವೇ ಬೇಡ ಅಂಥ ಸುಮ್ಮನಾಗುತ್ತಾಳೆ. ಆಗ ನಾನೇ ರಾಜನಾಗುತ್ತೇನೆ. ಇಡೀ ಗ್ರಾಮಪಂಚಾಯಿತಿ ಅಧಿಕಾರ ನನ್ನ ಕೈನಲ್ಲಿರುತ್ತದೆ. ನೀವು ಏನು ಹೆದರಬೇಡಿ ಎಂದಿದ್ದಾರೆ. ಹೊಟ್ಟೆಗೆ ಹೆಂಡ ಇಳಿಸಿಕೊಂಡವರು ನೀನೇನು ಹೆದರಬೇಡಣ್ಣ ನಾವು ಆ ಕೆಲಸ ಮಾಡುತ್ತೇವೆ ಎಂದು ಒಪ್ಪಿಕೊಂಡಿದ್ದಾರೆ. ಆ ನಂತರ ನಂಜುಂಡಸ್ವಾಮಿಯನ್ನು ಹೇಗೆ ಮತ್ತು ಎಲ್ಲಿ ಮುಗಿಸಬೇಕೆಂಬುದರ ಬಗ್ಗೆ ಚರ್ಚೆ ಮಾಡಿದ್ದು, ಅಲ್ಲಿಯೇ ಕೂತು ಸ್ಕೆಚ್ ಹಾಕಿದ್ದಾರೆ. ಅದರಂತೆ ಅ.5ರಂದು ನಂಜುಂಡಸ್ವಾಮಿಯನ್ನು ಮುಗಿಸಲು ಸಂಚು ರೂಪಿಸಿದ್ದರು. ಆದರೆ ಆ ದಿನ ಮಳೆ

☞ 14



ಆರೋಪಿಗಳಾದ ಧನರಾಜ್ ಭೋಲಾ, ಜಾಹಿರ್, ಮಹೇಂದ್ರ ಹಾಗೂ ಮಣಿಕಂಠ

# ಅಕ್ರಮ ಸಂಬಂಧಕ್ಕೆ ಅಡ್ಡಿಯಾಗಿದ್ದ ಪ್ರಿಯತಮೆಯ ಕತ್ತು ಕೊಯ್ದು ಕೊಲೆ ಮಾಡಿದ ಪ್ರಿಯಕರ!


ರೂಪಾ ಬದುಕಿದ್ದಾಗ

**ಅಕ್ರಮ ಸಂಬಂಧವನ್ನು ಎರಡು ವರ್ಷಗಳಿಂದ ಇಟ್ಟುಕೊಂಡಿದ್ದ ಪ್ರೇಮಿಗಳಿಬ್ಬರ ನಡುವೆ ಹಣಕಾಸಿನ ವಿಚಾರದಲ್ಲಿ ಉಂಟಾದ ಮನಸ್ತಾಪದಿಂದ ಸ್ವಲ್ಪ ದಿನಗಳ ಕಾಲ ದೂರವಾಗಿದ್ದರು. ಇದರ ನಡುವೆ ಪ್ರಿಯತಮೆ ಬೇರೆ ಗಂಡಸಿನೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿರುವ ಬಗ್ಗೆ ತಿಳಿದುಕೊಂಡ ಪ್ರಿಯಕರ ಮಾವಿನ ತೋಪಿನಲ್ಲಿ ಹಸು ಮೇಯಿಸುತ್ತಿದ್ದ ಪ್ರಿಯತಮೆಯನ್ನು ಹುಡುಕಿಕೊಂಡು ಹೋಗಿ, ಬೇರೆಯವನೊಂದಿಗಿನ ಸಂಬಂಧವನ್ನು ಬಿಟ್ಟು ತನ್ನೊಂದಿಗೆ ಸುಖವಾಗಿ ಇರುವಂತೆ ಹೇಳಿದಕ್ಕೆ ಪ್ರಿಯತಮೆ ಒಪ್ಪದ ಕಾರಣ ಆಕೆ ಹುಲ್ಲು ಕೊಯ್ಯಲು ತಂದಿದ್ದ ಕುಡಗೋಲಿನಿಂದ ಕತ್ತು ಕೊಯ್ದು ಪರಾರಿಯಾಗಿದ್ದ ಆರೋಪಿ ಪ್ರಿಯಕರನನ್ನು ಶ್ರೀನಿವಾಸಪುರ ಪೊಲೀಸರು ಬಂಧಿಸಿದ್ದಾರೆ.**


ಆರೋಪಿ ಆನಂದಪ್ಪ

**ಕೋಲಾರ**
✍ ಕೋಲಾರ ಮಂಜು


ಕೊಲೆಯಾದ ರೂಪಾ

**ಚಿ**ಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು, ಕಸಬಾ ಹೋಬಳಿ ನೆಡಗುರ್ಕಿ ಗ್ರಾಮದ ವಾಸಿ ಲೇಟ್ ನಾರಾಯಣಸ್ವಾಮಿ ರವರ ಮಗ ಕೃಷಿಕ ನಾಗರಾಜ್ ಎನ್ನುವವರು ನವೆಂಬರ್ 4ರಂದು ರಾತ್ರಿ 10 ಗಂಟೆಗೆ ಕೋಲಾರ ಜಿಲ್ಲೆ ಶ್ರೀನಿವಾಸಪುರ ಪೊಲೀಸ್ ಠಾಣೆಗೆ ಹಾಜರಾಗಿ ಸುಮಾರು 20 ವರ್ಷಗಳ ಹಿಂದೆ ನನ್ನ ತಂಗಿಯಾದ ರೂಪಾರವರನ್ನು ಶ್ರೀನಿವಾಸಪುರ ತಾಲ್ಲೂಕಿನ ಪಾಳ್ಯ ಗ್ರಾಮದ ವಾಸಿ ಕೃಷಿಕ ಶ್ರೀರಾಮರೆಡ್ಡಿರವರೊಂದಿಗೆ ಮದುವೆ ಮಾಡಿಕೊಟ್ಟಿರುತ್ತೇವೆ. ಇವರಿಗೆ ವಸಂತ ಕುಮಾರ್ ಮತ್ತು ಹರ್ಷಿತಾ ಎಂಬ ಇಬ್ಬರು ಮಕ್ಕಳಿದ್ದು, ಇವರು ವ್ಯವಸಾಯ ಮಾಡಿಕೊಂಡು ತಂಗಿ ಮತ್ತು ಭಾವ ತುಂಬಾ ಚೆನ್ನಾಗಿ ಜೀವನ ಮಾಡಿಕೊಂಡಿರುತ್ತಾರೆ.

ಈ ದಿನ ಶ್ರೀರಾಮರೆಡ್ಡಿರವರು ನಮ್ಮ ಊರಾದ ನೆಡಗುರ್ಕಿ ಗ್ರಾಮದಲ್ಲಿ ಕ್ಯಾಪ್ಸಿಕಮ್ ಕೀಳಲು ಬಂದಿದ್ದು ಸಂಜೆ 6 ಗಂಟೆ ಸಮಯದಲ್ಲಿ ಶ್ರೀರಾಮರೆಡ್ಡಿರವರ ಮಗಳು ಹರ್ಷಿತಾರವರು ಫೋನ್ ಮಾಡಿ ಮನೆಯಲ್ಲಿ ತಾಯಿ ಇಲ್ಲವೆಂದು ತಿಳಿಸುತ್ತಾರೆ. ತಕ್ಷಣ ಶ್ರೀರಾಮರೆಡ್ಡಿರವರು ಪತ್ನಿ ರೂಪಾರವರಿಗೆ ಫೋನ್ ಮಾಡಿದಾಗ ಅವರ ಮೊಬೈಲ್ ಸ್ವಿಚ್ ಆಫ್ ಆಗಿದ್ದು, ನಂತರ ಶ್ರೀರಾಮರೆಡ್ಡಿರವರು ಅವರ ಚಿಕ್ಕಪ್ಪನ ಮಗ ಬಾಬುಪ್ರಸಾದ್‌ರವರಿಗೆ ಫೋನ್ ಮಾಡಿ, ಪತ್ನಿ ರೂಪಾರವರು ಮನೆಯಿಂದ ಹೊರ ಹೋದವರು ರಾತ್ರಿ ವಾಪಸ್ಸು ಬಂದಿಲ್ಲ. ನೀವು ಎಲ್ಲರೂ ಸೇರಿಕೊಂಡು ಹುಡುಕಾಡಿ ನಾನು ನೆಡಗುರ್ಕಿಯಿಂದ ಬರುತ್ತಿರುವುದಾಗಿ ಹೇಳಿದರು. ಅದರಂತೆ ಶ್ರೀರಾಮರೆಡ್ಡಿರವರು ನೆಡಗುರ್ಕಿಯಿಂದ ಪಾಳ್ಯಕ್ಕೆ ಬಂದು 7.30 ಗಂಟೆ ಸಮಯದಲ್ಲಿ ಗ್ರಾಮದ ಹೊರಭಾಗದಲ್ಲಿರುವ ಮಾವಿನ ತೋಪು ಮತ್ತು ಸುತ್ತಮುತ್ತ ಹುಡುಕಾಡುತ್ತಿರುವಾಗ, ಬೈರೆಡ್ಡಿ ಮತ್ತು ವೆಂಕಟೇಶ್‌ರೆಡ್ಡಿರವರ ಜಮೀನಿನ ಮಧ್ಯೆ ಇರುವ ಕಾಲುವೆಯಲ್ಲಿ ತನ್ನ ತಂಗಿ ರೂಪಾರವರು ಶವವಾಗಿ ಬಿದ್ದಿದ್ದು, ತಕ್ಷಣ ಎಲ್ಲರೂ ಹತ್ತಿರಕ್ಕೆ ಹೋಗಿ ಬ್ಯಾಟರಿ ಬಿಟ್ಟು ನೋಡಲಾಗಿ ಯಾರೋ ವ್ಯಕ್ತಿಗಳು ತನ್ನ ತಂಗಿಯ ಕುತ್ತಿಗೆಯನ್ನು ಕೊಯ್ದು ಕೊಲೆ ಮಾಡಿ ಕಾಲುವೆಯಲ್ಲಿ ಬಿಸಾಡಿರುತ್ತಾರೆ. ಆದ ಕಾರಣ ನನ್ನ ತಂಗಿಯ ಕೊಲೆಗೆ ಕಾರಣರಾದ ವ್ಯಕ್ತಿಗಳನ್ನು ಪತ್ತೆ ಮಾಡಿ ಕಾನೂನು ಕ್ರಮ ಜರುಗಿಸಬೇಕೆಂದು ಕೋರಿ ನೀಡಿರುವ ದೂರಿನ ಮೇರೆಗೆ ಪಿಎಸ್‌ಐ ಜಯರಾಮ್‌ರವರು ಅ.ಸಂ. 330/2024 ಬಿಎಸ್‌ಎನ್ (ವಿ/ಎಸ್ 103(1) 3(5) 2023) ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿರುತ್ತಾರೆ.

ಸ್ಥಳಕ್ಕೆ ಎಸ್ಪಿ ನಿಖಿಲ್, ಎಎಸ್ಪಿಗಳಾದ ರವಿಶಂಕರ್, ಜಗದೀಶ್, ಡಿವೈಎಸ್ಪಿ ನಂದಕುಮಾರ್, ಪಿಐ ಮೆಹಬೂಬ್ ಬಾಷಾ ಗೊರವನಕೊಳ್ಳ, ಬೆರಳಚ್ಚು ತಜ್ಞರು, ಶ್ವಾನದಳ ಹಾಗೂ ಸಿಬ್ಬಂದಿ ವರ್ಗದವರು ಭೇಟಿ ನೀಡಿ ಪರಿಶೀಲಿಸಿದ ನಂತರ ಪಂಚರ ಸಮಕ್ಷಮದಲ್ಲಿ ಮಹಜರ್ ನಡೆಸಿದ ಮೇಲೆ ಶವವನ್ನು ಶ್ರೀನಿವಾಸಪುರ ಸರ್ಕಾರಿ ಆಸ್ಪತ್ರೆಯ ಶವಗಾರಕ್ಕೆ ಸಾಗಿಸಲಾಯಿತು. ಹಸು ಮೇಯಿಸಲು ಗ್ರಾಮದ ಹೊರ ವಲಯದಲ್ಲಿ ಹೋಗಿದ್ದಾಗ ರೂಪಾರವರನ್ನು ಕೊಲೆ ಮಾಡಿ ಪರಾರಿಯಾಗಿರುವ ಆರೋಪಿಗಳು ಯಾರೆಂದು ಪತ್ತೆ ಮಾಡಲು ಎಸ್ಪಿ ನಿಖಿಲ್ ಮತ್ತು ಡಿವೈಎಸ್ಪಿ ನಂದಕುಮಾರ್‌ರವರ ಮಾರ್ಗದರ್ಶನದಲ್ಲಿ ಪಿಐ ಮೆಹಬೂಬ್ ಬಾಷಾ ಗೊರವನಕೊಳ್ಳರವರ ನೇತೃತ್ವದಲ್ಲಿ ಪಿಎಸ್‌ಐ ಜಯರಾಮ್, ಎಎಸ್‌ಐ ಶ್ರೀನಿವಾಸ್, ಸಿಬ್ಬಂದಿಯವರಾದ ಮಂಜುನಾಥ್, ಕಿರಣ್‌ಕುಮಾರ್, ಆನಂದ್, ಸಂತೋಷ್, ಹರೀಶ್, ಶರತ್, ಚಂದ್ರಶೇಖರ್, ಸುಬಾನ್ ಮುಂತಾದವರ ತಂಡವನ್ನು ರಚಿಸಲಾಯಿತು.


ಎಸ್ಪಿ ಬಿ. ನಿಖಿಲ್


ಎಎಸ್ಪಿ ರವಿಶಂಕರ್


ಡಿವೈಎಸ್ಪಿ ನಂದಕುಮಾರ್


ಪಿಐ ಮೆಹಬೂಬ್ ಬಾಷಾ ಗೊರವನಕೊಳ್ಳ

**ಅಕ್ರಮ ಸಂಬಂಧ ವಿರೋಧಿಸಿದಕ್ಕೆ ಕೊಲೆ**

ಪಿಐ ಮೆಹಬೂಬ್ ಬಾಷಾ ಗೊರವನಕೊಳ್ಳರವರ ನೇತೃತ್ವದ ಕ್ರೈಂ ತಂಡವು ಮೃತ ರೂಪಾರವರ ಬಗ್ಗೆ ಪೂರ್ಣ ವಿವರವನ್ನು ಮೃತಳ ಗಂಡ ಶ್ರೀರಾಮರೆಡ್ಡಿರವರ ಬಳಿ ಕೇಳಲಾಗಿ ಪಾಳ್ಯ ಗ್ರಾಮದ ವಾಸಿ ಹನುಮಪ್ಪನ ಮಗ ಕೂಲಿ ಕೆಲಸ ಮಾಡುವ ಆನಂದಪ್ಪ (45) ಹಾಗೂ ನನ್ನ ಪತ್ನಿ ರೂಪಾ ನಡುವೆ ಹಣದ ವ್ಯವಹಾರ ಇತ್ತು. ಕೊಲೆ ಯಾವ ವಿಚಾರಕ್ಕೆ ನಡೆದಿದೆ ಎಂಬುವುದು ತನಿಖೆಯಿಂದ ತಿಳಿಯಬೇಕಿದೆ ಎಂದು ಹೇಳಿದರು. ಗ್ರಾಮದಲ್ಲಿ ಕೆಲವರ ಬಳಿ ಮಾಹಿತಿ ಕಲೆ ಹಾಕಿದ ಪೊಲೀಸರು ಮೃತ ಮಹಿಳೆ ರೂಪಾರವರ ಮೊಬೈಲನ್ನು ವಶಕ್ಕೆ ಪಡೆದು ವಿವರಗಳನ್ನು ಪರಿಶೀಲಿಸಿದ್ದಾಗ ಸಿಕ್ಕಿದ ಸುಳಿವು ಪಾಳ್ಯ ಗ್ರಾಮದ ಆನಂದಪ್ಪ, ರೂಪಾಳನ್ನು ಕೊಲೆ ಮಾಡಿರಬೇಕೆಂಬ ಸಾಕ್ಷಿ ಆಧಾರಗಳು ಇರುವುದರಿಂದ ಆತನ ಪತ್ತೆಗೆ ಮುಂದಾದರು. ಪೊಲೀಸ್ ಬಾತ್ಮೀದಾರರು ನೀಡಿದ ಸುಳಿವಿನ ಮೇರೆಗೆ ನವೆಂಬರ್

☞12


ಮೃತದೇಹವನ್ನು ಪರಿಶೀಲಿಸುತ್ತಿರುವ ಎಸ್ಪಿರವರು


ಹಳ್ಳದ ನೀರಿನಿಂದ ಕುಡುಗೋಲನ್ನು ತೆಗೆದುಕೊಡುತ್ತಿರುವ ಆರೋಪಿ


ಕೊಲೆ ಮಾಡಿದ ಸ್ಥಳವನ್ನು ತೋರಿಸುತ್ತಿರುವ ಆರೋಪಿ



ರಾಜ್ಯದಲ್ಲಿ ದೋಸ್ತಿ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಕಾಂಗ್ರೆಸ್ ಮುಂದೆ ಮಕಾಡೆ ಮಲಗಿವೆ. ಇದಕ್ಕೆ ಕಾರಣಗಳು ಒಂದೆಡೆ ಪುತ್ರ ವ್ಯಾಮೋಹ ಮತ್ತು ಒಳಜಗಳಗಳೇ ಹೊರತು ಎದುರಾಳಿಗಳಲ್ಲ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಆಡಳಿತರೂಢ ಕಾಂಗ್ರೆಸ್ ಪಕ್ಷವನ್ನು ಹಣಿಯಲು ಬೇಕಾದಷ್ಟು ಅಸ್ತ್ರಗಳಿದ್ದರೂ ಅದನ್ನು ಬಳಸುವಲ್ಲಿ ವಿಫಲವಾಯಿತಾ? ಅಥವಾ ನಾಯಕರ ನಡುವಿನ ಆಂತರಿಕ ಜಂಗಿಕುಸ್ತಿ ಕಾಂಗ್ರೆಸ್ ನ್ನು ಗೆಲ್ಲಿಸಿಕೊಟ್ಟಿತಾ? ಎಂಬ ಪ್ರಶ್ನೆಗಳು ಹುಟ್ಟಿಕೊಳ್ಳುತ್ತಿದ್ದು ಇದು ಹೀಗೆಯೇ ಮುಂದುವರೆದರೆ ಜೆಡಿಎಸ್, ಬಿಜೆಪಿ ಪಕ್ಷಗಳ ಗತಿ ಏನಾಗಬಹುದೋ ಗೊತ್ತಿಲ್ಲ.



## ರಾಜ್ಯದಲ್ಲಿ ಫಲಿಸಿದ ಸಿದ್ದು, ಡಿಕೆಶಿ ರಾಜಕೀಯ ತಂತ್ರ

# ಮಕಾಡೆ ಮಲಗಿದ ದೋಸ್ತಿಗಳು!

✍ ಬಿ.ಎಂ. ಲವಕುಮಾರ್

ಇವತ್ತು ಉಪಚುನಾವಣೆ ಆಡಳಿತರೂಢ ಕಾಂಗ್ರೆಸ್ ನ್ನು ಗಟ್ಟಿಗೊಳಿಸಿದೆ. ಹಾಗೆಯೇ ಜೆಡಿಎಸ್ ಮತ್ತು ಬಿಜೆಪಿಯ ಪ್ರಾಬಲ್ಯಕ್ಕೂ ಪೆಟ್ಟುಕೊಟ್ಟಿದೆ. ಅಯ್ಯೋ ಒಂದು ಸೀಟು ತಾನೆ ಕಳೆದುಕೊಂಡಿದ್ದು ಅದರಲ್ಲೇನು ಹೋಯಿತು ಎಂದು ಎರಡು ಪಕ್ಷಗಳು ತೆಪ್ಪಗೆ ಕುಳಿತರೆ ಮುಂದಿನ ಮೂರೂವರೆ ವರ್ಷಗಳ ಅವಧಿಯಲ್ಲಿ ಒಂದಷ್ಟು ಶಾಸಕರುಗುಳೇ ಹೋದರೂ ಅಚ್ಚರಿಯಿಲ್ಲ. ಇಲ್ಲಿ ಬಿಜೆಪಿ ರಾಷ್ಟ್ರೀಯ ಪಕ್ಷ ಅದು ಮುಗ್ಗರಿಸಿದರೂ ಮತ್ತೆ ಎದ್ದು ನಿಲ್ಲುವ ಚೈತನ್ಯ ಬೆಳೆಸಿಕೊಳ್ಳಬಹುದು. ಅದಕ್ಕೆ ಬೇಕಾದ ಸಂಪನ್ಮೂಲಗಳಿವೆ. ಭಿನ್ನಮತ ಸದ್ಯಕ್ಕೆ ಕಂಡು ಬಂದರೂ ಅದೆಲ್ಲವನ್ನು ನಿಭಾಯಿಸುವ ಶಕ್ತಿ ಕೇಂದ್ರ ನಾಯಕರಿಗೆ ಇದೆ. ಆದರೆ ಜೆಡಿಎಸ್ ಪರಿಸ್ಥಿತಿ ಹಾಗಿಲ್ಲ.



ಅದು ಕ್ರಿಟಿಕಲ್ ನಲ್ಲಿದೆ.

ಈಗಾಗಲೇ ಜೆಡಿಎಸ್ ನ ಕೋರ್ ಕಮಿಟಿ ಅಧ್ಯಕ್ಷ, ಶಾಸಕ, ಹಿರಿಯ ನಾಯಕ ಜಿ.ಟಿ. ದೇವೇಗೌಡರೇ ಅಸಮಾಧಾನಗೊಂಡಿದ್ದಾರೆ. ಅವರು ಚುನಾವಣಾ ಪ್ರಚಾರಕ್ಕೆ ಬರಲೇ ಇಲ್ಲ, ಜತೆಗೆ ಅಸಮಾಧಾನವನ್ನು ಬಹಿರಂಗವಾಗಿಯೇ ಹೊರಹಾಕಿದ್ದು, ಅವರು ಸದ್ಯಕ್ಕೆ ಜೆಡಿಎಸ್‌ನ ಶಾಸಕರಾಗಿದ್ದರೂ ಕಾಂಗ್ರೆಸ್‌ನ ನೆರಳಲ್ಲಿದ್ದಾರೆ ಎನ್ನುವುದನ್ನು ಒಪ್ಪಿಕೊಳ್ಳಲೇ ಬೇಕಾಗಿದೆ. ಈಗಿನ ಪರಿಸ್ಥಿತಿಯಲ್ಲಿ ದೇವೇಗೌಡರ ಕುಟುಂಬದ ಬಗ್ಗೆ ಇದ್ದ ಒಲವು ನಿಧಾನ ವಾಗಿ ಕಳೆದು ಹೋಗಿದೆ. ಅದಕ್ಕೆ ಕಾರಣ ರೇವಣ್ಣ ಕುಟುಂಬದ ಮೇಲೆ ಬಂದಿರುವ ಆರೋಪಗಳು ಒಂದೆಡೆಯಾದರೆ, ಮತ್ತೊಂದೆಡೆ ಕುಟುಂಬ ರಾಜ







ಕಾರಣವೂ ಕಾರಣವಾಗಿದೆ.

ಸದ್ಯಕ್ಕೆ ಅಳಿದುಳಿದ 18 ಶಾಸಕರ ಪೈಕಿ ಹೆಚ್.ಡಿ. ರೇವಣ್ಣ ಅವರನ್ನು ಹೊರತುಪಡಿಸಿ ಉಳಿದ 17 ಶಾಸಕರು ಮುಂದಿನ ಚುನಾವಣೆ ತನಕ ಜೆಡಿಎಸ್‌ನಲ್ಲಿ ಉಳಿತಾರಾ? ಅಥವಾ ಅಸ್ತಿತ್ವ ಹುಡುಕಿಕೊಂಡು ಬೇರೆ ಪಕ್ಷಗಳತ್ತ ಮುಖ ಮಾಡುತ್ತಾರಾ? ಸದ್ಯಕ್ಕೆ ಗೊಂದಲದಲ್ಲಿದ್ದಾರೆ. ಇನ್ನು ಮೂರೂವರೆ ವರ್ಷಗಳಲ್ಲಿ ಜೆಡಿಎಸ್ ಪಕ್ಷವನ್ನು ಕಟ್ಟಿ ಬೆಳೆಸುವವರು ಯಾರು? ದೇವೇಗೌಡರ ಕುಟುಂಬದ ಹೊರತಾಗಿ ಪಕ್ಷ ಸಂಘಟನೆ ಮಾಡುವ ನಾಯಕರು ಯಾರಿದ್ದಾರೆ? ಈಗಾಗಲೇ ಬಿಜೆಪಿ ಜತೆಗೆ ಮೈತ್ರಿ ಮಾಡಿ ಕೊಂಡಿದ್ದರೂ ಎರಡು ಪಕ್ಷದಲ್ಲಿನ ಆಂತರಿಕ ಕಚ್ಚಾಟಗಳು ಮುಂದಿನ ದಿನಗಳಲ್ಲಿ ಸರಿ ಹೋಗದಿದ್ದರೆ ಆಗ ಏನಾಗ ಬಹುದು? ಹೀಗೆ ಅಸ್ತಿತ್ವದ ಪ್ರಶ್ನೆಗಳು ಹುಟ್ಟಿಕೊಳ್ಳುತ್ತಾ ಹೋಗುತ್ತಿವೆ.

ಅದು ಆಚೆಗಿರಲಿ ಇದೆಲ್ಲದರ ನಡುವೆ ದೋಸ್ತಿ ಗಳನ್ನು ಮಣಿಸಿ ಕಾಂಗ್ರೆಸ್ ವಿಧಾನಸಭಾ ಉಪ ಚುನಾವಣೆಯಲ್ಲಿ ಮೂರು ಕ್ಷೇತ್ರಗಳಲ್ಲಿ ಗೆಲುವು ಸಾಧಿ ಸಿದ್ದು ನಿಜಕ್ಕೂ ಮೆಚ್ಚುವಂತಹದ್ದೇ... ರಾಜಕೀಯವಾಗಿ ತಂತ್ರಗಳು ಇರುವುದು ಸಾಮಾನ್ಯ. ಅದನ್ನು ಬಳಸಿ ದೋಸ್ತಿಗಳಿಗೆ ನೀರು ಕುಡಿಸುವಲ್ಲಿ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ಕಾರ್ಯ ಚಟುವಟಿಕೆಗಳು ಅದ್ಭುತವೇ...

### ಆರೋಪಗಳ ನಡುವೆ ಎದ್ದು ನಿಂತ ಕಾಂಗ್ರೆಸ್

ರಾಜ್ಯದಲ್ಲಿ ಹಗರಣಗಳ ಆರೋಪ, ಪ್ರತಿಭಟನೆ, ಹೋರಾಟಗಳ ನಡುವೆಯೂ ಆಡಳಿತರೂಢ ಕಾಂಗ್ರೆಸ್ ನ್ನು ಮತದಾರರು ಬೆಂಬಲಿಸಿದ್ದಾರೆ. ಸರ್ಕಾರದ ಗ್ಯಾರಂಟಿ ಯೋಜನೆಗಳು ಫಲಕೊಟ್ಟಿದೆ ಎನ್ನುವುದನ್ನು ಉಪ ಚುನಾವಣೆಯಲ್ಲಿ ಮೂರಕ್ಕೆ ಮೂರು ಸ್ಥಾನವನ್ನು ಗೆಲ್ಲಿಸಿ ಕೊಂಡು, ತಮ್ಮ ಒಂದು ಸ್ಥಾನವನ್ನು ಉಳಿಸಿಕೊಳ್ಳುವುದಲ್ಲದೆ, ಇನ್ನೆರಡು ಸ್ಥಾನವನ್ನು ಬಗಲಿಗೆ ಹಾಕಿಕೊಳ್ಳುವುದರ ಮೂಲಕ ಕಾಂಗ್ರೆಸ್ ಇನ್ನಷ್ಟು ಬಲ ವಾಗಿದೆ ಎಂಬ ಸಂದೇಶವನ್ನು ವಿಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್‌ಗೆ ರವಾನಿಸಿದೆ.

ಮೂರು ಕ್ಷೇತ್ರಗಳ ಉಪಚುನಾವಣೆ ಬಳಿಕ ನಡೆದ ಚುನಾವಣೋತ್ತರ ಸಮೀಕ್ಷೆಗಳು ಇಲ್ಲಿ ಸುಳ್ಳಾಗಿವೆ. ಮೂರಕ್ಕೆ ಮೂರು ಕ್ಷೇತ್ರಗಳನ್ನು ಗೆದ್ದೇ ಗೆಲ್ಲುತ್ತೇವೆ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ವಿಶ್ವಾಸವೂ ನಿಜವಾಗಿದೆ. ಅಲ್ಲಿಗೆ ಒಂದು ಹಂತದಲ್ಲಿ ವಿಪಕ್ಷಗಳಿಗೆ ನಾವು ಇನ್ನಷ್ಟು ಗಟ್ಟಿಯಾಗಿದ್ದೇವೆ ಎಂಬುದನ್ನು ಕಾಂಗ್ರೆಸ್ ಪಕ್ಷ ಮತ್ತೊಮ್ಮೆ ತೋರಿಸಿದೆ. ಒಂದೂವರೆ ವರ್ಷದಲ್ಲಿ ಆಡಳಿತರೂಢ ಕಾಂಗ್ರೆಸ್ ಬಗ್ಗೆ ಹತ್ತು ಹಲವು ಟೀಕೆಗಳನ್ನು ಮಾಡುತ್ತಾ ಬಂದಿದ್ದ ವಿಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ತಮ್ಮ ಸ್ಥಾನಗಳನ್ನು ಬಿಟ್ಟುಕೊಡಬೇಕಾಗಿ ಬಂದಿರುವುದು ವಿಪರ್ಯಾಸವೇ ಸರಿ.

ಪ್ರತಿಷ್ಠೆಯನ್ನು ಪಣಕ್ಕಿಟ್ಟು ಈ ಬಾರಿ ಮೂರು ಪಕ್ಷಗಳು ಉಪಚುನಾವಣೆಯನ್ನು ಎದುರಿಸಿದ್ದವು.

☞ 5



## ಸದ್ದು ಮಾಡುತ್ತಾ ಆಪರೇಷನ್ ಹಸ್ತ?

ಕಾಂಗ್ರೆಸ್ ನಾಯಕರು ನಮ್ಮ ಪಕ್ಷದಲ್ಲಿ ಯಾವುದೇ ಬಣ ಇಲ್ಲ ಎಂದು ಹೇಳಬಹುದು ಆದರೆ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಬಣವಂತು ಇದ್ದೇ ಇದೆ ಎಂಬುದು ಕಳೆದ ಒಂದೂವರೆ ವರ್ಷದ ಅವಧಿಯಲ್ಲಿ ಗೊತ್ತಾಗಿದೆ. ಅದನ್ನು ಅವರ ಬೆಂಬಲಿಗ ಸಚಿವರು ಮತ್ತು ಶಾಸಕರು ಸಮಯ ಸಿಕ್ಕಾಗಲೆಲ್ಲ ಬಹಿರಂಗಪಡಿಸಿದ್ದಾರೆ. ಆದರೆ ಚುನಾವಣೆ ಅಂಥ ಬಂದಾಗ ಒಗ್ಗಟ್ಟಾಗಿ ನಡೆಸಿದ್ದಾರೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಇದೆಲ್ಲದರ ನಡುವೆ ಡಿ.ಕೆ.ಶಿವಕುಮಾರ್ ಸಿಎಂ ಆಗಬೇಕೆಂಬ ಕೂಗು ಮಾತ್ರ ಒಕ್ಕಲಿಗ ನಾಯಕರಲ್ಲಿದೆ.

ಡಿ.ಕೆ.ಶಿವಕುಮಾರ್ ಅವರಿಗೂ ತಾನೇನು ಎಂಬುದನ್ನು ತೋರಿಸಬೇಕಿತ್ತು ಮತ್ತು ಒಕ್ಕಲಿಗ ಶಾಸಕರನ್ನು ಇನ್ನಷ್ಟು ಹೆಚ್ಚಿಸುವ ಅಗತ್ಯತೆಯಿತ್ತು. ಹೀಗಾಗಿಯೇ ಅವರು ತಮ್ಮ ರಾಜಕೀಯ ದ್ವೇಷ ಏನೇ ಇದ್ದರೂ ಅದೆಲ್ಲವನ್ನು ಮರೆತು ಸಿ.ಪಿ. ಯೋಗೇಶ್ವರ್ ಅವರನ್ನು ಕಾಂಗ್ರೆಸ್ ಗೆ ಕರೆತರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಆ ಮೂಲಕ ರಾಮನಗರದಿಂದ ಜೆಡಿಎಸ್‌ನ್ನು ಇನ್ನಿಲ್ಲದಂತೆ ಮಾಡಿದ್ದಾರೆ. ಒಂದು ಕಾಲದಲ್ಲಿ ರಾಮನಗರ, ಮಂಡ್ಯ, ಮೈಸೂರು ಭಾಗಗಳಲ್ಲಿ ಹೆಚ್ಚಿನ ಸ್ಥಾನ ಗೆದ್ದು ಒಕ್ಕಲಿಗ ನಾಯಕ ಎನಿಸಿಕೊಂಡಿದ್ದ ದೇವೇಗೌಡರು ಮತ್ತು ಅವರ ಕುಟುಂಬವನ್ನು ಬದಿಗೆ ಸರಿಸಿ ಆ ಪಟ್ಟವನ್ನು ತನ್ನತ್ತ ಎಳೆದುಕೊಳ್ಳುವತ್ತ ಡಿ.ಕೆ. ಶಿವಕುಮಾರ್ ಮುಂದಾಗಿದ್ದಾರೆ.

ಇದು ಸಾಧ್ಯವಾಬೇಕಾದರೆ ಜೆಡಿಎಸ್ ದುರ್ಬಲವಾಗಬೇಕು. ಅದು ಆಗಬೇಕಾದರೆ ಅಲ್ಲಿರುವ ಶಾಸಕರನ್ನು ತಮ್ಮತ್ತ ಸೆಳೆಯಲೇ ಬೇಕಾಗುತ್ತದೆ. ಅದು ಮುಂದಿನ ದಿನಗಳಲ್ಲಿ ಸಾಧ್ಯವಾದರೆ ಅಚ್ಚರಿಯಿಲ್ಲ. ಈಗಾಗಲೇ ಮಾಧ್ಯಮದ ಕಾರ್ಯಕ್ರಮವೊಂದರಲ್ಲಿ ಮಾತನಾಡಿರುವ ಕಾಂಗ್ರೆಸ್‌ನಿಂದ ಗೆದ್ದು ಬಂದ ಚನ್ನಪಟ್ಟಣದ ಶಾಸಕ ಸಿ.ಪಿ,ಯೋಗೇಶ್ವರ್ ನನಗೆ ಟಾಸ್ಕ್ ಕೊಟ್ಟರೆ ಜೆಡಿಎಸ್ ಶಾಸಕರನ್ನು ಕಾಂಗ್ರೆಸ್‌ಗೆ ಎಳೆದುಕೊಂಡು ಬರುವುದು ಕಷ್ಟವೇನಲ್ಲ ಎಂದಿದ್ದಾರೆ. ಈ ಮಾತು ಕೇಳಿದರೆ ಜೆಡಿಎಸ್‌ಗೆ ಮುಂದಿದೆ ಮಾರಿಹಬ್ಬ ಎಂಬಂತೆ ಕಾಣಿಸುತ್ತಿದೆ.

ಜೆಡಿಎಸ್ ವರಿಷ್ಟ ಹೆಚ್.ಡಿ.ದೇವೇಗೌಡರು ಮತ್ತು ಕುಮಾರಸ್ವಾಮಿ ತಾವು ಕಟ್ಟಿ ಬೆಳೆಸಿದ ಪಕ್ಷವನ್ನು ಉಳಿಸುವ ನಿಟ್ಟಿನಲ್ಲಿ ಯಾವ ಪ್ರಯತ್ನ ಮಾಡುತ್ತಾರೆ? ಈಗಿರುವ ಜೆಡಿಎಸ್ ಶಾಸಕರು ಆಮಿಷಗಳಿಗೆ ಒಳಗಾಗದೆ ಪಕ್ಷದಲ್ಲಿಯೇ ಉಳಿಯುವಂತೆ ಮಾಡಲು ಯಾವ ರೀತಿಯ ಕ್ರಮ ಕೈಗೊಳ್ಳುತ್ತಾರೆ. ಜೆಡಿಎಸ್ ಪಕ್ಷದ ಮುಂದಿನ ಭವಿಷ್ಯ ಏನು? ಹೀಗೆ ಹತ್ತಾರು ಸವಾಲ್‌ಗಳು ಹೆಚ್.ಡಿ. ಕುಮಾರಸ್ವಾಮಿ ಮುಂದಿದೆ. ಎಲ್ಲದಕ್ಕೂ ಉತ್ತರ ಸಿಗಬೇಕಾದರೆ ಕಾದು ನೋಡಬೇಕಾಗಿದೆ. ☯

4 ☞

ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಮತ್ತು ಬಿಜೆಪಿ ಒಂದಾಗಿ ಹೋರಾಟ ನಡೆಸಿದ್ದರೂ 2019ರಲ್ಲಿ ಪಡೆದ ಸ್ಥಾನವನ್ನು ಪಡೆಯಲು ಬಿಜೆಪಿಗೆ ಸಾಧ್ಯವಾಗಿರಲಿಲ್ಲ, ಆದರೆ ಕಾಂಗ್ರೆಸ್‌ನ್ನು ಕಟ್ಟಿಹಾಕುವಲ್ಲಿ ಯಶಸ್ವಿಯಾಗಿದ್ದವು. ಇದೀಗ ವಿಧಾನಸಭಾ ಕ್ಷೇತ್ರದ ಉಪಸಮರದಲ್ಲಿ ಜತೆಯಾಗಿ ಚುನಾವಣೆ ಎದುರಿಸಿ ಗೆಲುವು ಪಡೆದರೆ ಮುಂದಿನ ಸ್ಥಳೀಯ ಸಂಸ್ಥೆ ಚುನಾವಣೆ ಸೇರಿದಂತೆ ವಿಧಾನಸಭಾ ಚುನಾವಣೆ ವೇಳೆಗೆ ಗಟ್ಟಿಯಾಗಬಹುದು ಎಂಬ ನಿರೀಕ್ಷೆಯಿತ್ತು. ಆದರೆ ಎಲ್ಲೋ ಒಂದು ಕಡೆ ಅದು ಹುಸಿಯಾದಂತೆ ಕಾಣುತ್ತಿದೆ.

ಇಷ್ಟಕ್ಕೂ ಈ ಉಪಚುನಾವಣೆಯಿಂದ ಮಹತ್ತರ ಬದಲಾವಣೆಯಂತು ಆಗುವುದಿಲ್ಲ, ಗೆದ್ದವರ ಪ್ರತಿಷ್ಠೆ ಉಳಿಯುತ್ತದೆ. ಜತೆಗೆ ಆಡಳಿತ ಪಕ್ಷಕ್ಕೆ ವಿಪಕ್ಷವನ್ನು ಹಣಿಯಲು ಇದು ಅಸ್ತ್ರವಾಗಲಿದೆ. ಅದಕ್ಕಿಂತ ಹೆಚ್ಚಾಗಿ ನಮ್ಮ ಆಡಳಿತವನ್ನು ಜನ ಮೆಚ್ಚಿದ್ದಾರೆ ಎಂದು ಬೆನ್ನು ತಟ್ಟಿಕೊಳ್ಳಲು ಅನುಕೂಲವಾಗಬಹುದು. ಅದರಾಚೆಗೆ ವಿಪಕ್ಷಗಳಿಗೆ ಇದೊಂದು ಬಹುದೊಡ್ಡ ಪಾಠವಂತು ಆಗಲಿದೆ. ಕಾರಣ ತಮ್ಮದೇ ಕ್ಷೇತ್ರ ಕೈಬಿಟ್ಟು ಹೋಗಿದೆ. ಹೀಗಾಗಿ ಈ ಕ್ಷೇತ್ರವನ್ನು ಮತ್ತೆ ಕಸಿದು ಕೊಳ್ಳುವುದು ಅಷ್ಟು ಸುಲಭವೇನಲ್ಲ, ಏಕೆಂದರೆ ರಾಜ್ಯ ರಾಜಕೀಯದಲ್ಲಿ ಸಕ್ರಿಯರಾಗಿದ್ದ ಮಾಜಿ ಸಿಎಂಗಳಾಗಿದ್ದ ಹೆಚ್.ಡಿ. ಕುಮಾರಸ್ವಾಮಿ ಮತ್ತು ಬಸವರಾಜಬೊಮ್ಮಾಯಿ ಅವರಿಗೆ ಇದು ಅಸ್ತಿತ್ವದ ಪ್ರಶ್ನೆಯಾಗಿದೆ.

**ಜೆಡಿಎಸ್, ಬಿಜೆಪಿಗೆ ತೀವ್ರ ಮುಖಭಂಗ**

ಇಲ್ಲಿ ಮತದಾರರು ಸರ್ಕಾರದ ಗ್ಯಾರಂಟಿ ಯೋಜನೆಯನ್ನು ಬೆಂಬಲಿಸಿದ್ದಾನೆ, ಆಡಳಿತವನ್ನು ಮೆಚ್ಚಿದ್ದಾನೆ ಎಂದೆಲ್ಲ ಹೇಳುವ ಜತೆಗೆ ಚನ್ನಪಟ್ಟಣ ಮತ್ತು ಶಿಗ್ಗಾಂವಿ ಕ್ಷೇತ್ರದಲ್ಲಿ ತಮ್ಮ ಪುತ್ರರನ್ನು ನಿಲ್ಲಿಸಿದ್ದ ಮಾಜಿ ಸಿಎಂಗಳಾದ ಹೆಚ್.ಡಿ. ಕುಮಾರಸ್ವಾಮಿ ಮತ್ತು ಬಸವ ರಾಜ ಬೊಮ್ಮಾಯಿ ಅವರ ಕುಟುಂಬ ರಾಜಕಾರಣವನ್ನು ವಿರೋಧಿಸಿದ್ದಾರೆ ಎಂಬುದನ್ನು ಒಪ್ಪಿಕೊಳ್ಳಲೇ ಬೇಕಾಗಿದೆ. ಚನ್ನಪಟ್ಟಣದಲ್ಲಿ ಕುಮಾರಸ್ವಾಮಿ ಅವರು ಎನ್‌ಡಿಎಗೆ ಅರ್ಥಾತ್ ಬಿಜೆಪಿಗೆ ಸ್ಥಾನವನ್ನು ಬಿಟ್ಟುಕೊಟ್ಟಿದ್ದರೆ ಸಿ.ಪಿ. ಯೋಗೇಶ್ವರ್ ಕಾಂಗ್ರೆಸ್‌ಗೆ ಹೋಗುವ ಪ್ರಮೇಯವೇ ಬರುತ್ತಿರಲಿಲ್ಲವೇನೋ? ಎಲ್ಲೋ ಒಂದು ಕಡೆ ಪುತ್ರ ವ್ಯಾಮೋಹವೂ ಸೋಲಿಗೆ ಕಾರಣವಾಗಿದೆ ಎನ್ನುವುದನ್ನು ತಳ್ಳಿಹಾಕಲಾಗದು.

ಇನ್ನು ಶಿಗ್ಗಾಂವಿ ಕ್ಷೇತ್ರದಲ್ಲಿ ಬಸವರಾಜ ಬೊಮ್ಮಾಯಿ ಪುತ್ರ ಭರತ್ ಬೊಮ್ಮಾಯಿಗೆ ನೀಡದೆ ಬೇರೆ ನಾಯಕರಿಗೆ ನೀಡಬಹುದಾದ ಅವಕಾಶವಿತ್ತು. ಆದರೆ ಸ್ಥಳೀಯ ಬಿಜೆಪಿ ನಾಯಕರ ಅಸಮಾಧಾನದ ನಡುವೆಯೂ ಬೊಮ್ಮಾಯಿ ಪುತ್ರ ಭರತ್ ಬೊಮ್ಮಾಯಿಗೆ ಟಿಕೆಟ್ ನೀಡಲಾಯಿತು. ಇದರ ಪರಿಣಾಮಗಳನ್ನು ಪಕ್ಷ ಅನುಭವಿಸಬೇಕಾಗಿ ಬಂದಿದೆ. ಇಲ್ಲಿ ಕಾಂಗ್ರೆಸ್ ಅಭ್ಯರ್ಥಿ ಯಾಸಿನ್ ಪಠಾಣ್ ತಮ್ಮದೇ ಪಕ್ಷದ ನಾಯಕರ ವಿರೋಧವಿದ್ದರೂ ಅದೆಲ್ಲವನ್ನು ಸರಿಪಡಿಸಿಕೊಂಡು ಗೆದ್ದಿದ್ದಾರೆ. ಆದರೆ ಪರಿಣಾಮಗಳು ಮಾತ್ರ ಬಿಜೆಪಿ ಮೇಲೆಯೇ ಬಿದ್ದಿದೆ ಕಾರಣ ಬಿಜೆಪಿ ಪಕ್ಷ ರಾಜ್ಯದ ಮಟ್ಟಿಗೆ ಒಡೆದ ಮನೆಯಾಗಿದೆ. ಯತ್ನಾಳ್ ಮತ್ತು ವಿಜಯೇಂದ್ರ ನಡುವೆ ನೇರಾ ನೇರಾ ಹೋರಾಟಗಳು ನಡೆಯುತ್ತಿದ್ದು ಪಕ್ಷ ಎರಡು ಬಣಗಳಾಗಿ ಹೋಳಾಗಿದ್ದು, ಅದರ ಪರಿಣಾಮಗಳು ಕೂಡ ಉಪಚುನಾವಣೆ ಮೇಲೆ ಪರಿಣಾಮ ಬೀರಿದೆ.

ಸಂಡೂರು ಕ್ಷೇತ್ರ ಕಾಂಗ್ರೆಸ್‌ನ ಭದ್ರಕೋಟೆಯಾಗಿತ್ತು. ಅಲ್ಲಿ ಸಂಸದ ತುಕರಾಂ ಪತ್ನಿ ಅನ್ನಪೂರ್ಣ ತುಕರಾಂ ಅವರ ಗೆಲುವು ನಿರೀಕ್ಷೆಯಂತೆಯೇ ಆಗಿದೆ. ಆದರೆ ಇಲ್ಲಿ ಬಿಜೆಪಿ ಅಭ್ಯರ್ಥಿ ಬಂಗಾರಿ ಹನುಮಂತು ಪೈಪೋಟಿಯನ್ನು ನೀಡಿದ್ದಾರೆ ಎನ್ನುವುದನ್ನು ಒಪ್ಪಿಕೊಳ್ಳಲೇ ಬೇಕಾಗಿದೆ. ಮೂರು ಕ್ಷೇತ್ರಗಳ ಉಪಚುನಾವಣೆಯಿಂದ ಕಾಂಗ್ರೆಸ್‌ಗೆ ಇನ್ನಷ್ಟು ಬಲ ಬಂದಂತಾಗಿದೆ. ಆದರೆ ಬಲವನ್ನು ವೃದ್ಧಿಸಿಕೊಳ್ಳಬಹುದಾಗಿದ್ದ ಎನ್‌ಡಿಎ ಕೈಚೆಲ್ಲಿ ಕೂತಿದೆ. ಇಲ್ಲಿ ಬಿಜೆಪಿ ನಾಯಕರು ಮಾಡಿದ ಯಾವ ತಂತ್ರವೂ ಫಲ ಕೊಟ್ಟಿಲ್ಲ ಎನ್ನುವುದನ್ನು ಒಪ್ಪಿಕೊಳ್ಳಲೇಬೇಕಾಗಿದೆ.

ಶಿಸ್ತಿನ ಪಕ್ಷ ಎಂದು ಬಡಾಯಿಕೊಚ್ಚಿಕೊಳ್ಳುತ್ತಿರುವ




ಬಿಜೆಪಿಯಲ್ಲಿ ಒಳಬಣಗಳ ಕಚ್ಚಾಟಗಳು ತಾರಕಕ್ಕೇರಿವೆ. ಅದು ನಾಯಕರ ನಡುವಿನ ಹೇಳಿಕೆಗಳಿಂದ ಮತ್ತು ಪ್ರತ್ಯೇಕ ಹೋರಾಟಗಳಿಂದ ಗೊತ್ತಾಗುತ್ತಿದೆ. ಬಿಜೆಪಿ ಹೈಕಮಾಂಡ್ ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳದೆ ಸುಮ್ಮನಿರುವುದು ಪಕ್ಷದೊಳಗಿನ ಭಿನ್ನಮತದ ಹುಣ್ಣು ಇನ್ನಷ್ಟು ಹರಡಲು ಕಾರಣವಾಗಿದೆ. ಮಧ್ಯಸ್ಥಿಕೆ ವಹಿಸಿ ಎರಡು ಬಣಗಳ ಅಸಮಾಧಾನವನ್ನು ಬಗೆಹರಿಸಿ ಒಂದಾಗಿಸದೆ ಹೋದರೆ ಮುಂದಿನ ದಿನಗಳಲ್ಲಿ ಬಿಜೆಪಿ ರಾಜ್ಯದಲ್ಲಿ ಹೀನಾಯ ಮಟ್ಟಕ್ಕೆ ಹೋಗುವುದರಲ್ಲಿ ಅಚ್ಚರಿಯಿಲ್ಲ.

ಇದೆಲ್ಲದರ ನಡುವೆ ಪ್ರಾದೇಶಿಕ ಪಕ್ಷವಾಗಿ ನಿರ್ಣಾಯಕ ಹಂತದಲ್ಲಿದ್ದ ಜೆಡಿಎಸ್‌ನ ಪ್ರಾಬಲ್ಯ ಚುನಾವಣೆಯಿಂದ ಚುನಾವಣೆಗೆ ಕುಸಿಯುತ್ತಾ ಹೋಗುತ್ತಿರುವುದು ಪಕ್ಷದ ಅಳಿವು ಉಳಿವನ್ನು ಪ್ರಶ್ನೆ ಮಾಡುವಂತೆ ಮಾಡಿದೆ. ಹಳೆ ಮೈಸೂರು ಭಾಗವನ್ನು ತನ್ನ ಭದ್ರಕೋಟೆಯನ್ನಾಗಿ ಮಾಡಿಕೊಂಡು ಮೆರೆದಿದ್ದ ಪಕ್ಷ ಹೀನಾಯ ಸ್ಥಿತಿಯತ್ತ ಮುಖ ಮಾಡುತ್ತಿದೆ. ಎನ್‌ಡಿಎ ಜತೆ ಸೇರಿದ ಬಳಿಕ ಪಕ್ಷ ಸಂಘಟನೆ ನಡೆಯುತ್ತಿಲ್ಲ, ಸಣ್ಣಪುಟ್ಟ ನಾಯಕರು, ಕಾರ್ಯಕರ್ತರು ಗೊಂದಲದಲ್ಲಿದ್ದಾರೆ. ಮುಂದೆ ನಿಂತು ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳುವ ನಾಯಕರ ಕೊರತೆ ಎದ್ದು ಕಾಣುತ್ತಿದೆ. ಇದೆಲ್ಲವನ್ನು ಗಮನಿಸಿದರೆ ವಿಪಕ್ಷಗಳ ದೌರ್ಬಲ್ಯಗಳು ಆಡಳಿತರೂಢ ಕಾಂಗ್ರೆಸ್ ನ್ನು ಇನ್ನಷ್ಟು ಗಟ್ಟಿಯಾಗುವಂತೆ ಮಾಡುತ್ತಿರುವುದರಲ್ಲಿ ಎರಡು ಮಾತಿಲ್ಲ. ☯

# ದೋಸ್ತಿಗಳಿಗೆ ಕುಟುಂಬ ರಾಜಕಾರಣವೇ ಮುಳ್ಳಾಯ್ತು!

ಇಂತಹದೊಂದು ಪ್ರಶ್ನೆ ರಾಜ್ಯ ರಾಜಕೀಯದಲ್ಲಿ ಹರಿದಾಡಲು ಶುರುವಾಗಿದೆ. ಕುಟುಂಬ ರಾಜಕಾರಣದ ಬಗ್ಗೆ ಪುಂಖಾನುಪುಂಖವಾಗಿ ಮಾತಾಡುತ್ತಿದ್ದ ಬಿಜೆಪಿ ಈ ಬಾರಿಯ ಉಪಚುನಾವಣೆಯಲ್ಲಿ ಅದನ್ನೇ ಮಾಡಿದೆ. ಶಿಗ್ಗಾಂವಿಯಲ್ಲಿ ಪಕ್ಷದ ಕೆಲವು ನಾಯಕರ ವಿರೋಧದ ನಡುವೆಯೂ ಬಸವರಾಜ್ ಬೊಮ್ಮಾಯಿ ಪುತ್ರ ಭರತ್ ಬೊಮ್ಮಾಯಿಗೆ ಟಿಕೆಟ್ ನೀಡಿತು. ಇತ್ತ ಜೆಡಿಎಸ್ ಪಕ್ಷವೂ ಹೊರತಾಗಿರಲಿಲ್ಲ, ಕ್ಷೇತ್ರವನ್ನು ಎನ್‌ಡಿಎ ಬಗಲಿನಲ್ಲಿ ಇಟ್ಟುಕೊಳ್ಳಬೇಕೆಂಬ ಇಚ್ಛಾಶಕ್ತಿಯಿದ್ದಿದ್ದರೆ ಬಿಜೆಪಿಗೆ ಬಿಟ್ಟು ಕೊಡಬಹುದಿತ್ತು. ಆಗ ಸಿ.ಪಿ. ಯೋಗೇಶ್ವರ್ ಪಕ್ಷ ಬಿಟ್ಟು ಹೋಗುವ ಪ್ರಮೇಯವೇ ಬರುತ್ತಿರಲಿಲ್ಲ, ಆದರೆ ಇಲ್ಲಿ ಕುಮಾರಸ್ವಾಮಿ ಜಾಣ ನಡೆ ತೋರಿದ್ದರು. ಈ ಬಾರಿ ತನ್ನ ಪ್ರಭಾವ ಇರುವುದರಿಂದ ಮಗನನ್ನು ಸುಲಭವಾಗಿ ಗೆಲ್ಲಿಸಿಕೊಂಡು ಬರಬಹುದು ಎಂಬುದು ಅವರ ಆಲೋಚನೆಯಾಗಿತ್ತು. ಹೀಗಾಗಿ ಅವರು ಸಿ.ಪಿ. ಯೋಗೇಶ್ವರ್ ಅವರಿಗೆ ಕ್ಷೇತ್ರ ಬಿಟ್ಟುಕೊಡಲು ಒಪ್ಪಲಿಲ್ಲ.

ಇಲ್ಲಿ ಎರಡು ಕಡೆಯಲ್ಲಿಯೂ ಪುತ್ರ ವಾತ್ಸಲ್ಯ ಕೆಲಸ ಮಾಡಿದೆ. ಹಾಗೆಯೇ ಅದರ ಪರಿಣಾಮವೂ ಗೊತ್ತಾಗಿದೆ. ಕುಟುಂಬ ರಾಜಕಾರಣವನ್ನು ವಿರೋಧಿಸಿಕೊಂಡು ಬಂದಿರುವ ಬಿಜೆಪಿಗೆ ಕರ್ನಾಟಕದ ಮಟ್ಟಿಗೆ ಬಿಸಿ ತುಪ್ಪವಾಗಿದೆ. ಬಿ.ಎಸ್. ಯಡಿಯೂರಪ್ಪ ತಮ್ಮ ಮಕ್ಕಳನ್ನು ಮುಂದಿಟ್ಟುಕೊಂಡು ವಾತ್ಸಲ್ಯ ಮೆರೆಯುತ್ತಿದ್ದಾರೆ ಎಂಬ ಆಕ್ರೋಶ ಬಿಜೆಪಿ ಪಕ್ಷದಲ್ಲಿಯೇ ಇದೆ. ಅದನ್ನು ಪದೇ ಪದೇ ಹಿರಿಯ ಶಾಸಕ ಬಸವನಗೌಡ ಯತ್ನಾಳ್ ಬಹಿರಂಗವಾಗಿಯೇ ಹೇಳುತ್ತಿದ್ದಾರೆ. ಅಷ್ಟೇ ಅಲ್ಲದೆ ಬಹುತೇಕ ಹಿರಿಯ ನಾಯಕರು ಈ ವಿಚಾರದಲ್ಲಿ ಯತ್ನಾಳ್ ಪರವಾಗಿದ್ದಾರೆ.

ಬಹುಶಃ ಬಿಜೆಪಿಯ ರಾಷ್ಟ್ರೀಯ ನಾಯಕರು ರಾಜ್ಯ ಬಿಜೆಪಿಯಲ್ಲಿ ಆಗುತ್ತಿರುವ ಬೆಳವಣಿಗೆಯನ್ನು ಗಮನಿಸಿ, ಒಡೆದು ಹೋಗಿರುವ ನಾಯಕರ ಮನಸ್ಸುಗಳನ್ನು ಸರಿಪಡಿಸದೆ ಹೋದರೆ ಅದರ ಪರಿಣಾಮಗಳು ಮುಂದಿನ ದಿನಗಳಲ್ಲಿ ಯಾವ ಮಟ್ಟಕ್ಕೆ ಹೋಗಿ ನಿಲ್ಲುತ್ತದೆಯೋ ಗೊತ್ತಿಲ್ಲ, ಹಾಗೆಯೇ ಜೆಡಿಎಸ್ ಪಕ್ಷದಲ್ಲಿಯೂ ಕೂಡ ದೇವೇಗೌಡರ ಕುಟುಂಬವನ್ನು ಹೊರತು ಪಡಿಸಿ ಇತರೆ ನಾಯಕರಿಗೆ ಪಕ್ಷ ಸಂಘಟನೆಗೆ ಅವಕಾಶ ಮಾಡಿಕೊಡದೆ ಹೋದರೆ, ಮುಂದಿನ ದಿನಗಳಲ್ಲಿ ಜತೆಗಿರುವ ಶಾಸಕರು ತಮ್ಮ ದಾರಿಯನ್ನು ಹುಡುಕು ಮನಸ್ಸು ಮಾಡಿದರೆ ಅದರ ಪರಿಣಾಮಗಳು ಎಲ್ಲಿಗೆ ಹೋಗಿ ಮುಟ್ಟುತ್ತೋ ಗೊತ್ತಿಲ್ಲ. ☯

# ಪ್ರೀತಿಸಿ ಮದ್ವೆಯಾದ ಎರಡೇ ವರ್ಷಕ್ಕೆ ಮಹಿಳೆ ದುರಂತ ಸಾವು!



ವರದಕ್ಷಿಣೆ ಕಿರುಕುಳದಿಂದ ಬೇಸತ್ತು ಗಂಡನ ಮನೆಯಲ್ಲೇ ನೇಣು ಬಿಗಿದುಕೊಂಡು ಪತ್ನಿ ಆತ್ಮಹತ್ಯೆ ಮಾಡಿಕೊಂಡಿರುವಂತಹ ಘಟನೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲೂಕಿನ ಗುಮ್ಮನಹಳ್ಳಿಯಲ್ಲಿ ನಡೆದಿದೆ. ಮೃತ ಮಹಿಳೆ ಆರು ತಿಂಗಳು ಗರ್ಭಿಣಿಯಾಗಿದ್ದಳು. ಸದ್ಯ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಆಕೆ ಎರಡು ವರ್ಷಗಳಿಂದಷ್ಟೇ ಪ್ರೀತಿಸಿದವನ ಜೊತೆ ಬಾಳಬೇಕು ಅಂತ ಮನೆಯವರನ್ನ ಒಪ್ಪಿಸಿ ಮದುವೆಯಾಗಿದ್ದಳು. ಜೊತೆಗೆ ಆರು ತಿಂಗಳ ಹಿಂದೆ ಗರ್ಭಿಣಿಯಾಗಿದ್ದು, ಚೊಚ್ಚಲ ಮಗುವಿನ ನಿರೀಕ್ಷೆಯಲ್ಲಿದ್ದರು. ಆದರೆ ಅಷ್ಟರಲ್ಲೇ ಗಂಡನ ಮನೆಯವರು ನೀಡಿದ ಕಿರುಕುಳಕ್ಕೆ ಬೇಸತ್ತು ಸಾವಿನ ಮನೆ ಸೇರಿದ್ದು, ಮಗಳ ಚೊಚ್ಚಲ ಬಾಣಂತನದ ನಿರೀಕ್ಷೆಯಲ್ಲಿದ್ದ ಕುಟುಂಬಸ್ಥರಿಗೆ ಶಾಕ್ ನೀಡಿದ್ದಾಳೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ ತಾಲೂಕಿನ ಗುಮ್ಮನಹಳ್ಳಿ ನಿವಾಸಿ ಸುರೇಶ್ ಜೊತೆ ಕಳೆದ 2 ವರ್ಷದಿಂದಷ್ಟೆ ಹಸೆಮಣೆ ಏರಿದ್ದ ರೂಪ ಮೃತ ಗರ್ಭಿಣಿ. ಆರು ತಿಂಗಳ ಗರ್ಭಿಣಿಯಾಗಿದ್ದ ರೂಪ ಹೊಟ್ಟೆಯಲ್ಲಿನ ಮಗು ಕಣ್ಣುತೆರೆಯುವ ಮುನ್ನವೆ ತಾಯಿ ಹೊಟ್ಟೆಯಲ್ಲಿನ ಮಗು ಸಮೇತ ಪರಲೋಕ ಸೇರಿದ್ದಾರೆ.

**ವರದಕ್ಷಿಣೆ ಕಾಟಕ್ಕೆ ಮನನೊಂದು ಸಾವಿನ ಮನೆ ಸೇರಿದ ಗರ್ಭಿಣಿ**

ಹೌದು. ಅಂದಹಾಗೆ ಕಳೆದ ಎರಡೂ ವರ್ಷಗಳ ಹಿಂದೆ ಪರಸ್ಪರ ಎರಡು ಮನೆಯವರನ್ನ ಒಪ್ಪಿಸಿ ಮದುವೆಯಾಗಿದ್ದ ರೂಪ ಮತ್ತು ಸುರೇಶ್ ಆರು ತಿಂಗಳವರೆಗೂ ಸುಖ ಸಂಸಾರ ಮಾಡಿದ್ದಾರೆ. ಆದರೆ ಆರು ತಿಂಗಳು ಕಳೆಯುತ್ತಿದ್ದಂತೆ ನನಗೆ ಸಾಲಗಾರರ ಕಾಟ



ಜಾಸ್ತಿಯಾಗುತ್ತಿದೆ. ಮದುವೆಗೆ ಸಾಲ ಮಾಡಿದ್ದು, ಬೇರೆ ಹುಡುಗಿಯನ್ನ ಮದುವೆ ಯಾಗಿದ್ದರೆ ಹೆಚ್ಚಿನ ವರದಕ್ಷಿಣೆ ಸಿಗುತ್ತಿತ್ತು. ಸಾಲ ತೀರುತಿತ್ತು ಅಂತ ಗಂಡ ಮತ್ತು ಅತ್ತೆ-ಮಾವ ಕಿರುಕುಳ ನೀಡಲು ಆರಂಭಿಸಿದ್ರಂತೆ.

ಅಲ್ಲದೆ ಪದೇ ಪದೇ ತವರುಮನೆಗೆ ಹೋಗಿ ಹಣ ತೆಗೆದುಕೊಂಡು ಬಾ ಅಂತ ತವರುಮನೆಗೆ ಕಳಿಸುತ್ತಿದ್ದ ಕಾರಣ ರೂಪ ಬೇಸತ್ತಿದ್ದಾಳೆ. ಇನ್ನೂ ಪದೇ ಪದೇ ಇದೇ ರೀತಿ ಹಲವು ಭಾರಿ ಹಣಕ್ಕೆ ಅತ್ತೆ, ಮಾವ

☞14

### ಹನೂರು ಪೊಲೀಸರ ಭರ್ಜರಿ ಕಾರ್ಯಾಚರಣೆ

# ಕುಖ್ಯಾತ ಅಂತರ್ ರಾಜ್ಯ ಕಳ್ಳರ ಬಂಧನ

**ಕಳೆದ ಎರಡೂವರೆ ತಿಂಗಳಿನಿಂದ ಜಿಲ್ಲೆಯಲ್ಲಿ ಕಳ್ಳತನ ಪ್ರಕರಣಗಳು ಸಕ್ರಿಯವಾಗಿ ಭಾದಿಸುತ್ತಿದ್ದವು. ನಾಲ್ವರು ಕುಖ್ಯಾತ ಅಂತರ್ ರಾಜ್ಯ ಕಳ್ಳರು ನಿರಂತರವಾಗಿ ತಮ್ಮ ಕೈಚಳಕ ತೋರಿ ಪೊಲೀಸರಿಗೆ ಚಳ್ಳೇಹಣ್ಣು ತಿನ್ನಿಸುತ್ತಿದ್ದರು. ಕಳ್ಳರ ಗ್ಯಾಂಗ್ ಸಕ್ರಿಯಗೊಂಡು ಪಟ್ಟಣದ ಜನತೆಯನ್ನು ನಿದ್ರೆಗೆಡಿಸುತ್ತಿತ್ತು. ಪದೇ ಪದೇ ತಮ್ಮ ಕೈಚಳಕ ತೋರಿಸುತ್ತಿದ್ದ ಖತರ್ನಾಕ್ ಕಳ್ಳರು ಪಟ್ಟಣ ಪ್ರದೇಶದ ಜನರಲ್ಲಿ ಕಳ್ಳತನದ ಭಯ ಆವರಿಸುವಂತೆ ಮಾಡಿಬಿಟ್ಟಿದ್ದರು. ಅದೇ ವೇಳೆ ಮತ್ತೊಂದು ಕಳ್ಳತನ ಪ್ರಕರಣ ಹನೂರು ಪಟ್ಟಣದ ಜನತೆಯನ್ನು ನಿದ್ರಾಹೀನ ಸ್ಥಿತಿಗೆ ತಂದು ಬಿಟ್ಟಿತ್ತು. ಇದರಿಂದ ಎಚ್ಚೆತ್ತ ಹನೂರು ಪೊಲೀಸರು ಸಿಪಿಐ ಶಿವಮಾದಯ್ಯ ನೇತೃತ್ವದಲ್ಲಿ ಭರ್ಜರಿ ಕಾರ್ಯಾಚರಣೆ ನಡೆಸಿ ನಾಲ್ವರು ಅಂತರ್ ರಾಜ್ಯ ಕುಖ್ಯಾತ ಕಳ್ಳರನ್ನು ಎಡೆಮುರಿ ಕಟ್ಟಿ, ಜೈಲಿಗೆಟ್ಟಿದೆ. ಕುಖ್ಯಾತ ಅಂತರ್ ರಾಜ್ಯ ಕಳ್ಳರ ನಿರಂತರ ಕೈಚಳಕದಿಂದ ಬೇಸತ್ತಿದ್ದ ಪೊಲೀಸರು ಹಾಗೂ ಕಂಗಾಲಾಗಿದ್ದ ಜಿಲ್ಲೆಯ ಜನತೆ ನಿಟ್ಟುಸಿರು ಬಿಡುವಂತಾಗಿದೆ.**

ಚಾಮರಾಜನಗರ
ಎಸ್. ಸ್ವಾಮಿ

ಹೌದು ಅದು ಜಿಲ್ಲೆಯಲ್ಲಿ ಕಳ್ಳತನ ಪ್ರಕರಣಗಳು ಸಕ್ರಿಯವಾಗಿ ಭಾದಿಸುತ್ತಿದ್ದ ವೇಳೆ ಕಳೆದ ಎರಡೂವರೆ ತಿಂಗಳಿನಿಂದ ಹನೂರು ಪಟ್ಟಣ, ದೊಡ್ಡಿಂದುವಾಡಿ, ಗುಂಡೇಗಾಲ, ಕೊಳ್ಳೆಗಾಲ ಪಟ್ಟಣ, ಚಾಮರಾಜನಗರ ಪಟ್ಟಣ, ಗುಂಡ್ಲುಪೇಟೆ ಮತ್ತು ಬೇಗೂರು ಕಡೆಗಳಲ್ಲಿ ನಾಲ್ವರು ಅಂತರ್ ರಾಜ್ಯ ಖತರ್ನಾಕ್ ಕಳ್ಳರು ನಿರಂತರವಾಗಿ ತಮ್ಮ ಕೈಚಳಕ ತೋರಿ ಪೊಲೀಸರಿಗೆ ಚಳ್ಳೇಹಣ್ಣು ತಿನ್ನಿಸುತ್ತಿದ್ದರು. ಇದೇ ವೇಳೆ ಹನೂರು ಠಾಣೆಯ ಪಿಐರವರು ತರಬೇತಿಗೆಂದು ಠಾಣೆಯಿಂದ ತೆರಳಿದ್ದರು. ಕೊಳ್ಳೇಗಾಲ ಉಪ ವಿಭಾಗದ ಡಿವೈಎಸ್ಪಿ ಧರ್ಮೇಂದ್ರ ಹೊರ ಜಿಲ್ಲೆಯ ಬಂದೋಬಸ್ತ್‌ಗೆಂದು ಹೋಗಿದ್ದರು. ಪಟ್ಟಣದಲ್ಲಿ ಕಳ್ಳರ ಗ್ಯಾಂಗ್ ಸಕ್ರಿಯಗೊಂಡು ಪಟ್ಟಣದ ಜನತೆಯನ್ನು ನಿದ್ರೆಗೆಡಿಸುತ್ತಿದ್ದ ವೇಳೆ ಈ ವೇಳೆ ಚಾಮರಾಜನಗರ ಡಿವೈಎಸ್ಪಿ ಲಕ್ಷ್ಮಯ್ಯ, ಕೊಳ್ಳೇಗಾಲದ ಸಿಪಿಐ ಶಿವಮಾದಯ್ಯ ಹನೂರು ಪೊಲೀಸ್ ಠಾಣೆಯ ನೇತೃತ್ವ ವಹಿಸಿದ್ದರು.

ಇಂತಹ ಸಂದರ್ಭದಲ್ಲಿ ಅಕ್ಟೋಬರ್ 18ರಂದು ಚಾಮರಾಜನಗರ ಜಿಲ್ಲೆ ಹನೂರು ಪಟ್ಟಣದ ಆಶ್ರಯ ಬಡಾವಣೆಯ ನಿವಾಸಿ ಸಾಬೀರ್ ಅಹ್ಮದ್ ಎಂಬುವರು ಮನೆಗೆ ಬೀಗ ಹಾಕಿಕೊಂಡು ಸಂಬಂಧಿಕರ ಮದುವೆಗೆ ಹೋಗಿದ್ದರು. ಈ ವೇಳೆ ಐದು ದಿನ ಮನೆಯಲ್ಲಿ ಯಾರು ಇರಲಿಲ್ಲ, ಆಶ್ರಯ ಬಡಾವಣೆಯ ಸಾಬಿರ್ ಅಹಮದ್ ಮನೆಯನ್ನು ಗುರುತು ಹಚ್ಚಿಕೊಂಡು ಕಳ್ಳತನದ ಸ್ಕೆಚ್ ರೆಡಿ ಮಾಡಿಕೊಂಡು ಅಂತರ್ ರಾಜ್ಯ ಕಳ್ಳರ ಗ್ಯಾಂಗ್ ಕಾಯುತ್ತಿತ್ತು. ಸಂಬಂಧಿಕರ ಮದುವೆಗೆ ಹೋಗಿ ಬರುವಷ್ಟರಲ್ಲಿ ಈ ಗ್ಯಾಂಗ್ ಮನೆ ಬಾಗಿಲನ್ನು ಮೀಟಿ ಒಳನುಗ್ಗಿ ಬಿರುವಿನಲ್ಲಿದ್ದ 11 ಲಕ್ಷ ಬೆಲೆಬಾಳುವ ಚಿನ್ನ-ಬೆಳ್ಳಿ ಆಭರಣಗಳು ಹಾಗೂ 20,000 ನಗದನ್ನು ದೋಚಿ ಪರಾರಿಯಾಗಿತ್ತು. ಮದುವೆ ಮುಗಿಸಿಕೊಂಡು ಅಕ್ಟೋಬರ್ 23ರಂದು ವಾಪಸ್ ಮನೆಗೆ ಬಂದು ನೋಡಿದ ಕುಟುಂಬ ಮನೆಯಲ್ಲಿ ಕಳ್ಳತನವಾಗಿರುವುದನ್ನು ಕಂಡು ಕಂಗಾಲಾಗಿತ್ತು. ಅದಾಗಲೇ ಕಳೆದ ಎರಡು ತಿಂಗಳ ಹಿಂದಷ್ಟೆ ಕಳ್ಳರು ತಮ್ಮ ಕೈಚಳಕ ತೋರಿಸಿ ಪಟ್ಟಣ ಪ್ರದೇಶದ ಜನರನ್ನು ಕಳ್ಳತನದ ಭಯ ಆವರಿಸುವಂತೆ ಮಾಡಿಬಿಟ್ಟಿದ್ದರು. ಈಗ ಮತ್ತೊಂದು ಕಳ್ಳತನ ಪ್ರಕರಣ ಹನೂರು ಪಟ್ಟಣದ ಜನತೆಯನ್ನು ನಿದ್ರಾಹೀನ ಸ್ಥಿತಿಗೆ ತಂದು ಬಿಟ್ಟಿತ್ತು.

ದಿನಾಂಕ 23-10-2024 ರಂದು ಸಾಬೀರ್ ಅಹ್ಮದ್ ಹನೂರು ಠಾಣೆಗೆ ಹಾಜರಾಗಿ ತಾನು ಕುಟುಂಬ ದಿನಾಂಕ 18-10-2024ರಂದು ಸಂಜೆ 5:30 ಸಮಯದಲ್ಲಿ ಮನೆಗೆ ಬೀಗ ಹಾಕಿಕೊಂಡು ಸಂಬಂಧಿಕರ ಮದುವೆಗೆ ಹೋಗಿ ವಾಪಸ್ ಈ ದಿನ ಮನೆಗೆ ಬಂದಾಗ ಯಾರೋ ಕಳ್ಳರು ಮನೆ ಬಾಗಿಲನ್ನು ಮೀಟಿ ಮನೆ ಪ್ರವೇಶಿಸಿ ಬಿರುವಿನಲ್ಲಿದ್ದ 11 ಲಕ್ಷ ಬೆಲೆಬಾಳುವ ಚಿನ್ನ ಬೆಳ್ಳಿ ಆಭರಣಗಳು ಮತ್ತು 20,000 ನಗದು ಹಣವನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂದು ನೀಡಿದ ದೂರಿನ ಮೇರೆಗೆ ಹನೂರು ಪೊಲೀಸರು ಠಾಣೆ ಮೊಕ್ಕೊದ್ದಮೆ ಸಂಖ್ಯೆ 215/ 2024 ಕಲಂ 331(3) 331(4) 305 ಬಿ.ಎನ್.ಎಸ್. ರಿತ್ಯಾ ಪ್ರಕರಣ ದಾಖಲಿಸಿಕೊಂಡಿದ್ದರು. ವಿಷಯ ತಿಳಿದ ಕೂಡಲೇ ಸ್ಥಳಕ್ಕಾಗಮಿಸಿದ ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾರವರು ಚಾಮರಾಜನಗರ ಡಿವೈಎಸ್ಪಿ ಲಕ್ಷ್ಮಯ್ಯ, ಕೊಳ್ಳೇಗಾಲ ಸಿಪಿಐ ಶಿವಮಾದಯ್ಯ ಹಾಗೂ ಹನೂರು ಪಿಎಸ್ಐ ಮಂಜುನಾಥ್ ಪ್ರಸಾದ್‌ರವರು ಬೆರಳಚ್ಚು ತಜ್ಞರ ತಂಡ ಹಾಗೂ ಶ್ವಾನ ದಳವನ್ನು ಕರೆಯಿಸಿಕೊಂಡು ಪರಿಶೀಲನೆ ನಡೆಸುತ್ತಾರೆ.

ನಂತರ ಮೇಲ್ಕಂಡ ಪ್ರಕರಣದ ಆರೋಪಿ ಮತ್ತು ಮಾಲುಪತ್ತೆಗಾಗಿ ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾರವರು ಕೊಳ್ಳೇಗಾಲ ಸಿಪಿಐ ಶಿವಮಾದಯ್ಯರವರ ನೇತೃತ್ವದಲ್ಲಿ ಹನೂರು ಪಿಎಸ್ಐ ಮಂಜುನಾಥ್ ಪ್ರಸಾದ್, ಡಿವೈಎಸ್ಪಿ ಅಪರಾಧ ಪತ್ತೆದಳದ ಸಿಬ್ಬಂದಿಗಳಾದ ಎಎಸ್ಐ ತಕೀವುಲ್ಲಾ ಹೆಚ್ ಸಿಗಳಾದ ರವಿ, ಕಿಶೋರ್, ವೆಂಕಟೇಶ್, ಪೇದೆಗಳಾದ ಬಿಳಿಗೌಡ, ಶಿವಕುಮಾರ್, ಲಿಯಾಖಾತ್-ಅಲಿಖಾನ್, ಹನೂರು ಠಾಣೆಯ ಸಿಬ್ಬಂದಿಗಳಾದ ಚಂದ್ರ, ರಾಮಕೃಷ್ಣ ವಿಶ್ವನಾಥ್, ತೆರಕನಾಂಬಿ ಠಾಣೆಯ ಮುಖ್ಯಪೇದೆ ಜಿ.ಎನ್. ಪುಟ್ಟರಾಜು, ಜೀಪ್ ಚಾಲಕರುಗಳಾದ ಸೋಮಶೇಖರ್, ಶಿವಕುಮಾರ್‌ರವರನ್ನು ಒಳಗೊಂಡ ಎರಡು ಪ್ರತ್ಯೇಕ ತಂಡಗಳನ್ನು ರಚಿಸಿದ್ದರು. ಈ ತಂಡ ಆರೋಪಿಗಳ ಚಲನವಲನ ಪತ್ತೆಗಾಗಿ ಫಿಂಗರ್ ಪ್ರಿಂಟ್ ಮೊಬೈಲ್ ಟ್ರ್ಯಾಪ್ ಆದರಿಸಿ ಮಾಹಿತಿ ಸಂಗ್ರಹಿಸಲು ಮುಂದಾಗುತ್ತದೆ. 1) ಕೊಡಂಗುಸ್ವಾಮಿ ಬಿನ್ ಲೇಟ್ ಮಾಡಸ್ವಾಮಿ ದೇವರು, 58 ವರ್ಷ, ಗುಜರಿ ಕೆಲಸ, ಮನೆ ನಂ 245 ತೆರ್ಕುಪನಾವಡಿ ಗ್ರಾಮ, ಪನಾವಡಲಿ ಸತ್ತರಂ ಪೋಸ್ಟ್, ಶಂಕರ್ ಕೊಯ್ಲು ತಾಲೂಕು, ತೆಂಕಾಶಿ ಜಿಲ್ಲೆ ತಮಿಳುನಾಡು. 2) ಜೇಸುದಾಸ್. ಡಿ. ಅಲಿಯಾಸ್ ಯೇಸುದಾಸ್ ಅಲಿಯಾಸ್ ಶಂಶುದ್ದೀನ್ ಬಿನ್ ಲೇಟ್ ಧರ್ಮರಾಜು, 39 ವರ್ಷ, ಸೆಂಟ್ರಿಂಗ್ ಕೆಲಸ, ಪಾಂಬು ಪಾರೈ ಗ್ರಾಮ, ಪುದುಚೇರಿ ಈಸ್ಟ್ ವಾಲೇಯಾರ್ ಡ್ಯಾಮ್ ಪೋಸ್ಟ್, ಪಾಲಕ್ಕಾಡ್ ಜಿಲ್ಲೆ, ಕೇರಳ ರಾಜ್ಯ. 3) ಇಂದಿರರಾಜ್ ಅಲಿಯಾಸ್ ಇಂದ್ರರಾಜ್ ಬಿನ್ ಪಂಡರಿನಾದನ್, 35 ವರ್ಷ, ಡ್ರೈವರ್ ಕೆಲಸ, ಮನೆ ನಂಬರ್ 2/248(ಬಿ), ಕಂದಸ್ವಾಮಿ ಶೆಟ್ಟಿಯೂರ್ ಕಾಲೋನಿ, ಕಂಜಾಂಪಟ್ಟಿ ಪೋಸ್ಟ್, ಪೊಲ್ಲಾಚ್ಚಿ ತಾಲೂಕು, ಕೊಯಮತ್ತೂರು ಜಿಲ್ಲೆ. 4) ಅಜಿತ್ ಬಿನ್ ಅಣ್ಣಪ್ಪ, 23 ವರ್ಷ, ಅಗ್ರೆ ಪಕ್ಕ ಅಂಗಡಳ್ಳ ಗ್ರಾಮ, ಹಾಸನ ತಾಲೂಕು, ಜಿಲ್ಲೆ ಹಾಲಿವಾಸ ಮಂಜೇರಿ, ಕೇರಳ ರಾಜ್ಯ.. ಈ ನಾಲ್ವರು ಕುಖ್ಯಾತ ಅಂತರ್ ರಾಜ್ಯ ಕಳ್ಳರ ಕೈಚಳಕ ಎಂದು ತಿಳಿಯುತ್ತದೆ. ಆದರೆ ಎಲ್ಲಿಯೂ ಸುಳಿವು ಕೊಡದ ಪೊಲೀಸರು ಕಳ್ಳರ ಪತ್ತೆಗೆ ಇಳಿಯುತ್ತಾರೆ.

ಈ ವೇಳೆಗಾಗಲೇ ಹೊರ ಜಿಲ್ಲೆಯ ಬಂದೋಬಸ್ತ್‌ಗೆಂದು ಹೋಗಿದ್ದ ಕೊಳ್ಳೇಗಾಲ ಉಪ ವಿಭಾಗದ ಡಿವೈಎಸ್ಪಿ ಧರ್ಮೇಂದ್ರ, ಬಂದೋಬಸ್ತ್ ಮುಗಿಸಿಕೊಂಡು ಬಂದಿದ್ದರಿಂದ  ಚಾಮರಾಜನಗರ ಡಿವೈಎಸ್ಪಿ ಲಕ್ಷ್ಮಯ್ಯ ಹಾಗೂ ಕೊಳ್ಳೇಗಾಲ ಉಪ ವಿಭಾಗದ ಡಿವೈಎಸ್ಪಿ ಧರ್ಮೇಂದ್ರರವರ ಮಾರ್ಗದರ್ಶನದಲ್ಲಿ ಎರಡು ತಂಡಗಳನ್ನು ಕರ್ನಾಟಕ, ತಮಿಳುನಾಡು ಹಾಗೂ ಕೇರಳ ರಾಜ್ಯದ ವಿವಿಧ ಭಾಗಗಳಿಗೆ ಆರೋಪಿಗಳು ಮತ್ತು ಮಾಲು ಪತ್ತೆಗೆ ಕಳುಹಿಸಿ ಕೊಡುತ್ತಾರೆ. ಮೊದಲಿಗೆ ಸದರಿ ತಂಡಗಳು ಕೇರಳದ ಕಾಸರಗೋಡು, ಮಂಜೇರಿ ಕರ್ನಾಟಕದ ವಿರಾಜಪೇಟೆ, ಪೊನ್ನಂಪೇಟೆ, ಬಂಟ್ವಾಳ, ಮಂಗಳೂರು, ಬೆಂಗಳೂರು, ರಾಮನಗರ, ಉಡುಪಿ, ತಮಿಳುನಾಡಿನ ತಿರುನಲ್‌ವೆಲಿ ಪೊಲೀಸ್ ಠಾಣೆಗಳಿಗೆ ಭೇಟಿ ನೀಡಿ ಆರೋಪಿಗಳ ಬಗ್ಗೆ ಮಾಹಿತಿ

☞ 10






ಬಂಧಿತ ಆರೋಪಿಗಳು



ಎಸ್ಪಿ ಡಾ. ಬಿ.ಟಿ. ಕವಿತಾ



ಡಿವೈಎಸ್ಪಿ ಧರ್ಮೇಂದ್ರ



ಡಿವೈಎಸ್ಪಿ ಲಕ್ಷ್ಮಯ್ಯ



ಸಿಪಿಐ ಶಿವಮಾದಯ್ಯ



ಪಿಎಸ್ಐ ಮಂಜುನಾಥ್ ಪ್ರಸಾದ್

## ಹಾರೂಗೇರಿ ಸಿಪಿಐ ರವಿಚಂದ್ರ ಡಿ.ಬಿ. ಮತ್ತು ಸಿಬ್ಬಂದಿಗಳ ಮಿಂಚಿನ ಕಾರ್ಯಾಚರಣೆ...

# ನಾಲ್ವರು ಚಂಡಾಲ ಚೌಕಡಿ ಕಳ್ಳರ ಬಂಧನ : 11.52 ಲಕ್ಷ ರೂ.ಗಳ ಮೌಲ್ಯದ ಸ್ವತ್ತು ವಶಕ್ಕೆ!



ಚಂಡಾಲ ಚೌಕಡಿ ಕಳ್ಳರಾದ ರಾಮಪ್ಪ ಲಕ್ಷ್ಮಣ ಕಾಂಬಳೆ, ಶಿವರಾಜ ಸುಭಾಸ ಕಾಂಬಳೆ (ಸೂತ್ರಧಾರ), ಹಣಮಂತ ಮಹಾದೇವ ಕಾಂಬಳೆ, ರುದ್ರೇಶಕುಮಾರ ಶಿವಚಂದ್ರ ಕಾಂಬಳೆ

**ಮೈ ಮುರಿದು ದುಡಿದು ತಿನ್ನಲಾರದ ಮಹಾ ಐನಾತಿ 'ಚಂಡಾಲ ಚೌಕಡಿ' ಗ್ಯಾಂಗ್‌ನ ನಾಲ್ವರು ಹರಾಮಿ ಯುವಕರು ತಮ್ಮ ಮೋಜು-ಮಸ್ತಿಗಾಗಿ ಹಣಕ್ಕಾಗಿ ದೇವಸ್ಥಾನಗಳನ್ನೇ ಟಾರ್ಗೆಟ್ ಮಾಡಿಕೊಂಡು ಬೀಗ ಮುರಿದು ದೇವರ ಮೈಮೇಲಿನ ಚಿನ್ನಾಭರಣಗಳನ್ನು ಸದ್ದಿಲ್ಲದೇ ಕದ್ದು ಪರಾರಿಯಾಗುತ್ತಿದ್ದರು. ಐನಾತಿ ಯುವಕರ ಕೃತ್ಯ ಸಾರ್ವಜನಿಕರಿಗೆ ಮತ್ತು ಪೊಲೀಸರಿಗೆ ತೀವ್ರ ತಲೆನೋವಾಗಿತ್ತು. ಕಳ್ಳತನದ ಪ್ರಕರಣಗಳನ್ನು ಸವಾಲಾಗಿ ಸ್ವೀಕರಿಸಿದ ಚತುರ ಹಾಗೂ ಧಾಡಸಿ ಸಿಪಿಐ ರವಿಚಂದ್ರ ಡಿ.ಬಿ., ಪಿಎಸ್ಐ ಮಾಳಪ್ಪ ಪೂಜೇರಿ ಮತ್ತು ಸಿಬ್ಬಂದಿಗಳು ಡೈನಾಮಿಕ್ ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ, ಡಿವೈಎಸ್ಪಿ ಪ್ರಶಾಂತ ಮುನ್ನೊಳ್ಳಿ ಇವರ ಸೂಕ್ತ ನಿರ್ದೇಶನದಲ್ಲಿ ಕರಾರುವಕ್ಕಾದ ಮಾಹಿತಿ ಆಧರಿಸಿ ನಾಲ್ಕು ಜನ ಐನಾತಿ ಕಳ್ಳರನ್ನು ಬಂಧಿಸಿ ಅವರಿಂದ ಎಂಟು ದೇವಸ್ಥಾನಗಳ ಕಳ್ಳತನ ಪ್ರಕರಣಗಳನ್ನು ಭೇದಿಸಿ 11.52 ಲಕ್ಷ ರೂ.ಗಳ ಚಿನ್ನಾಭರಣ ಮತ್ತು ಇನ್ನಿತರ ಸ್ವತ್ತನ್ನು ವಶಪಡಿಸಿಕೊಂಡು ಜೈಲಿಗಟ್ಟುವಲ್ಲಿ ಯಶಸ್ವಿಯಾದ ಪ್ರಕರಣ ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕಿನ ಹಾರೂಗೇರಿ ಪೊಲೀಸ್ ಠಾಣೆಯಿಂದ ವರದಿಯಾಗಿದೆ.**

ಬೆಳಗಾವಿ
✍ ಮನ್ನಾಪೂರ

ಇಂದಿನ ಬಹುತೇಕ ಯುವಕರಿಗೆ ಮೈಮುರಿದು, ನಡುಬಗ್ಗಿಸಿ ಶ್ರಮವಹಿಸಿ ದುಡಿಯುವುದು ಬೇಡವಾಗಿದೆ. ತಾವು ದಿಢೀರನೇ ಶ್ರೀಮಂತರಾಗಬೇಕೆಂಬ ಹುಚ್ಚು ಸಾಮಾನ್ಯವಾಗಿದೆ. ಅದರಲ್ಲೂ ಸ್ವಾಭಿಮಾನದ ಬದುಕು ಎಂದರೆ ಅಸಹ್ಯ ಎಂದೆನಿಸಿಕೊಂಡಿದ್ದಾರೆ. ಗುಂಡು... ತುಂಡು... ಗುಟಕಾ... ತೊಡೆಗಳ ಚಪಲಕ್ಕಾಗಿ ಹಣ ಬೇಕು. ಅದಕ್ಕಾಗಿ ಅಂತಹ ಹಣ ಸಲೀಸಾಗಿ ಹೊಂದಿಸಲು ಇಲ್ಲೊಂದು 'ಚಂಡಾಲ ಚೌಕಡಿ' ಗ್ಯಾಂಗ್ ಒಂದು ದೇವಸ್ಥಾನಗಳನ್ನೇ ಟಾರ್ಗೆಟ್ ಮಾಡಿಕೊಂಡು ದೇವರ ಮೂರ್ತಿಯ ಮೇಲೆ ಹಾಕಿದ ಬಂಗಾರದ ಚಿನ್ನಾಭರಣ ಗಳನ್ನು ಕದ್ದು ಸದ್ದಿಲ್ಲದೇ ಪರಾರಿಯಾಗುತ್ತಿದ್ದ ನಾಲ್ವರು ಐನಾತಿ ಯುವಕರಿಂದ ಹಾರೂಗೇರಿಯ ಟಪ್-ಕಾಪ್ ಗಳಿಗೆ ಸಿಕ್ಕು ಬಿದ್ದು ಜೈಲು ಸೇರಿ ಕಂಬಿ ಎಣಿಸುತ್ತ ತಂಗಳು ಮುರಿಯುತ್ತಿದ್ದಾರೆ. ಇದರ ಕುರಿತಾಗಿ 'ಪೊಲೀಸ್ ನ್ಯೂಸ್' ವರದಿ ನೀಡಿದೆ.

### 'ಏಳು ಮಕ್ಕಳ ತಾಯಿ' ಗುಡಿ ಕಳ್ಳತನ...

ರಾಯಭಾಗ ತಾಲ್ಲೂಕಿನ ಹಾರೂಗೇರಿ ಪೊಲೀಸ್ ಠಾಣೆ ವ್ಯಾಪ್ತಿಯ ಅಗಳವಾಡಿ ಗ್ರಾಮದ ಹುಣಸೀಕೋಡಿ ತೋಟದ ಪರಿಸರದಲ್ಲಿರುವ 'ಏಳು ಮಕ್ಕಳ ತಾಯಿ' ದೇವಸ್ಥಾನದ ಬಾಗಿಲಿಗೆ ಹಾಕಿದ್ದ ಬೀಗ ಮುರಿದು ದೇವಿಯ ಮೂರ್ತಿಗೆ ತೊಡಿಸಲಾಗಿದ್ದ ಚಿನ್ನಾಭರಣಗಳನ್ನು ಅದ್ಯಾರೋ ಕಳ್ಳರು ದಿನಾಂಕ 5-10-2024ರಂದು ಕಳ್ಳತನ ಮಾಡಿಕೊಂಡು ಹೋಗಿದ್ದರು. 1.26 ಲಕ್ಷ ರೂ.



ಎಸ್ಪಿ ಡಾ. ಭೀಮಾಶಂಕರ ಗುಳೇದ



ಹೆಚ್ಚುವರಿ ಎಸ್ಪಿ ಶ್ರುತಿ ಎನ್.ಎಸ್.




ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ

ಮೌಲ್ಯದ 35 ಗ್ರಾಂ ಚಿನ್ನದ ಗಂಟನ್ ಗುಳದಾಳಿ, 36 ಸಾವಿರ ರೂ.ಗಳ ಮೌಲ್ಯದ ಚಿನ್ನದ ಬೊರಮಾಳ ಸರ 10 ಗ್ರಾಂ, ಸಣ್ಣ ಗುಳದಾಳಿ ಚಿನ್ನದ್ದು 10 ಗ್ರಾಂ, 36 ಸಾವಿರ ಮೌಲ್ಯದ್ದು, 5 ಗ್ರಾಂ ಚಿನ್ನದ ಕಿವಿಯಲ್ಲಿನ ಜುಮುಕಿ 18 ಸಾವಿರ ಮೌಲ್ಯದ್ದು, ಬೆಳ್ಳಿ ಗುಂಡಗಡಿಗೆ ಬೆಳ್ಳಿ ಕಿರೀಟ, ಬೆಳ್ಳಿ ಮೂಗುತಿ, ಇವುಗಳ ಮೌಲ್ಯ 14 ಸಾವಿರ ರೂ.ಗಳು, ಒಟ್ಟಾರೆಯಾಗಿ 2.16 ಲಕ್ಷ ರೂ. ಮೌಲ್ಯದ 260 ಗ್ರಾಂ ಚಿನ್ನಾಭರಣ ಮತ್ತು ಬೆಳ್ಳಿಯ ಆಭರಣದ ಮೌಲ್ಯ 14 ಸಾವಿರ ಸೇರಿದಂತೆ 2.30 ಲಕ್ಷ ರೂ.ಗಳ ಮೌಲ್ಯದ ವಸ್ತುಗಳನ್ನು ಕಳ್ಳತನ ಮಾಡಲಾಗಿತ್ತು. ಈ ಘಟನೆಯಿಂದ ಅಳಗವಾಡಿ ಪರಿಸರದಲ್ಲಿ ಏಳು ಮಕ್ಕಳ ತಾಯಿ ಭಕ್ತಾದಿಗಳಲ್ಲಿ ತೀವ್ರ ಆತಂಕ ಸೃಷ್ಟಿಯಾಗಿತ್ತು.

### ಪೊಲೀಸರಿಗೆ ದೂರು...

ದಿನಾಂಕ 09-10-2024ರಂದು ಅಳಗವಾಡಿ ಗ್ರಾಮದ ಅನೀಲ ಶಂಕರ ದತ್ತವಾಡೆ ಹಾರೂಗೇರಿಯ ಪೊಲೀಸ್ ಠಾಣೆಗೆ ಧಾವಿಸಿ ಬಂದು ಅಂದು ಕರ್ತವ್ಯದ ಮೇಲಿದ್ದ ಪಿಎಸ್ಐ ಮಾಳಪ್ಪ ಪೂಜೇರಿಯವರನ್ನು ಕಂಡು ದೇವಸ್ಥಾನದಲ್ಲಿ ಕಳ್ಳತನವಾದ ಕುರಿತು ವಿಷಯ ತಿಳಿಸಿ ವಿವರವಾದ ದೂರನ್ನು ನೀಡಿದರು. ತಕ್ಷಣ ವಿಷಯದ ಗಂಭೀರತೆಯನ್ನು ಅರಿತುಕೊಂಡ ಪಿಎಸ್ಐ ಮಾಳಪ್ಪ ಪೂಜೇರಿ ಅವರು ಸಿಪಿಐ ರವಿಚಂದ್ರ, ಡಿ.ಬಿ., ಅಥಣಿಯ ಡಿವೈಎಸ್ಪಿ ಪ್ರಶಾಂತ ಮುನ್ನೊಳ್ಳಿ ಅವರಿಗೆ ವಿಷಯ ತಿಳಿಸಿ ಅವರ ನಿರ್ದೇಶನದಂತೆ ಪ್ರಕರಣ ದಾಖಲಿಸಿಕೊಂಡರು.





ನಾಲ್ವರು ಐನಾತಿ ಕಳ್ಳರಿಂದ ವಶಪಡಿಸಿಕೊಂಡ ಚಿನ್ನಾಭರಣಗಳು

ಸಿಪಿಐ ರವಿಚಂದ್ರ, ಡಿ.ಬಿ., ಪಿಎಸ್ಐ ಮಾಳಪ್ಪ ಪೂಜೇರಿ ಮತ್ತು ಸಿಬ್ಬಂದಿಗಳು ಘಟನಾ ಸ್ಥಳಕ್ಕೆ ಧಾವಿಸಿ ಬಂದು ಸೂಕ್ಷ್ಮವಾಗಿ ಪರಿಶೀಲನೆ ನಡೆಸಿ ಪಂಚನಾಮೆ ಜರುಗಿಸಿದರು. 'ಏಳು ಮಕ್ಕಳ ತಾಯಿ' ಗುಡಿಯಲ್ಲಿ ನಡೆದ ಕಳ್ಳತನ ಪ್ರಕರಣದ ವಿವರವನ್ನು ಡಿವೈಎಸ್ಪಿ ಪ್ರಶಾಂತ ಮುನ್ನೊಳ್ಳಿ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ, ಎಸ್ಪಿ ಡಾ. ಭೀಮಾಶಂಕರ ಗುಳೇದ ಅವರಿಗೆ ತಿಳಿಸಿ ಅವರ ನಿರ್ದೇಶನದಂತೆ ಶತಾಯ-ಗತಾಯ ಕಳ್ಳತನ ಪ್ರಕರಣವನ್ನು ಪತ್ತೆ ಮಾಡಲೇಬೇಕೆಂದು ಸವಾಲಾಗಿ ಸ್ವೀಕರಿಸಿದರು.

### ದೇವಸ್ಥಾನಗಳೇ ಇವರ ಟಾರ್ಗೆಟ್...

ಹಾರೂಗೇರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಮೊದಲು ಬಸ್ತವಾಡ, ಮುಗಳಖೋಡ, ಹಿಡಕಲ್, ಹಾರೂಗೇರಿ, ನಿಡಗುಂದಿ ಮತ್ತು ಅಥಣಿ ತಾಲ್ಲೂಕಿನ ಸತ್ತಿ ಊರುಗಳ ದೇವಸ್ಥಾನಗಳಲ್ಲಿ ನಡೆದಿದ್ದ ಎಲ್ಲ ಕಳ್ಳತನಗಳು ಒಂದೇ ಗ್ಯಾಂಗ್‌ನ ಕೃತ್ಯವಾಗಿತ್ತು. ಇಲ್ಲೂ ಅಳಗವಾಡಿಯ 'ಏಳು ಮಕ್ಕಳ ತಾಯಿ' ದೇವಸ್ಥಾನದಲ್ಲಿ ನಡೆದಿದ್ದ ಕಳ್ಳತನ ಕೂಡಾ ಒಂದೇ ಮಾದರಿಯಾಗಿತ್ತು. ಈ ಎಲ್ಲಾ ಕಳ್ಳತನ ಗಳು ಒಂದೇ ಗ್ಯಾಂಗಿನ ಕೃತ್ಯವಾಗಿದೆ ಎಂದು ಸಿಪಿಐ ರವಿಚಂದ್ರ, ಡಿ.ಬಿ. ಒಂದು ನಿರ್ಧಾರಕ್ಕೆ ಬಂದಿದ್ದರು. ಶತಾಯ-ಗತಾಯ ಏಳೆಂಟು ಊರಿನ ಸಾರ್ವಜನಿಕರ ದೈವಿ ಭಾವನೆಗಳಿಗೆ ಬರೆ ಎಳೆದಿದ್ದ ಈ ಕಳ್ಳರ ಗ್ಯಾಂಗ್ ಮಟ್ಟಾ ಹಾಕಲೇಬೇಕು ಎಂದು ನಿರ್ಧಾರಕ್ಕೆ ಬಂದಿದ್ದರು. ಪೊಲೀಸರಿಗೆ ತೀವ್ರ ತಲೆನೋವಾಗಿದ್ದ ಐನಾತಿ ಕಳ್ಳರ ಬಂಧನಕ್ಕೆ ಚತುರ ಮತ್ತು ಧಾಡಸಿ ಸಿಪಿಐ ರವಿಚಂದ್ರ, ಡಿ.ಬಿ. ಕಾರ್ಯತಂತ್ರ ಒಂದನ್ನು ರೂಪಿಸಿದರು.

### ವಿಶೇಷ ತನಿಖಾ ತಂಡ ರಚನೆ...

ಅಥಣಿಯ ಡಿವೈಎಸ್ಪಿ ಪ್ರಶಾಂತ ಮುನ್ನೊಳ್ಳಿ ತುಂಬಾ ಇಂಟಲಿಜೆಂಟ್ ಆಫೀಸರ್. ಅವರ ನಿರ್ದೇಶನದಂತೆ ದೇವಸ್ಥಾನ ಕಳ್ಳರ ಪತ್ತೆಗೆ ವಿಶೇಷ ತನಿಖಾ ತಂಡ ರಚಿಸಲು ಮುಂದಾದ ಸಿಪಿಐ ರವಿಚಂದ್ರ ಅವರು ಪಿಎಸ್ಐ ಮಾಳಪ್ಪ ಪೂಜೇರಿ, ಸಿಬ್ಬಂದಿಗಳಾದ ಬಿ.ಎಲ್. ಹೊಸಟ್ಟಿ, ರಮೇಶ ಮುಂದಿನಮನಿ, ಎ.ಎಸ್. ಶಾಂಡಗೆ, ಪಿ.ಎಂ. ಸಪ್ತಸಾಗರ, ಹೆಚ್.ಆರ್. ಅಂಬಿ ಮತ್ತು ಬೆಳಗಾವಿಯ ಟೆಕ್ನಿಕಲ್ ಸೆಲ್‌ನ ಸಹಾಯಕ ವಿನೋದ ಠಕ್ಕನ್ನವರ ಒಳಗೊಂಡಂತೆ ಒಂದು ವಿಶೇಷ ತನಿಖಾ ತಂಡವನ್ನು ರಚಿಸಿ, ಖುದ್ದು ಸಿಪಿಐ ರವಿಚಂದ್ರ ಡಿ.ಬಿ. ನೇತೃತ್ವದ ವಹಿಸಿದರು. ವಿಶೇಷ ತನಿಖಾ ತಂಡಕ್ಕೆ ಅಗತ್ಯ ಸಲಹೆ ಮತ್ತು ಸೂಚನೆ ನೀಡುತ್ತ ಬೆನ್ನು ತಟ್ಟಿ ಹುರುಪು ತುಂಬಿದರು.



ಡಿವೈಎಸ್ಪಿ ಪ್ರಶಾಂತ ಮುನ್ನೊಳ್ಳಿ



ಸಿಪಿಐ ರವಿಚಂದ್ರ, ಡಿ.ಬಿ.



ಪಿಎಸ್ಐ ಮಾಳಪ್ಪ ಪೂಜೇರಿ

☞ 12

# ಎಳೆಯ ಮಿಂಡನ ಸಂಗ ಬಿಟ್ಟಿರಲಾರದ ಸೆಕ್ಸಿ ಆಂಟಿ... ಕಾಮದಾಟಕ್ಕೆ ಅಡ್ಡಿಯಾದ ಗಂಡನನ್ನು ಹಳೆಯ ಮಿಂಡನಿಗೆ ಸುಫಾರಿ ನೀಡಿ ಬರ್ಬರವಾಗಿ ಕೊಲ್ಲಿಸಿದಳು!

**ಆಕೆ 38 ವರ್ಷದ ಚಂದುಳ್ಳಿ ಆಂಟಿ. ಅದಾಗಲೇ ಮದುವೆಯಾಗಿ 20 ವರ್ಷಗಳ ಸಂಸಾರ ನಡೆಸಿದ ಮೂರು ಮಕ್ಕಳ ತಾಯಿ. ಮನೆಯಲ್ಲಿ ಮದುವೆಗೆ ಬಂದ ಎದೆಯುದ್ದ ಬೆಳೆದ ಮಗಳಿದ್ದಾಳೆ. ಆಂಟಿಯ ಮೈ-ಮನದ ಕಾಮದ ಕಿಚ್ಚು ಇನ್ನೂ ಧಗ-ಧಗಿಸುತ್ತಿತ್ತು. ಊರಿನಲ್ಲಿದ್ದ ತನಗಿಂತ 10 ವರ್ಷ ಚಿಕ್ಕವನಿದ್ದ ಎಳಸು ತರುಣನನ್ನು ಬುಟ್ಟಿಗೆ ಹಾಕಿಕೊಂಡು ಕಂಡ... ಕಂಡಲ್ಲಿ ಕಳ್ಳ ಸುಖ ಅನುಭವಿಸುತ್ತಿದ್ದಳು. ಎಳಸು ತರುಣ ನೀಡುತ್ತಿದ್ದ ಸುಖ ಬಿಟ್ಟಿರಲಾರದೇ ಹಪ-ಹಪಿಸುತ್ತಿದ್ದಳು. ಇತ್ತೀಚಿಗೆ ಆಕೆಯ ಗಂಡನಿಗೆ ಹೆಂಡತಿಯ ಹಾದರ ಗೊತ್ತಾಗಿ ಉರಿದುಬಿದ್ದು ಖಡಕ್ ಎಚ್ಚರಿಕೆ ನೀಡಿ 'ನಿನ್ನ ಹಾದರ ಬಿಟ್ಟು ತೆಪ್ಪಗಿರು' ಎಂದಿದ್ದನು. ಎಳಸು ತರುಣನನ್ನು ಬಿಟ್ಟಿರಲಾಗದೇ ಖತರ್‌ನಾಕ್ ಕಾಮಿನಿ ಒಳಗೊಳಗೆ ಬುಸುಗುಟ್ಟಿದಳು. ತಮ್ಮಿಬ್ಬರ ಕಾಮಸುಖಕ್ಕೆ ಅಡ್ಡಿ ಬಂದ ಗಂಡ ಬದುಕಿರಬಾರದು ಎಂದು ಎಳಸು ಮಿಂಡನೊಡನೆ ಸಂಚು ರೂಪಿಸಿದಳು. ಆಂಟಿಯ ಹಳೆಯ ಮಿಂಡನಿಗೆ ಆಕೆಯ ಗಂಡನನ್ನು ಕೊಲೆ ಮಾಡಲು 1.50 ಲಕ್ಷ ರೂ.ಗಳ ಸುಫಾರಿಯನ್ನು ಎಳಸು ಮಿಂಡ ನೀಡಿಬಿಟ್ಟನು. ಅಂದುಕೊಂಡಂತೆ ಅದೊಂದು ದಿನ ಕುಡಿದು ಟೈಟಾಗಿ ಮನೆಯ ಜಗುಲಿಯಲ್ಲಿ ಮಲಗಿದ್ದ ಚಂದುಳ್ಳಿ ಆಂಟಿಯ ಗಂಡನನ್ನು ಸದ್ದಿಲ್ಲದೇ ಬರ್ಬರವಾಗಿ ಕೊಲೆ ಮಾಡಿ ಹಳೆಯ ಮಿಂಡ ಪರಾರಿ ಆಗಿಬಿಟ್ಟನು. ಪ್ರಕರಣ ದಾಖಲಿಸಿಕೊಂಡು ತನಿಖೆಗಿಳಿದ ಚತುರ ಮತ್ತು ಧಾಡಸಿ ಪೊಲೀಸ್ ಇನ್ಸ್‌ಪೆಕ್ಟರ್ ರಾಘವೇಂದ್ರ ಹವಾಲ್ದಾರ ಮತ್ತು ಸಿಬ್ಬಂದಿಗಳು ಚಾಲೆಂಜ್ ಆಗಿ ಕೊಲೆ ನಡೆದ 24 ಗಂಟೆಗಳಲ್ಲಿ ಸುಫಾರಿ ಹಂತಕ, ಕಾಮುಕಿ ಆಂಟಿ ಮತ್ತವಳ ಎಳಸು ಮಿಂಡನನ್ನು ಹೆಡೆಮುರಿ ಕಟ್ಟಿ ಜೈಲಿಗೆ ಅಟ್ಟಿದ ರೋಚಕ ವರದಿಯೊಂದು ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ನೇಸರಗಿ ಪೊಲೀಸ್ ಠಾಣೆ ವ್ಯಾಪ್ತಿಯ ವಣ್ಣೂರ ಗ್ರಾಮದಿಂದ ವರದಿಯಾಗಿದೆ.**


ಹಾದರದ ಹೆಂಡತಿಗೆ ಬಲಿಯಾದ ನಿಂಗಪ್ಪ ಬಸಪ್ಪ ಅರವಳ್ಳಿ


ತನ್ನ ಹಾದರಕ್ಕೆ ಗಂಡನನ್ನೇ ಹೆಣವಾಗಿರಿಸಿದ ಕಾಮುಕಿ ನೀಲಮ್ಮ


ಎಸ್ಪಿ ಡಾ. ಭೀಮಾಶಂಕರ ಗುಳೇದ


ಹೆಚ್ಚುವರಿ ಎಸ್ಪಿ ಶ್ರುತಿ ಎನ್.ಎಸ್.



ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ

**ಬೆಳಗಾವಿ**
✍ ಮನ್ನಾಪೂರ

ಕಾಮದ ಪಿತ್ತ ನೆತ್ತಿಗೇರಿದರೆ ಮನುಷ್ಯರಾದವರು ಸಂಪೂರ್ಣವಾಗಿ ತಮ್ಮ ವಿವೇಕ ಕಳೆದುಕೊಂಡು ತಾವೇನು ಮಾಡುತ್ತಿದ್ದೇವೆ ಎಂಬ ಅರಿವು ಅವರಿಗಿರುವುದಿಲ್ಲ. ಇಲ್ಲಿ ಸಂಬಂಧ, ರೂಪ, ಯೌವನ, ಜಾತಿ, ಶ್ರೀಮಂತ-ಬಡವ ಎಂಬುದು ಪರಿಕಲ್ಪನೆಗೆ ಬಾರದು. ಕೇವಲ ಅವರಿಗೆ 'ಕಾಮಸುಖ' ಪರಮ ಹಿತವಾಗಿರುತ್ತದೆ. ಇದನ್ನು ವಿರೋಧಿಸುವರು ಯಾರೇ ಆಗಿರಲಿ, ಎಂತಹುದೇ ಸಂಬಂಧವಾಗಿರಲಿ, ಅಣ್ಣ-ತಮ್ಮ, ಗಂಡ, ಮಕ್ಕಳು, ತಂದೆ-ತಾಯಿ ಎಂದು ನೋಡುವುದಿಲ್ಲ. ಅದಕ್ಕೆ ಹೇಳುವುದು 'ಕಾಮ ಕುರುಡು' ಎಂದು. 'ಕಾಮದ ಪಿತ್ತ' ಮಾಡುವ ಅನಾಹುತಕಾರಿ ಘಟನೆಯನ್ನು ಯಾರು ಊಹಿಸಲಾರದ್ದು ಅಷ್ಟು ಭಯಾನಕವಾಗಿರುತ್ತದೆ. ಇಲ್ಲೂ ಕೂಡಾ ಕಾಮದ ಪಿತ್ತ ನೆತ್ತಿಗೇರಿಸಿಕೊಂಡ 38 ವರ್ಷದ ಚಂದುಳ್ಳಿ ಆಂಟಿ ತನ್ನ 27 ವರ್ಷದ ಎಳಸು ಮಿಂಡನ ಜತೆ ಸೇರಿ ತನ್ನ ಮತ್ತೊಬ್ಬ ಹಳೆಯ ಮಿಂಡನಿಗೆ ಸುಫಾರಿ ನೀಡಿ ಅಗ್ನಿಸಾಕ್ಷಿಯಾಗಿ ಸಪ್ತಪದಿ ತುಳಿದಿದ್ದ ತನ್ನ ಗಂಡನನ್ನೇ ಕೊಲ್ಲಿಸಿದ್ದಾಳೆ. ಮಾಡಿದ ತಪ್ಪಿಗಾಗಿ ಇಂದು ಈ ಕಾಮುಕಿ ತನ್ನ ಇಬ್ಬರು ಮಿಂಡರೊಂದಿಗೆ ಜೈಲು ಸೇರಿ ಕಂಬಿ ಎಣಿಸುತ್ತ ತಂಗಳು ಮುರಿಯುತ್ತಿದ್ದಾಳೆ. ಕಾಮದ ಪಿತ್ತ ನೆತ್ತಿಗೇರಿಸಿಕೊಂಡವರ ಕರಾಳ ಕಥೆಯನ್ನು 'ಪೊಲೀಸ್ ನ್ಯೂಸ್' ವರದಿಯಾಗಿರಿಸಿದೆ.

### ವಣ್ಣೂರಿನ ನತದೃಷ್ಟ ನಿಂಗಪ್ಪ...

ಬದುಕಿನಲ್ಲಿ ಏನಾದರೂ ಸಾಧಿಸಲೇಬೇಕೆಂಬ ಮಹದಾಸೆಯಿಂದ ಜೀವನ ನಡೆಸುತ್ತಿದ್ದ ನಿಂಗಪ್ಪ ಅರವಳ್ಳಿ (41 ವ) ನಿಜಕ್ಕೂ ನತದೃಷ್ಟನೆಂದು ಹೇಳದೆ ವಿಧಿಯಿಲ್ಲ. ಅಗ್ನಿಸಾಕ್ಷಿಯಾಗಿ ತಾಳಿಕಟ್ಟಿದ ಹೆಂಡತಿಯೇ ತನಗೆ ಮೃತ್ಯುವಾಗುತ್ತಾಳೆ ಎಂದು ಕನಸು ಮನಸಲ್ಲೂ ನಿಂಗಪ್ಪ ಯೋಚಿಸಿರಲಿಲ್ಲ. 'ತಾನೊಂದು ಬಗೆದರೆ ದೈವವೊಂದು ಬಗೆಯಿತು' ಎಂಬಂತೆ ನಿಂಗಪ್ಪ ಅರವಳ್ಳಿಯ ಹಾದರದ ಹೆಂಡತಿ ನೀಲಮ್ಮಳ ದುಷ್ಟ ಸಂಚಿಗೆ ಕ್ರೂರವಾಗಿ ಕೊಲೆಯಾಗಿ ಹೋಗಿದ್ದಾನೆ. ನಿಂಗಪ್ಪನ ಹಠಾತ್ ಭೀಕರ ಕೊಲೆಯಿಂದ ಬೈಲಹೊಂಗಲ ತಾಲ್ಲೂಕಿನ ವಣ್ಣೂರ ಗ್ರಾಮದಲ್ಲಿ ಇಡೀ ಊರಿಗೆ ಊರು ಸೂತಕದ ಛಾಯೆಯಲ್ಲಿದೆ. ಕೃಷಿ ಕೂಲಿಯನ್ನೇ ನಂಬಿದ್ದ ನಿಂಗಪ್ಪ ಅರವಳ್ಳಿಯ ಆರ್ಥಿಕ ಪರಿಸ್ಥಿತಿ ಅಷ್ಟೇನೂ ಸರಿಯಿರಲಿಲ್ಲ. ವಣ್ಣೂರು ಗ್ರಾಮದಲ್ಲಿ ಪುಟ್ಟ ಮನೆಯೊಂದರಲ್ಲಿ ವಾಸವಿದ್ದನು. ನೋಡಲು ಸ್ಫುರದ್ರೂಪಿಯಾಗಿದ್ದ ನಿಂಗಪ್ಪ ಹೇಳಿಕೊಳ್ಳುವಂತಹ ವಿದ್ಯಾಭ್ಯಾಸ ಮಾಡದೇ ಕೃಷಿ / ಕೂಲಿಯನ್ನು ನಂಬಿ ಬದುಕುತ್ತಿದ್ದನು.


ಕೊಲೆಯಾದ ನಿಂಗಪ್ಪನ ಅಣ್ಣ ರುದ್ರಪ್ಪ

### 20 ವರ್ಷಗಳ ಹಿಂದೆ ನೀಲಮ್ಮನೊಂದಿಗೆ...

ಇದೀಗ ಇಪ್ಪತ್ತು ವರ್ಷಗಳ ಹಿಂದೆ ಹರೆಯಕ್ಕೆ ಬಂದಿದ್ದ ನಿಂಗಪ್ಪ ಪಕ್ಕದೂರಿನ ನೀಲಮ್ಮಳನ್ನು ಮದುವೆ ಮಾಡಿಕೊಳ್ಳಲು ನೋಡಲು ಹೋಗಿದ್ದನು. ನೀಲಮ್ಮ ತೆಳ್ಳಗೆ-ಬೆಳ್ಳಗೆ ಚಂದುಳ್ಳಿ ಚೆಲುವೆ ಆಗಿದ್ದಳು. 'ಹಣೆಯಕ್ಕಿ ಕೂಡಿ ಬಂದರೆ ಹಡೆದವರು ಬೇಕಿಲ್ಲ' ಎಂಬ ಮಾತಿನಂತೆ ನೀಲಮ್ಮ ಹಾಗೂ ನಿಂಗಪ್ಪನ ಕುಟುಂಬದವರು ಪರಸ್ಪರ ಒಪ್ಪಿಗೆ ಸೂಚಿಸಿದರು. ಅದಕ್ಕೂ ಮೊದಲೇ ನೀಲಮ್ಮ ಮತ್ತು ನಿಂಗಪ್ಪ ಒಬ್ಬರಿಗೊಬ್ಬರು ಇಷ್ಟವಾಗಿದ್ದರು. ಪರಿಣಾಮ ಎರಡು ಕಡೆಯ ಗುರು-ಹಿರಿಯರು ಕೂಡಿಕೊಂಡು ಅದೊಂದು ಶುಭ ಮುಹೂರ್ತದಲ್ಲಿ ನೀಲವ್ವಳ ಜತೆ ನಿಂಗಪ್ಪನ ಮದುವೆಯನ್ನು ಮಾಡಿ ಮುಗಿಸಿದ್ದರು. ತವರಿನಲ್ಲಿ ನೀಲಮ್ಮ ಎಲ್ಲ ತರಹದ ಅಡಿಗೆ-ಉಪಚಾರ ಸೇರಿದಂತೆ ರೀತಿ-ರಿವಾಜುಗಳನ್ನು ಕಲಿತಿದ್ದಳು.

### ಗಂಡನ ಮನೆಗೆ ಬಂದಳು...

ಇದೀಗ 20 ವರ್ಷಗಳ ಹಿಂದೆ ನಿಂಗಪ್ಪನ ಜತೆಗೆ ಸಪ್ತಪದಿ ತುಳಿದಿದ್ದ ಚೆಲುವೆ ನೀಲಮ್ಮ ಸಂಸಾರ ಸಾಗಿಸಲು ನಿಂಗಪ್ಪನ ಊರಾದ ವಣ್ಣೂರ ಗ್ರಾಮಕ್ಕೆ ಬಂದಳು. ಕೃಷಿ/ಕೂಲಿ ಮನೆತನದಲ್ಲಿ ಬಲು ಬೇಗ ಹೊಂದಿಕೊಂಡಳು. ತಕ್ಕಮಟ್ಟಿಗೆ ವ್ಯಾಸಂಗ ಮಾಡಿದ್ದ ನೀಲಮ್ಮ ಮೂಲತಃ ಅಲಂಕಾರ ಪ್ರಿಯಳು. ದಿನವಿಡೀ ದುಡಿದು ರಾತ್ರಿಯಾದರೆ ಸಾಕು ಗಂಡ ನಿಂಗಪ್ಪನ ತೋಳ್ತೆಕ್ಕೆಯ ಬಿಸಿ ಉಸಿರಿನಲ್ಲಿ ಹಿತವಾದ ಸ್ಪರ್ಶದಲ್ಲಿ ಸುಖಪಡುತ್ತ ನವಿರಾಗಿ ನರಳುತ್ತಿದ್ದಳು. ನಿಂಗಪ್ಪನೊಡನೆ ಉತ್ತಮ ದಾಂಪತ್ಯ ಜೀವನ ನಡೆಸಿದ ಪರಿಣಾಮ ನೀಲಮ್ಮಳಿಗೆ ಪಟ... ಪಟನೇ ಮೂರು ಮಕ್ಕಳಾಗಿಬಿಟ್ಟವು. ಈಗಂತೂ ನಿಂಗಪ್ಪನ ಸಂಸಾರ ದೊಡ್ಡದಾಯಿತು. ಆತನಿಗೆ ಕುಟುಂಬದ ಜವಾಬ್ದಾರಿ ಕೂಡಾ ಹೆಚ್ಚಾಯಿತು. ಹೇಗೋ ತನ್ನ ಇತಿ-ಮಿತಿಯಲ್ಲಿ ತನ್ನ ಕುಟುಂಬವನ್ನು ಮುನ್ನಡೆಸುತ್ತಿದ್ದನು.

### ಹಾಸಿಗೆಯಲ್ಲಿ ಕೆರಳುತ್ತಿದ್ದಳು...

ನೀಲಮ್ಮ ಶೃಂಗಾರ ಪ್ರಿಯೆ. ಸದಾ ಕಾಲ ತಾನು ಇನ್ನು ಚೆನ್ನಾಗಿ ಕಾಣಬೇಕೆಂದು ಹಂಬಲಿಸುತ್ತಿದ್ದಳು. ಜತೆಗೆ ಅವಳ ಮೈ-ಮನದಲ್ಲಿ ತೀರದ ಕಾಮದಾಹವಿತ್ತು. ರಾತ್ರಿಯಾದರೆ ಸಾಕು ಇತ್ತೀಚಿಗೆ ನೀಲಮ್ಮ ಗಂಡನೊಂದಿಗೆ ಹಾಸಿಗೆಯಲ್ಲಿ ಕೆರಳುತ್ತಿದ್ದಳು. ಗಂಡನನ್ನು ಉದ್ರೇಕಿಸಿ ಮೇಲೆಳೆದುಕೊಂಡು ಬಿಗಿದಪ್ಪಿಕೊಂಡು ಸುಖಿಸಲು ತವಕಿಸುತ್ತಿದ್ದಳು. ನಿಂಗಪ್ಪ ಮೇಲೆ ಬಂದು ವಿಜೃಂಭಿಸುತ್ತಲೇ ಒಮ್ಮೆಲೇ ಸೋತು ಸುಣ್ಣವಾಗಿ ಬಿಡುತ್ತಿದ್ದನು. ಆಗ ತೀರಾ ಉತ್ತುಂಗದ ಪರಕಾಷ್ಟೆಯಲ್ಲಿದ್ದ ನೀಲಮ್ಮ 'ಹೂಂ... ಬೇಗ... ಜೋರಾಗಿ ಮಾಡು' ಎಂದು ಗಂಡನಿಗೆ ಹುರಿದುಂಬಿಸಿದರೂ ಏನೂ ಪ್ರಯೋಜನವಾಗದೇ ರಾತ್ರಿಯಿಡೀ ನಿದ್ರೆ ಬರದೇ ಹಾಸಿಗೆಯಲ್ಲಿ ಎಚ್ಚರವಾಗಿರುತ್ತಿದ್ದಳು. ಆದರೆ ಗಂಡ ನಿಂಗಪ್ಪ ಮಾತ್ರ ಅವಳತ್ತ ಬೆನ್ನು ಮಾಡಿ ಜೋರಾಗಿ ಗೊರಕೆ ಹೊಡೆಯುತ್ತ ನಿದ್ರೆಗೆ ಜಾರುತ್ತಿದ್ದನು. ಇದರಿಂದ ನೊಂದುಕೊಳ್ಳುತ್ತಿದ್ದ ನೀಲಮ್ಮ 'ಥೂ ನೀನು ಒಬ್ಬ ಗಂಡಸಾ...' ಎಂದು ತಾತ್ಸಾರ ಭಾವನೆ ತಾಳುತ್ತಿದ್ದಳು. ಹೀಗಾಗಿ ನೀಲಮ್ಮ ದಿನಕಳೆದಂತೆ ಗಂಡನ ಲೈಂಗಿಕ ಸುಖದತ್ತ ಆಕರ್ಷಣೆ ಕಳೆದುಕೊಂಡು ತನ್ನ ಕಾಮದಾಹ ಸಾಕು... ಸಾಕು ಎಂದು ತೀರಿಸಬಲ್ಲ ಗಂಡಸರನ್ನು ಹುಡುಕತೊಡಗಿದಳು.

### ರೌಡಿಶೀಟರ್‌ನೊಡನೆ ಅಕ್ರಮ ಸಂಬಂಧ...


ಜೀವನ ನಾವಂದುಕೊಂಡಂತೆ ಇರಲಾರದು. ಏನು ಬೇಕಾದರೂ ಅನಿರೀಕ್ಷಿತ ತಿರುವುಗಳು ಬಂದು ಜೀವನದ ದಿಕ್ಕು ಬದಲಾಗುವುದರಲ್ಲಿ ಎರಡು ಮಾತಿಲ್ಲ. ನೀಲಮ್ಮಳು ತನ್ನ ಕಾಮದ ಹಸಿವನ್ನು ತೀರಿಸಬಲ್ಲ ಗಡಸು ಗಂಡಸಿಗಾಗಿ ಸರ್ಚ್ ಮಾಡುವಾಗಲೇ ಪಕ್ಕದ ಊರಾದ ಗಜಮನಾಳದ ಯಲ್ಲಪ್ಪ ಕೋಣಿನ ಎಂಬ ರೌಡಿ ಶೀಟರ್‌ನತ್ತ ಆಕರ್ಷಿತಳಾದಳು. ಮುಂದೆ ಬಿದ್ದು ಅವನನ್ನು ಪರಿಚಯ ಮಾಡಿಕೊಂಡು ಕ್ರಮೇಣ ಅವನೊಂದಿಗೆ ಬೆರೆತುಕೊಂಡಳು. ತಾನೇ ಮುಂದಾಗಿ ಆತನೊಂದಿಗೆ ಸುಖಪಟ್ಟು ಇಷ್ಟದಿಂದಲೇ ಆತನಿಗೆ ಸುಖ ನೀಡಿದಳು. ಯಲ್ಲಪ್ಪ ಕೋಣಿನ ಮತ್ತು ನೀಲಮ್ಮಳ ಅನೈತಿಕ ಸಂಬಂಧ ಗುಟ್ಟಾಗಿ ಉಳಿಯದೇ ಊರಿನಲ್ಲಿ ರಟ್ಟಾಗಿ ಹೋಯಿತು. ಇದು ದಿನ ಕಳೆದಂತೆ ಗಂಡ ನಿಂಗಪ್ಪನ ಕಿವಿಗೂ, ಕಣ್ಣಿಗೂ ಬಿತ್ತು. ಆಗ ನಿಂಗಪ್ಪ ಹೆಂಡತಿ ನೀಲಮ್ಮ ಮತ್ತವಳ ಮಿಂಡನಿಗೆ ಖಡಕ್ ಎಚ್ಚರಿಕೆ ನೀಡಿ ಹೀಗಾದರೆ ಸರಿ ಇರಲಾರದು ಎಂದಿದ್ದನು. ಊರಿನಲ್ಲಿ ಇದೆಲ್ಲಾ ಬೇಡವೆಂದು ರೌಡಿಶೀಟರ್‌ಗೆ ಬುದ್ಧಿವಾದ ಹೇಳಿದಾಗ ಆತ ಸೈಲೆಂಟ್ ಆಗಿ ನೀಲಮ್ಮಳಿಂದ ಅಂತರ ಕಾಯ್ದುಕೊಂಡಿದ್ದನು. ಇದರಿಂದ ತೀರಾ ನೊಂದುಕೊಂಡು ತನ್ನ ಪಾಡಿಗೆ ತಾನಿರುತ್ತಿದ್ದ ನೀಲಮ್ಮ ಇನ್ನೆಂದು ನಾನು ಇಂತಹ ತಪ್ಪು ಮಾಡಬಾರದು ಎಂದುಕೊಂಡಿದ್ದಳು. ಆದರೆ ದಿನಕಳೆದಂತೆ ನೀಲಮ್ಮಳ ಮೈಮನದ ತೀರದ ದಾಹ ಮತ್ತೆ ಆಕೆಯನ್ನು ಎಳೆತಂದು ಅದೇ ಕೆಲಸಕ್ಕೆ ನಿಲ್ಲಿಸಿತು!


ಹಂತಕರ ಬಂಧನಕ್ಕೆ ಕಾರ್ಯತಂತ್ರ ರೂಪಿಸುತ್ತಿರುವ ಇನ್ಸ್‌ಪೆಕ್ಟರ್ ರಾಘವೇಂದ್ರ ಹವಾಲ್ದಾರ



## ಸೆಕ್ಸಿ ಆಂಟಿ ಮತ್ತವಳ ಎಳೆಯ ಮಿಂಡ, ಹಂತಕ ಹಳೆಯ ಮಿಂಡ ಸೇರಿ ಮೂವರ ಬಂಧನ!


ಸೆಕ್ಸಿ ಆಂಟಿಗೆ ಗಂಟು ಬಿದ್ದ ಹಂತಕನಾದ ಮಿಂಡ ಮಹೇಶ ಗೂಳನ್ನವರ


ಸೆಕ್ಸಿ ಅಂಟಿಯ ಹಳೆಯ ಮಿಂಡ ಹಂತಕ ಯಲ್ಲಪ್ಪ

### ಧರ್ಮಸ್ಥಳ ಸಂಘ ಸೇರಿದ್ದಳು...

ಮನೆಯಲ್ಲಿ ಆಗಲೇ ಮೂರು ಮಕ್ಕಳು ದೊಡ್ಡವರಾಗಿದ್ದರು. ಅವರಿಗೆ ಶಿಕ್ಷಣ, ಆರೋಗ್ಯ, ಬಟ್ಟೆಬರೆ, ಪುಸ್ತಕ ಎಂದೆಲ್ಲ ಖರ್ಚು-ವೆಚ್ಚ ಭಾರವಾಗತೊಡಗಿತ್ತು. ಇತ್ತೀಚಿಗೆ ಗಂಡ ನಿಂಗಪ್ಪ ಕುಡಿತಕ್ಕೆ ದಾಸನಾಗಿದ್ದನು. ಮನೆ ನಡೆಸುವುದು ಕಷ್ಟವೆನಿಸಿದಾಗ ಧರ್ಮಸ್ಥಳ ಸಂಘದಲ್ಲಿ ಸೇರಿಕೊಂಡಳು. ಇದು ಎರಡು-ಮೂರು ವರ್ಷದ ಹಿಂದಿನ ಮಾತು. ಸಾಲಕ್ಕಾಗಿ ಅಲೆದಾಡಿ ಸುಸ್ತಾದವಳಿಗೆ ಧರ್ಮಸ್ಥಳ ಸಂಘ 'ಸಂಜೀವಿನಿ'ಯಂತಾಗಿತ್ತು. ಸಂಘದಲ್ಲಿನ ಸದಸ್ಯರಿಗೆ ಸಾಲ ಕೊಡಿಸುವುದು, ಮರಳಿ ತುಂಬಿಸುವುದು ಮತ್ತು ಡೈರಿ ನಿಭಾಯಿಸುವ ಕೆಲಸದ ಜತೆಗೆ ಪಕ್ಕದ ಊರುಗಳಲ್ಲಿ ಸಭೆಗಳನ್ನು ಆಯೋಜಿಸುವ ಕೆಲಸ ನೀಲಮ್ಮನದಾಗಿತ್ತು. ಅರಳು ಹುರಿದಂತೆ ಪಟ... ಪಟನೇ ಮಾತನಾಡುತ್ತಿದ್ದ ನೀಲಮ್ಮ ಸಂಘದಲ್ಲಿ ತನ್ನ ಪ್ರಭಾವ ಬೆಳೆಸಿಕೊಂಡಿದ್ದಳು. ಹೀಗೆ ಬರುತ್ತಿದ್ದ ಸಂಬಳದಲ್ಲಿ ಮನೆ ನಡೆಸುತ್ತಿದ್ದಳು. ಇವಳ ದೊಡ್ಡ ಮಗಳು ಈಗಾಗಲೇ ಎದೆಯುದ್ದ ಬೆಳೆದು ಮದುವೆಗೆ ಬಂದಿದ್ದಾಳೆ.

### ಗಂಟುಬಿದ್ದ ಎಳಸು ಮಿಂಡ ಮಹೇಶ...

ವಣ್ಣೂರ ಗ್ರಾಮದ 27 ವರ್ಷದ ಕಟ್ಟುಮಸ್ತಾದ ಯುವಕ ಮಹೇಶ ಗೂಳನ್ನವರ ಎಂಬಾತ ಧರ್ಮಸ್ಥಳ ಸಂಘದಲ್ಲಿ ಕೆಲಸ ಮಾಡಿಕೊಂಡಿದ್ದನು. ಚೆಲುವೆ ನೀಲಮ್ಮಳು ಕೂಡಾ ಅಲ್ಲೇ ಕೆಲಸ ಮಾಡುತ್ತಿದ್ದಳು. ಕ್ರಮೇಣ ನೀಲಮ್ಮಳೇ ಮುಂದಾಗಿ ಮಹೇಶನನ್ನು ಮಾತನಾಡಿಸಿ ಪರಿಚಯ ಮಾಡಿಕೊಂಡಳು. ಸಂಘದಿಂದ ಸಭೆಗಳು ನಡೆದಾಗ ಪಕ್ಕದೂರಿಗೆ ಆತನ ಮೋಟಾರ್ ಸೈಕಲ್ ಮೇಲೆ ಕುಳಿತು ಆತನ ಭುಜ ಹಿಡಿದುಕೊಂಡು ಬೆನ್ನಿಗೆ ತನ್ನ ಎದೆಯನ್ನು ತಾಗಿಸಿ ತಾನಿನ್ನು ಹದಿನಾರರ ತರುಣಿ ಎಂಬಂತೆ ಇನ್ನಿಲ್ಲದ ವನಪು, ವಯ್ಯಾರ, ನಖರಾ ಮಾಡುತ್ತ ಮಹೇಶನನ್ನು ಆಕರ್ಷಿಸಿದಳು ವಣ್ಣೂರಿನ ವಯ್ಯಾರಿ ನೀಲಮ್ಮ. 'ಅನ್ನ ಹಳಸಿತ್ತು ನಾಯಿ ಹಸಿದಿತ್ತು' ಎನ್ನುವ ಹಾಗೇ ಮಹೇಶ ಮತ್ತು ನೀಮ್ಮಳ ಸ್ಥಿತಿಯಾಗಿತ್ತು. ಆಂಟಿಯ ಮಾದಕತೆಗೆ ತೀವ್ರ ಮನಸೋತಿದ್ದ ಮಹೇಶ ರೊಮ್ಯಾಂಟಿಕ್ ಆಗಿ ಡಬ್ಬಲ್ ಮೀನಿಂಗ್ ಡೈಲಾಗ್ ಹೇಳುತ್ತ ಹೊಸ ಆಸೆಯನ್ನು ನೀಲಮ್ಮಳ ಮೈ-ಮನದಲ್ಲಿ ಚಿಗುರಿಸಿದನು.


ಡಿವೈಎಸ್ಪಿ ರವಿ ನಾಯಕ


ಇನ್ಸ್‌ಪೆಕ್ಟರ್ ರಾಘವೇಂದ್ರ ಹವಾಲ್ದಾರ


ಪಿಎಸ್‌ಐ ಪ್ರವೀಣ ಗಂಗೋಳ

ಅದೊಂದು ದಿನ ಸಭೆಗೆಂದು ಪಕ್ಕದೂರಿಗೆ ಹೋಗುವಾಗ ದಾರಿಯ ನಡುವೆ ಇಬ್ಬರು ವಿಶ್ರಮಿಸಿಕೊಳ್ಳುವ ಸಂದರ್ಭದಲ್ಲಿ ನೀಲಮ್ಮಳೇ ಮುಂದಾಗಿ 'ಏ... ಮಹೇಶ ನನ್ನನ್ನು ಲವ್ ಮಾಡತೀಯಾ' ಎಂದು ನೇರವಾಗಿ ಕೇಳಿದಾಗ 'ಐ... ಲವ್ ಯೂ' ಎಂದು ನೀಲಮ್ಮನನ್ನು ಬಿಗಿದಪ್ಪಿಕೊಂಡನು. ಆಗ ನೀಲಮ್ಮ ಪುಳಕಿತಳಾದಳು. ಮಹೇಶನ ಮುಂದೆ ತನ್ನೆಲ್ಲ ಜೀವನದ ಕಥೆ-ವ್ಯಥೆ, ನೋವು-ನಲಿವು ಹೇಳಿಕೊಂಡು ಆತನನ್ನು ಬಿಗಿದಪ್ಪಿ ಚುಂಬಿಸಿ 'ಐ ಲವ್ ಸೋ ಮಚ್' ಎಂದಳು.

### ಸಾಕು... ಸಾಕು ಎನ್ನುವಷ್ಟು ಸುಖ...

ಅಂದಿನಿಂದ ಮಹೇಶನಿಗಾಗಿ ನೀಲಮ್ಮ ಕನವರಿಸತೊಡಗಿದಳು. ವಯಸ್ಸಿನಲ್ಲಿ ನನಗಿಂತ 10 ವರ್ಷ ಚಿಕ್ಕವನಾದ ಮಹೇಶ ಮನಸ್ಸು ಮಾಡಿದರೆ ಎಂತೆಂತಹ ಹುಡುಗಿಯರು ಆತನಿಗೆ ಬರುತ್ತಾರೆ. ನನಗಾಗಿ ಬಂದಿರುವ ಈತನನ್ನು ಬಿಡಲೇಬಾರದು ಎಂದುಕೊಂಡು ಆತನಿಗಾಗಿ ಮನೆಯಿಂದ ಅವನಿಗಿಷ್ಟವಾದ ತಿಂಡಿ-ತಿನಿಸುಗಳನ್ನು ಸ್ವತಃ ಮಾಡಿಕೊಂಡು ಹೋಗಿ ತನ್ನ ಕೈಯಾರೆ ತುತ್ತು ಮಾಡಿ ತಿನ್ನಿಸತೊಡಗಿದ್ದಳು. ಇತ್ತೀಚಿಗೆ ನೀಲಮ್ಮಳ ಬರಡಾದ ಬದುಕಿಗೆ ತಂಗಾಳಿಯಂತೆ ಮಹೇಶ ಎಂಟ್ರಿ ಕೊಟ್ಟಿದ್ದನು. ಚೆಲುವೆ ನೀಲಮ್ಮಳು ಮಹೇಶನನ್ನು ಮೋಹದ ಮಿಂಡನಾಗಿರಿಸಿಕೊಂಡಳು.

ಎಳಸು ಮಿಂಡ ಮಹೇಶನ ಜತೆಗೆ ಮೋಟಾರ್ ಸೈಕಲ್ ಹಿಂದೆ ಆತನಿಗೆ ತಬ್ಬಿಕೊಂಡು ಕುಳಿತು ಗೋಕಾಕ, ಬೈಲಹೊಂಗಲ, ನೇಸರಗಿ ಮತ್ತಿತರ ಕಡೆಗಳಲ್ಲಿ ಹೋಗಿ ಬರತೊಡಗಿದಳು. ಆಗಾಗ ಪಕ್ಕದ ಶಹರದ ಲಾಡ್ಜ್‌ಗಳಲ್ಲೂ ಕೂಡಾ ತಂಗಿ ಮನಸೋ ಇಚ್ಛೆ ಸುಖಪಟ್ಟರು. ನೀಲಮ್ಮಳು 'ಸಾಕು... ಸಾಕು' ಎಂದರೂ ಕೂಡಾ ಮಹೇಶ ಅವಳನ್ನು ಬಿಡದೇ ಸರ... ಸರನೇ ಅವಳ ಬಟ್ಟೆ ಬಿಚ್ಚಿ ಅವಳ ಮೇಲೆ ಬಿದ್ದು ವಿಜೃಂಭಿಸುತ್ತ ಇನ್ನೂ 'ಬೇಕು... ಬೇಕು' ಎಂದು ಕನವರಿಸುತ್ತಿದ್ದನು. ಮಹೇಶ ನೀಡುವ ಸುಖಕ್ಕೆ ಸಂಪೂರ್ಣ ಫೀದಾ ಆಗಿದ್ದ ನೀಲಮ್ಮ ಆತನನ್ನು ಬಿಟ್ಟಿರಲಾರದೇ ಒದ್ದಾಡಿದಳು. ಮಹೇಶನು ಕೂಡಾ ನೀಲಮ್ಮ ನೀಡುವ ಸುಖದಿಂದ ತೃಪ್ತನಾಗಿದ್ದನು.

### ಗಂಡ ನಿಂಗಪ್ಪನಿಗೆ ಗೊತ್ತಾಯಿತು...

ನೀಲಮ್ಮ ಮತ್ತು ಮಹೇಶ ಗೂಳನ್ನವರ ಹಾದರದ ಕಥೆ ಇಡೀ ವಣ್ಣೂರಿನ ಪರಿಸರದಲ್ಲಿ ಪಸರಿಸಿತ್ತು. ಸಂದಿ-ಗೊಂಧಿಗಳಲ್ಲಿ ಇವರಿಬ್ಬರದೇ ಚರ್ಚೆ ನಡೆಯಿತು. ಎರಡು ಮೂರು ವರ್ಷಗಳ ಹಾದರದ ಕಥೆ ಗಂಡ ನಿಂಗಪ್ಪ ಅರವಳ್ಳಿಗೆ ಗೊತ್ತಾಗಿ ಉರಿದುಬಿದ್ದನು. 'ನೀನು ಮರ್ಯಾದೆಯಿಂದ ಆ ಮಹೇಶನ ಸಂಗ ಬಿಟ್ಟು ಮನೆಯಲ್ಲಿ ಇರಬೇಕು' ಎಂದು ಜಗಳ ಮಾಡಿದ್ದನು. ನೀಲಮ್ಮಳ ಮೇಲಿನ ಸಂಶಯದೊಂದಿಗೆ ತೀರಾ ಕುಡಿತದ ಚಟ ಅಂಟಿಸಿಕೊಂಡು ದಿನವಿಡೀ ಕುಡಿಯಲು ಆರಂಭಿಸಿದನು. ಇದರಿಂದ ನೀಲಮ್ಮ ತೀರಾ ಆಕ್ರೋಶಗೊಂಡಳು. ಹೇಗಾದರೂ ಸರಿ ನನಗೆ ಹೊಸ ಮಿಂಡ ಮಹೇಶ ಇರುವಾಗ ಈತ ಬದುಕಿರಬಾರದು ಎಂದು ಮಹೇಶನ ಮುಂದೆ ಗಂಡ ನಿಂಗಪ್ಪನ ಉಪಟಳ ತಿಳಿಸಿ ನಾವಿಬ್ಬರೂ ಸುಖದಿಂದ ಇರಬೇಕಾದರೆ ಈ ಗಂಡ ಬದುಕಬಾರದು. ಏನಾದರೂ ಮಾಡು ಎಂದು ದುಂಬಾಲು ಬಿದ್ದಳು.

### ಗಂಡನ ಕೊಲೆಗೆ ಹಳೆಯ ಮಿಂಡನಿಗೆ ಸುಫಾರಿ...

ತನ್ನ ಎಳಸು ಮಿಂಡ ಮಹೇಶ ಮತ್ತು ನೀಲಮ್ಮ ಕೂಡಿಕೊಂಡು ತಮ್ಮಿಬ್ಬರ ಕಾಮಸುಖಕ್ಕೆ ಅಡ್ಡ ಬಂದ ನಿಂಗಪ್ಪ ಬದುಕಬಾರದು ಎಂದು ತೀರ್ಮಾನಿಸಿ ಪಕ್ಕದೂರಿನ ಗಜಮನಾಳ ಗ್ರಾಮದ ರೌಡಿಶೀಟರ್ ಮತ್ತು ಒಂದು ಕಾಲದ ಹಳೆಯ ಮಿಂಡನಾಗಿದ್ದ ಯಲ್ಲಪ್ಪ ಕೋಣಿನನ್ನು ಕಂಡು ತಮ್ಮ ಸಂಚು ವಿವರಿಸಿ ಹೇಗಾದರೂ ಸರಿ ನಿಂಗಪ್ಪನನ್ನು ಸದ್ದಿಲ್ಲದೇ ಕೊಲೆ ಮಾಡಬೇಕು ಎಂದು ಹೇಳಿದರು. ಆತನಿಗೆ ನೀಲಮ್ಮಳ ಮೇಲೆ ಇನ್ನು ಆಸೆಯಿತ್ತು. ಅದಕ್ಕಾಗಿ ನಾಲ್ಕು ಲಕ್ಷ ಕೊಟ್ಟರೆ ಕೊಲೆ ಮಾಡುತ್ತೇನೆ ಎಂದು ಒಪ್ಪಿಕೊಂಡನು. ಹಾಗೂ-ಹೀಗೂ ಚೌಕಾಶಿ ಮಾಡಿ ಒಂದೂವರೆ ಲಕ್ಷ ರೂ.ಗಳಿಗೆ ಒಪ್ಪಿಸಿ 75 ಸಾವಿರ ರೂ.ಗಳನ್ನು ಅಡ್ವಾನ್ಸ್ ಆಗಿ ನೀಡಿ ಆದಷ್ಟು ಬೇಗನೆ ಈ ಕೆಲಸ ಮಾಡಬೇಕು ಎಂದು ಹೇಳಿದರು.

### ನಿಂಗಪ್ಪನ ಬರ್ಬರ ಕೊಲೆ...

ಅಂದುಕೊಂಡಂತೆ ಏನೂ ಆಗಿಲ್ಲವೆನ್ನುವಂತೆ ಮಹೇಶ ಮತ್ತು ನೀಲಮ್ಮ ತೆಪ್ಪಗಿದ್ದರು. ಇತ್ತೀಚಿಗೆ ಸಾರಾಯಿ ಕುಡಿದು ಬಂದು ನೀಲಮ್ಮಳಿಗೆ ಥಳಿಸುವುದು, ಬೈಯ್ಯುವುದನ್ನು ನಿಂಗಪ್ಪ ಹೆಚ್ಚು ಮಾಡಿದಾಗ ರೋಸಿ ಹೋದ ಆಕೆ ರವಿವಾರ ದಿ. 17-11-2024ರಂದು ರಾತ್ರಿ ಹಳೆಯ ಮಿಂಡ ಯಲ್ಲಪ್ಪ ಹಾಗೂ ಎಳಸು ಮಿಂಡ ಮಹೇಶನಿಗೆ ಫೋನ್ ಮಾಡಿ ನಿಂಗಪ್ಪನನ್ನು ಮುಗಿಸುವಂತೆ ಹೇಳುತ್ತಾಳೆ. ಅಂದು ನಿಂಗಪ್ಪ ಕಂಠಪೂರ್ತಿ ಕುಡಿದು ಮನೆಯ ಜಗುಲಿಯ ಮೇಲೆ ಮಲಗಿರುತ್ತಾನೆ. ಮಧ್ಯರಾತ್ರಿಯ ಸಮಯ ರೌಡಿಶೀಟರ್ ಯಲ್ಲಪ್ಪ ಕೋಣಿನ ತನ್ನ ಮೋಟಾರ್ ಸೈಕಲ್ ಮೇಲಿಂದ ಬಂದು ಸದ್ದಿಲ್ಲದೇ ಕೊಡಲಿಯಿಂದ ಕತ್ತು ಕತ್ತರಿಸಿ ಭೀಕರವಾಗಿ ನಿಂಗಪ್ಪನ ಕೊಲೆ ಮಾಡಿ ಏನೂ ಆಗಿಲ್ಲ ಎನ್ನುವಂತೆ ಪರಾರಿ ಆಗಿ ನೀಲಮ್ಮ ಮತ್ತು ಮಹೇಶನಿಗೆ ಕರೆ ಮಾಡಿ ನಿಮ್ಮ ಕೆಲಸ ಮಾಡಿದ್ದೇನೆ. ಉಳಿದ ಹಣ ಬೇಗ ಕೊಡಬೇಕೆಂದು ಹೇಳಿದ್ದಾನೆ.

### ಇನ್ನಿಲ್ಲದ ನಾಟಕವಾಡಿದ ನೀಲಮ್ಮ...

ರವಿವಾರ ದಿವಸ ರಾತ್ರಿ ಕಮಕ್... ಕಿಮಕ್ ಎನ್ನದೇ ಕೊಲೆಯಾಗಿ ರಕ್ತದ ಮಡುವಿನಲ್ಲಿ ಬಿದ್ದಿದ್ದ ನಿಂಗಪ್ಪ. ಬೆಳಿಗ್ಗೆ 6 ಗಂಟೆಗೆ ಬಾಗಿಲು ತೆರೆದು ಗಂಡನ ಹೆಣ ಕಂಡು ನೀಲಮ್ಮ ದೊಡ್ಡದಾಗಿ ನಾಟಕವಾಡಿ ಎದೆ... ಎದೆ ಬಡಿದುಕೊಂಡು ನೆಲ ಬಿರಿಯುವಂತೆ ರೋಧಿಸಿ ನನ್ನ ಗಂಡನನ್ನು ಅದ್ಯಾರೋ... ಅದ್ಯಾವ ಕಾರಣಕ್ಕೆ ಕೊಲೆ ಮಾಡಿದ್ದಾರೆ ಎಂದು ಶಪಿಸುತ್ತಿದ್ದಳು. ಊರಿನ ಬಹುತೇಕರು 'ನೋಡ್ರಿ... ಹೆಂಗ ಮಾಡತಾಳ ನಾಟಕ' ಎಂದು ಮಾತನಾಡಿಕೊಳ್ಳುತ್ತಿದ್ದರು. ಕೂಡಿದ ಜನತೆ ಆದದ್ದಾಗಿದೆ. ಪೊಲೀಸರಿಗೆ ದೂರು ನೀಡಿ ಎಂದು ನೀಲಮ್ಮ ಹಾಗೂ ಕೊಲೆಯಾದ ನಿಂಗಪ್ಪನ ಸಹೋದರ ರುದ್ರಪ್ಪನಿಗೆ ತಿಳಿಸಿದರು.

### ಪೊಲೀಸರಿಗೆ ದೂರು...

ರುದ್ರಪ್ಪ ಅರವಳ್ಳಿ ನೇರವಾಗಿ ಊರಿನ ಕೆಲವು ಜನರೊಂದಿಗೆ ಪೊಲೀಸ್ ಠಾಣೆಗೆ ಧಾವಿಸಿದನು. ಅಂದು ಕರ್ತವ್ಯದ ಮೇಲಿದ್ದ ಪೊಲೀಸ್ ಇನ್ಸ್‌ಪೆಕ್ಟರ್ ರಾಘವೇಂದ್ರ ಹವಾಲ್ದಾರರನ್ನು ಕಂಡು ನಿಂಗಪ್ಪ ಅರವಳ್ಳಿ ಕೊಲೆಯಾಗಿರುವ ಸಂಗತಿ ತಿಳಿಸಿ ದೂರನ್ನು ನೀಡಿದನು. ತಕ್ಷಣ ಇನ್ಸ್‌ಪೆಕ್ಟರ್ ರಾಘವೇಂದ್ರ ಹವಾಲ್ದಾರ ಅವರು ಬೈಲಹೊಂಗಲ ಡಿವೈಎಸ್ಪಿ ರವಿನಾಯಕ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ, ಎಸ್ಪಿ ಡಾ. ಭೀಮಾಶಂಕರ ಗುಳೇದ ಅವರಿಗೆ ವಿಷಯ ತಿಳಿಸಿ ಅವರ ನಿರ್ದೇಶನದಂತೆ ಪ್ರಕರಣ ದಾಖಲಿಸಿಕೊಂಡು ತಕ್ಷಣ ತಮ್ಮ ಸಿಬ್ಬಂದಿಗಳೊಂದಿಗೆ ಘಟನಾ ಸ್ಥಳ ವಣ್ಣೂರಿಗೆ ತೆರಳಿದರು. ನಿಂಗಪ್ಪನ ಕೊಲೆಯ ಸ್ಥಳವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರು. ಅದಾದ ಸ್ವಲ್ಪ ಸಮಯದಲ್ಲಿ ಎಸ್ಪಿ ಡಾ. ಭೀಮಾಶಂಕರ ಗುಳೇದ, ಡಿವೈಎಸ್ಪಿ ರವಿ ನಾಯಕ ಕೂಡಾ ಘಟನಾ ಸ್ಥಳಕ್ಕೆ ಧಾವಿಸಿ ಸೂಕ್ಷ್ಮವಾಗಿ ಪರಿಶೀಲನೆ ನಡೆಸಿ ತನಿಖಾಧಿಕಾರಿ ರಾಘವೇಂದ್ರ ಹವಾಲ್ದಾರ ಅವರಿಗೆ ಸೂಕ್ತ ನಿರ್ದೇಶನಗಳನ್ನು ನೀಡಿದರು. ಇನ್ಸ್‌ಪೆಕ್ಟರ್ ರಾಘವೇಂದ್ರ ಅವರು ಪಂಚನಾಮೆ ಕಾರ್ಯ ಮುಗಿಸಿ ಶವವನ್ನು ಮರಣೋತ್ತರ ಪರೀಕ್ಷೆಗೆ ಕಳಿಸಿದ್ದರು.

☞ 14


ನಿಂಗಪ್ಪನ ಕೊಲೆಯಾದ ಸುದ್ದಿ ಕೇಳಿ ಧಾವಿಸಿದ ಜನರು

6 ☞

ಕಲೆಹಾಕಲು ಮುಂದಾಗುವ ಪೊಲೀಸರಿಗೆ ತಮಿಳುನಾಡಿನ ತೆಂಕಾಶಿ ಜಿಲ್ಲೆ ಶಂಕರ್ ಕೊಯ್ಲು ತಾಲೂಕು, ಪನಾವಡಲಿ ಸತ್ತರಂ ಪೋಸ್ಟ್ ತೆರ್ಕುಪನಾವಡಿ ಗ್ರಾಮದ ಕೊಡಂಗು ಸ್ವಾಮಿ ಗುಜರಿ ಕೆಲಸ ಮಾಡಿಕೊಂಡಿದ್ದನು. ಅದೇ ರೀತಿ ಸೆಂಟ್ರಿಂಗ್ ಕೆಲಸ ಮಾಡಿಕೊಂಡಿದ್ದ ಕೇರಳ ರಾಜ್ಯದ ಪಾಲಕ್ಕಾಡ್ ಜಿಲ್ಲೆ ಪುದುಶೇರಿ ಈಸ್ಟ್ ವಾಲೇಯಾರ್ ಡ್ಯಾಮ್ ಪೋಸ್ಟ್, ಪಾಂಬು ಪಾರೈ ಗ್ರಾಮದವನಾದ ಜೇಸುದಾಸ್.ಡಿ ಅಲಿಯಾಸ್ ಶಂಶುದ್ದೀನ್ ಈ ಇಬ್ಬರು ಸೇರಿ ಕಳ್ಳತನವನ್ನೆ ವೃತ್ತಿ ಮಾಡಿಕೊಂಡಿದ್ದರು. ಶಂಶುದ್ದೀನ್ ಹಾಗೂ ಕೊಡಂಗುಸ್ವಾಮಿ ಈ ಇಬ್ಬರು ಕುಖ್ಯಾತ ಅಂತರ್ ರಾಜ್ಯ ಕಳ್ಳರು 2021ರಿಂದ ಇವರ ವಿರುದ್ಧ ಕೇರಳದ ಕಾಸರಗೋಡು, ಮಂಜೇರಿ ಕರ್ನಾಟಕದ ವಿರಾಜಪೇಟೆ, ಬಂಟ್ವಾಳ, ಮಂಗಳೂರು, ಬೆಂಗಳೂರು, ರಾಮನಗರ, ಉಡುಪಿ, ಕೋಲಾರ ತಮಿಳುನಾಡಿನ ತಿರುನಲ್‌ವೆಲಿ ಪೊಲೀಸ್ ಠಾಣೆ ಸೇರಿದಂತೆ ಅನೇಕ ಕಡೆ ಸುಮಾರು 35 ರಿಂದ 40 ಕಳ್ಳತನ ಹಾಗೂ ದರೋಡೆ ಪ್ರಕರಣಗಳ ದಾಖಲಾಗಿವೆ. ಇವರೊಡನೆ ಡ್ರೈವರ್ ಕೆಲಸ ಮಾಡಿಕೊಂಡಿದ್ದ ತಮಿಳುನಾಡಿನ ಕೊಯಮತ್ತೂರು ಜಿಲ್ಲೆಯ ಪೊಲ್ಲಾಚ್ಚಿ ತಾಲೂಕು ಕಂಜಾಂಪಟ್ಟಿ ಪೋಸ್ಟ್ ಕಂದಸ್ವಾಮಿ ಶೆಟ್ಟಿಯೂರ್ ಕಾಲೋನಿಯ ಇಂದಿರರಾಜ್ ಹಾಗೂ ಮೂಲತಃ ಹಾಸನ ಜಿಲ್ಲೆ ಹಾಗೂ ತಾಲೂಕು ಅಗ್ರೆ ಪಕ್ಕ ಅಂಗಡಳ್ಳ ಗ್ರಾಮದ ಅಜಿತ್ ಹಾಲಿವಾಸ ಕೇರಳದ ಮಂಜೇರಿ ಈ ಇಬ್ಬರು ಒಮ್ಮೆ ಕಳ್ಳತನ ಪ್ರಕರಣವೊಂದರಲ್ಲಿ ಸಿಕ್ಕಿಬಿದ್ದು ಜೈಲು ಸೇರುತ್ತಾರೆ. ಈ ವೇಳೆ ಅದೇ ಜೈಲಿನಲ್ಲಿದ್ದ ಶಂಶುದ್ದೀನ್ ಹಾಗೂ ಕೊಡಂಗುಸ್ವಾಮಿರವರ ಪರಸ್ಪರ ಭೇಟಿಯಾಗಿ ಪರಿಚಯ ವಾಗುತ್ತಾರೆ. ಪರಿಚಯ ಸ್ನೇಹಕ್ಕೆ ತಿರುಗುತ್ತದೆ. ಜೈಲಿನಿಂದ ಹೊರಬಂದ ನಂತರ ಎಲ್ಲರೂ ಒಟ್ಟಿಗೆ ಕಳ್ಳತನ ದರೋಡೆಗೆ ಇಳಿಯುತ್ತಾರೆ ಎಂಬ ಬಗ್ಗೆ ಮಾಹಿತಿ ಕಲೆಹಾಕುತ್ತಾರೆ.

ಆದರೆ ಆರೋಪಿಗಳು ತಾವು ಈ ಹಿಂದೆ ಸಿಕ್ಕಿಬಿದ್ದ ಕಳ್ಳತನ ಪ್ರಕರಣಗಳಲ್ಲಿ ಬಳಸುತ್ತಿದ್ದ ಹಳೆಯ ಮೊಬೈಲ್ ನಂಬರ್‌ಗಳನ್ನು ಬದಲಾಯಿಸಿದ್ದರಿಂದ ಮಾಹಿತಿ ಸಂಗ್ರಹಿಸಿದ್ದ ಪೊಲೀಸ್ ತಂಡಗಳಿಗೆ ಅವರನ್ನು ಪತ್ತೆಹಚ್ಚುವುದು ಮತ್ತೆ ಸವಾಲಾಗಿ ಪರಿಣಮಿಸುತ್ತದೆ. ಆದರೆ ಹಠಕ್ಕೆ ಬಿದ್ದ ತಂಡ ಛಲಬಿಡದೆ ಅವರ ಸಂಬಂಧಿಕರನ್ನು ಭೇಟಿ ಮಾಡಿ ಮತ್ತೆ ಅವರು ಪ್ರಸ್ತುತವಾಗಿ ಬಳಸುತ್ತಿರುವ ಮೊಬೈಲ್ ನಂಬರ್‌ಗಳನ್ನು ಸಂಗ್ರಹಿಸುವುದರ ಜೊತೆಗೆ ಅವರು ಎಲ್ಲಿ ಸಿಗುತ್ತಾರೆ. ಎಂಬ ಬಗ್ಗೆ ಸಂಬಧಿಕರಿಂದ ಅವರ ಚಲನವಲನಗಳ ಕುರಿತು ಮಾಹಿತಿ ಪಡೆದು ಕಾರ್ಯಾಚರಣೆ ಮುಂದುವರಿಸುತ್ತಾರೆ.



ಕಳೆದ 25 ದಿನಗಳಿಂದ ಕೇರಳದ ಕಾಸರಗೋಡು, ಮಂಜೇರಿ, ಗೋವಾ, ತಮಿಳುನಾಡಿನ ತಿರುನಲ್‌ವೆಲಿ, ಪುದುಚೇರಿ, ಕೊಯ್ಲು, ತೆಂಕಾಶಿ, ಪೊಲ್ಲಾಚ್ಚಿ, ಕೊಯಮತ್ತೂರು, ಕರ್ನಾಟಕದ ರಾಮನಗರ ಬೆಂಗಳೂರು ಉಡುಪಿ ಬಂಟ್ವಾಳ ಮಂಗಳೂರು ಸೇರಿದಂತೆ ಇನ್ನಿತರ ಅಲೆದು ಅಲೆದು ಮಾಹಿತಿ ಸಂಗ್ರಹಿಸಿ ಸುಸ್ತಾದರೂ ಛಲ ಬಿಡದ ಪೊಲೀಸರ ತಂಡ ದಣಿವಿಲ್ಲದೆ ಕಳ್ಳರನ್ನು ಬೆನ್ನುತ್ತಿದ್ದರು. ಬೆಂಬಿಡದೆ ಬೆನ್ನತ್ತಿದ ಪೊಲೀಸರಿಗೆ ತಾವು ಕಳೆದ 25 ದಿನಗಳಿಂದ ಹುಡುಕುತ್ತಿರುವ ಕಳ್ಳರು ಮಲೆ ಮಹದೇಶ್ವರ ಬೆಟ್ಟದಲ್ಲಿ ಮತ್ತೆ ಕಳ್ಳತನಕ್ಕೆ ಸಂಚು ರೂಪಿಸುತ್ತಿರುವ ಬಗ್ಗೆ ಮಾಹಿತಿ ದೊರಕುತ್ತದೆ. ಕೂಡಲೆ ಕಾರ್ಯಪ್ರವೃತ್ತರಾದ ಹನೂರು ಪಿಎಸ್‌ಐ ಮಂಜುನಾಥ್ ಪ್ರಸಾದ್ ಮತ್ತು ತಂಡ ಕಳ್ಳರನ್ನು ಸೆರೆಹಿಡಿಯಲು ಹೊಂಚು ಹಾಕುತ್ತಿರುತ್ತಾರೆ. ತಮ್ಮ ಕಸುಬು ಮುಂದುವರಿಸಿದ್ದ ಕೊಡಂಗುಸ್ವಾಮಿ ಹಾಗೂ ಶಂಶುದ್ದೀನ್ ಇಬ್ಬರು ಮಲೆ ಮಹದೇಶ್ವರ ಬೆಟ್ಟದಲ್ಲಿ ಕಾರಿನಲ್ಲಿ ಕುಳಿತು ಮತ್ತೆ ಕಳ್ಳತನಕ್ಕೆ ಸಂಚು ರೂಪಿಸುತ್ತಿರುತ್ತಾರೆ ಈ ವೇಳೆ ಇವರ ಬೆನ್ನು ಬಿದ್ದ ಬಿದ್ದ ಪೊಲೀಸರ ತಂಡ ಹೊಂಚು ಹಾಕಿ ಇವರ ಮೇಲೆರಗಿ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗುತ್ತಾರೆ.


ಇತ್ತ ಶಂಶುದ್ದೀನ್ ಹಾಗೂ ಇಬ್ಬರು ಮಲೆ ಮಹದೇಶ್ವರ ಬೆಟ್ಟದಲ್ಲಿ ಕಳ್ಳತನ ಮುಂದುವರೆಸಿದ್ದರೆ ಅಜಿತ್ ಹಾಗೂ ಇಂದಿರಾ ರಾಜ್ ಈ ಇಬ್ಬರು ಕಳುವು (ಕದ್ದಿರುವ ಚಿನ್ನಾಭರಣಗಳನ್ನು) ಮಾಲುಗಳನ್ನು ಕೊಳ್ಳೇಗಾಲದಲ್ಲಿ ಮಾರಾಟ ಮಾಡಲು ತೆರಳಿರುತ್ತಾರೆ. ಈ ಬಗ್ಗೆ ಬಂಧಿತರಿಂದ ಮಾಹಿತಿ ಪಡೆಯುವ ಹನೂರು ಪಿಎಸ್‌ಐ ಮಂಜುನಾಥ್ ಪ್ರಸಾದ್‌ರವರು ಡಿವೈಎಸ್ಪಿ ಅಪರಾಧ ಪತ್ತೆದಳದ ಸಿಬ್ಬಂದಿ ಗಳಾದ ಎಎಸ್‌ಐ ತಕೀವುಲ್ಲಾ ಹೆಚ್‌ಸಿಗಳಾದ ರವಿ, ಕಿಶೋರ್, ವೆಂಕಟೇಶ್, ಪೇದೆಗಳಾದ ಬಿಳಿಗೌಡ, ಶಿವಕುಮಾರ್, ಲಿಯಾಖಾತ್-ಅಲಿಖಾನ್‌ರವರಿಗೆ ಮಾಹಿತಿ ನೀಡುತ್ತಾರೆ. ಈ ಇಬ್ಬರು ಕಳ್ಳರು ಕೊಳ್ಳೇಗಾಲದ ಚಿನ್ನದ ಅಂಗಡಿ ಬೀದಿಯಲ್ಲಿ ಚಿನ್ನಾಭರಣಗಳನ್ನು ಮಾರಾಟ ಮಾಡಲು ಹೊಂಚು ಹಾಕುತ್ತಿದ್ದ ವೇಳೆ ಕೊಳ್ಳೇಗಾಲ ಉಪವಿಭಾಗದ ಡಿವೈಎಸ್ಪಿ ಅಪರಾಧ ಪತ್ತೆದಳದ ಸಿಬ್ಬಂದಿಗಳು ಸುತ್ತುವರೆದು ಇಬ್ಬರನ್ನು ಬಂಧಿಸುತ್ತಾರೆ.

ನಾಲ್ವರು ಕುಖ್ಯಾತ ಕಳ್ಳರನ್ನು ಬಂಧಿಸುವ ಹನೂರು ಪಿಎಸ್‌ಐ ಮಂಜುನಾಥ್ ಪ್ರಸಾದ್ ತಂಡ ಹಾಗೂ ಡಿವೈಎಸ್ಪಿ ಅಪರಾಧ ಪತ್ತೆದಳದ ಸಿಬ್ಬಂದಿಗಳ ಪ್ರತ್ಯೇಕ ತಂಡ ಈ ನಾಲ್ವರು ಕುಖ್ಯಾತ ಕಳ್ಳರನ್ನು ಸಿಪಿಐ ಶಿವಮಾದಯ್ಯ ರವರ ಮುಂದೆ ತಂದು ನಿಲ್ಲಿಸುತ್ತದೆ. ಈ ನಾಲ್ಕು ಜನ ಆರೋಪಿಗಳನ್ನು ಹೆಚ್ಚಿನ ವಿಚಾರಣೆಗೊಳಪಡಿಸಿದ ಸಿಪಿಐ ಶಿವಮಾದಯ್ಯರವರ ಮುಂದೆ ಆರೋಪಿಗಳು ತಾವು ಹನೂರು ಪಟ್ಟಣ, ದೊಡ್ಡಿಂದುವಾಡಿ, ಗುಂಡೇಗಾಲ, ಕೊಳ್ಳೇಗಾಲ ಪಟ್ಟಣ, ಚಾಮರಾಜ ನಗರ ಪಟ್ಟಣ, ಗುಂಡ್ಲುಪೇಟೆ ಮತ್ತು ಬೇಗೂರು ಕಡೆಗಳಲ್ಲಿ ಕಳ್ಳತನ ಮಾಡಿರುವ ಬಗ್ಗೆ ವಿಚಾರಣೆ ವೇಳೆ ಕಂಡುಬಂದಿದ್ದು ಚಾಮರಾಜನಗರ ಜಿಲ್ಲೆಯ ಒಟ್ಟು 13 ಹಾಗೂ ಕೋಲಾರ ಜಿಲ್ಲೆಯ ಒಂದು ಕಳುವು ಪ್ರಕರಣದಲ್ಲಿ ಭಾಗಿಯಾಗಿರುವುದಾಗಿ ಒಪ್ಪಿಕೊಂಡಿರುತ್ತಾರೆ. ವಿಚಾರಣೆಯ ನಂತರ ಆರೋಪಿಗಳ ಬಳಿ ಇದ್ದ ಒಟ್ಟು 41,69000 ಬೆಲೆ ಬಾಳುವ 504.16 ಗ್ರಾಂ ಚಿನ್ನಾಭರಣಗಳು 3 ಕೆ.ಜಿ. ಬೆಳ್ಳಿಯ ಆಭರಣಗಳು 4400 ನಗದು ಹಣ, ಕೃತ್ಯಕ್ಕೆ ಬಳಕೆ ಮಾಡಿದ್ದ ನಂ ಟಿಎನ್ 38 ಸಿಎಫ್ 4891 ಮಹಿಂದ್ರ ಕಾರು ಹಾಗೂ ನಂಬರ್ ಕೆಎ 02 ಕೆಎಲ್ 3133 ಸ್ಪ್ಲೆಂಡರ್ ಮೋಟಾರ್ ಬೈಕ್ ಅನ್ನು ವಶಕ್ಕೆ ಪಡೆದು ಕೊಂಡ ಸಿಪಿಐ ಶಿವಮಾದಯ್ಯ ಅಂಡ್ ಟೀಂ ನಾಲ್ವರು ಅಂತರ್ ರಾಜ್ಯ ಕುಖ್ಯಾತ ಖತರ್ನಾಕ್ ಕಳ್ಳರನ್ನು ಎಡೆಮುರಿ ಕಟ್ಟಿ ಜೈಲಿಗಟ್ಟಿದೆ.

ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಯವರನ್ನು ಹಾಗೂ ಪ್ರಕರಣ ಪತ್ತೆಯಲ್ಲಿ ಸಹಕರಿಸಿದ ಜಿಲ್ಲಾ ಪೊಲೀಸ್ ಕಚೇರಿಯ ತಾಂತ್ರಿಕ ವಿಭಾಗ ಬೆರಳಚ್ಚು ವಿಭಾಗ ಮತ್ತು ನಿಷ್ಣಂತು ವಿಭಾಗದವರನ್ನು ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾರವರು ಪ್ರಶಂಶಿಸಿದ್ದಾರೆ. ☯

# ಮಕ್ಕಳಿಬ್ಬರನ್ನು ಕೊಂದು ಆತ್ಮಹತ್ಯೆಗೆ ಯತ್ನಿಸಿದ ತಾಯಿ!

ಕೌಟುಂಬಿಕ ಕಲಹದಿಂದ ತಾಯಿಯೊಬ್ಬಳು ಇಬ್ಬರು ಮಕ್ಕಳ ಕುತ್ತಿಗೆ ಬಿಗಿದು ಕೊಲೆ ಮಾಡಿ ಬಳಿಕ ತಾನೂ ಚಾಕುವಿನಿಂದ ಕತ್ತು ಕೊಯ್ದುಕೊಂಡು ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಸುಬ್ರಹ್ಮಣ್ಯಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.





ಸುಬ್ರಹ್ಮಣ್ಯಪುರದ ಮುನಿಸ್ವಾಮಿ ನಾಯ್ಡು ಲೇಔಟ್‌ನ ಶಂಭು ಸಾಹು (7) ಮತ್ತು ಸಿಯಾ ಸಾಹು (3) ಕೊಲೆಯಾದ ದುರ್ದೈವಿ ಮಕ್ಕಳು. ಮಮತಾ ಸಾಹು ಆತ್ಮಹತ್ಯೆಗೆ ಯತ್ನಿಸಿದ ತಾಯಿ. ಅಂದು ಗುರು ವಾರ ಸಂಜೆ 6.30ರಿಂದ ರಾತ್ರಿ 10.30ರ ನಡುವೆ ಈ ಘಟನೆ ನಡೆದಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

### ಏನಿದು ಘಟನೆ?

ಜಾರ್ಖಂಡ್ ಮೂಲದ ಸುನೀಲ್‌ಕುಮಾರ್ ಸಾಹು ಮತ್ತು ಮಮತಾ ಸಾಹು ದಂಪತಿಗೆ ಶಂಭು ಸಾಹು ಮತ್ತು ಸಿಯಾ ಸಾಹು ಮಕ್ಕಳಿದ್ದರು. ದಂಪತಿ ತಮ್ಮಿಬ್ಬರು ಮಕ್ಕಳೊಂದಿಗೆ ಕಳೆದ ಎಂಟು ತಿಂಗಳ ಹಿಂದೆ ಬೆಂಗಳೂರಿಗೆ ಬಂದು ಸುಬ್ರಹ್ಮಣ್ಯಪುರದ ಮುನಿಸ್ವಾಮಿ ನಾಯ್ಡು ಲೇಔಟ್‌ನ ಬಾಡಿಗೆ ಮನೆಯಲ್ಲಿ ನೆಲೆಸಿದ್ದರು. ಸುನೀಲ್‌ಕುಮಾರ್ ಸಾಹು ಆಟೋ ಚಾಲಕನಾಗಿದ್ದರೆ, ಪತ್ನಿ ಮಮತಾ ಸಾಹು ಮಕ್ಕಳನ್ನು ನೋಡಿಕೊಂಡು ಮನೆಯಲ್ಲೇ ಇರುತ್ತಿದ್ದಳು.

### ದಂಪತಿ ನಡುವೆ ಆಗಾಗ ಜಗಳ

ಮದುವೆ ಆದಾಗಿನಿಂದಲೂ ದಂಪತಿ ನಡುವೆ ಸಣ್ಣ ವಿಚಾರ ಗಳಿಗೂ ಆಗಾಗ ಜಗಳಗಳಾಗು ತ್ತಿದ್ದವು. ನವೆಂಬರ್ 20ರಂದು ಊಟದ ವಿಚಾರವಾಗಿ ದಂಪತಿ ನಡುವೆ ಜಗಳವಾಗಿತ್ತು. ನವೆಂಬರ್ 21ರಂದು ಸಂಜೆ ತಾನು ಊರಿಗೆ ಹೋಗ ಬೇಕು. ವಿಮಾನದ ಟಿಕೆಟ್ ಬುಕ್ ಮಾಡಿಕೊಡು ಎಂದು ಪತಿ ಸುನೀಲ್‌ನನ್ನು ಒತ್ತಾಯಿಸಿದ್ದಾಳೆ. ನನಗೆ ಮೂಗಿನ ಸಮಸ್ಯೆಯಿದ್ದು, ಆಸ್ಪತ್ರೆಗೆ ಹೋಗಿ ಬಂದ ಬಳಿಕ ಟಿಕೆಟ್ ಬುಕ್ ಮಾಡಿಸುವುದಾಗಿ ಸುನೀಲ್ ಸಂಜೆ 6.30ಕ್ಕೆ ಮನೆಯಿಂದ ಹೊರಗೆ ಹೋಗಿದ್ದಾನೆ.

### 'ನಾನು ತಪ್ಪು ಮಾಡಿದೆ' ಎಂದು ಮೆಸೇಜ್

ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆದು ನಂತರ ತನ್ನ ತಂಗಿಯ ಗಂಡನ ಮನೆಗೆ ಹೋಗಿ ಟಿಕೆಟ್ ಬುಕ್ ಮಾಡಿಸಿ, ರಾತ್ರಿ 9.15ಕ್ಕೆ 'ಟಿಕೆಟ್ ಬುಕ್ ಆಗಿದೆ' ಎಂದು ಪತ್ನಿ ಮಮತಾ ಸಾಹುಗೆ ಮೆಸೇಜ್ ಹಾಕಿದ್ದಾನೆ. ಇದಾದ ಐದು ನಿಮಿಷದ ಬಳಿಕ ಮಮತಾ ಸಾಹು ಓಕೆ ಎಂದು ಮೆಸೇಜ್ ಹಾಕಿದ್ದಾಳೆ. ಇದಾದ ಸ್ವಲ್ಪ ಸಮಯದ ಬಳಿಕ 'ನಾನು ತಪ್ಪು ಮಾಡಿದೆ, ನನ್ನನ್ನು ಕ್ಷಮಿಸಿ ಬಿಡಿ' ಎಂದು ಮತ್ತೊಂದು ಮೆಸೇಜ್ ಹಾಕಿದ್ದಾಳೆ. ಇದಾದ 15 ನಿಮಿಷದ ಬಳಿಕ ತಾನು ಕತ್ತು ಕೊಯ್ದುಕೊಂಡು ರಕ್ತ ಬರುವ ಫೋಟೋವನ್ನು ಕಳುಹಿಸಿ, 'ನನ್ನನ್ನು ಕ್ಷಮಿಸಿಬಿಡಿ' ಎಂದು ಮತ್ತೊಂದು ಮೆಸೇಜ್ ಕಳುಹಿಸಿದ್ದಾಳೆ.



ಇದರಿಂದ ಗಾಬರಿಗೊಂಡ ಸುನೀಲ್ ಹಾಗೂ ಆತನ ತಂಗಿಯ ಗಂಡ ಇಬ್ಬರು ರಾತ್ರಿ 10.30ಕ್ಕೆ ಮನೆಗೆ ಬಂದು ನೋಡಿದಾಗ, ಮನೆಯ ಬಾಗಿಲು ಒಳಗಿನಿಂದ ಲಾಕ್ ಆಗಿರುವುದು ಕಂಡು ಬಂದಿದೆ. ಬಳಿಕ ಸುನೀಲ್ ತನ್ನ ಬಳಿಯಿದ್ದ ಮತ್ತೊಂದು ಬೀಗ ಕೀನಿಂದ ಲಾಕ್ ತೆಗೆದು ಒಳಗೆ ಹೋಗಿ ನೋಡಿದಾಗ, ಬೆಡ್‌ರೂಮ್‌ನಲ್ಲಿ ಇಬ್ಬರು ಮಕ್ಕಳು ಮತ್ತು ಪತ್ನಿ ಮಮತಾ ಸಾಹು ಪ್ರಜ್ಞಾಹೀನ ಸ್ಥಿತಿಯಲ್ಲಿ ಮಲಗಿರುವುದು ಕಂಡು ಬಂದಿದೆ.

### ಮೇಲೇಳಲಿಲ್ಲ ಮಕ್ಕಳು

ಬೆಡ್‌ರೂಮ್‌ನ ಫ್ಯಾನ್‌ನಲ್ಲಿ ಸುತ್ತಲಿ ದಾರ ನೇತಾಡುತ್ತಿದ್ದು, ಅದರ ಪಕ್ಕ ಚಿಕ್ಕ ಸ್ಟ್ಯಾಂಡ್ ಪತ್ತೆ ಯಾಗಿದೆ. ಈ ವೇಳೆ ಸುನೀಲ್ ಮಕ್ಕಳನ್ನು ಎಬ್ಬಿಸಲು ಪ್ರಯತ್ನಿಸಿದಾಗ ಇಬ್ಬರೂ ಮಕ್ಕಳು ಎಚ್ಚರಗೊಂಡಿಲ್ಲ. ಪತ್ನಿ ಮಮತಾ ಸಾಹು ಕುತ್ತಿಗೆಯಲ್ಲಿ ರಕ್ತ ಸೋರುತ್ತಿರುವುದು ಕಂಡು ಬಂದಿದೆ. ತಕ್ಷಣ ಸ್ನೇಹಿತರ ನೆರವು ಪಡೆದು ಕಾರಿನಲ್ಲಿ ಇಬ್ಬರು ಮಕ್ಕಳು ಮತ್ತು ಪತ್ನಿಯನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಅಲ್ಲಿನ ವೈದ್ಯರು ಸಲಹೆ ಮೇರೆಗೆ ಕಿಮ್ಸ್ ಆಸ್ಪತ್ರೆಗೆ ಕರೆತಂದಿದ್ದಾರೆ. ಈ ವೇಳೆ ಇಬ್ಬರು ಮಕ್ಕಳು ಈಗಾಗಲೇ ಮೃತಪಟ್ಟಿದ್ದಾರೆ.

### ಪತ್ನಿ ವಿರುದ್ಧ ದೂರು

ಪತ್ನಿ ಮಮತಾ ಸಾಹು ಸುತ್ತಲಿ ದಾರದಿಂದ ತನ್ನಿಬ್ಬರು ಮಕ್ಕಳನ್ನು ನೇಣು ಬಿಗಿದು ಕೊಲೆ ಮಾಡಿದ್ದಾಳೆ. ಬಳಿಕ ತಾನೂ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಪ್ರಯತ್ನಿಸಿ, ಅದು ಸಾಧ್ಯವಾಗದೆ ಅಡುಗೆ ಮನೆಯ ಲ್ಲಿದ್ದ ಚಾಕುವಿನಿಂದ ಕತ್ತು ಕೊಯ್ದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾಳೆ. ತನ್ನಿಬ್ಬರು ಮಕ್ಕಳನ್ನು ಕೊಲೆ ಮಾಡಿರುವ ಪತ್ನಿ ಮಮತಾ ಸಾಹು ವಿರುದ್ಧ ಕ್ರಮ ಕೈಗೊಳ್ಳುವಂತೆ ಸುನೀಲ್‌ಕುಮಾರ್ ಸಾಹು ದೂರಿನಲ್ಲಿ ಕೋರಿದ್ದಾರೆ. ಈ ಸಂಬಂಧ ಸುಬ್ರಹ್ಮಣ್ಯಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ. ☯

# ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ನಡೆದ ಲಾಕಪ್ ಡೆತ್!

ಮಹಿಳೆಗೆ ಚುಡಾಯಿಸಿದ ಆರೋಪದಲ್ಲಿ ಬ್ರಹ್ಮಾವರ ಪೊಲೀಸ್ ಠಾಣೆಗೆ ಕರೆ ತಂದಿದ್ದ ಕೇರಳ ಮೂಲದ ಕಾರ್ಮಿಕನೋರ್ವ ನಸುಕಿನ ವೇಳೆ ಸೆಲ್‌ನ ಬಾತ್‌ರೂಮಿನೊಳಗೆ ಮೃತಪಟ್ಟಿರುವುದಾಗಿ ವರದಿಯಾಗಿದೆ.

ಮೃತನನ್ನು ಕೇರಳ ರಾಜ್ಯದ ಕೊಲ್ಲಂ ಮೂಲದ ಬಿಜು ಮೋಹನ್(42) ಎಂದು ಗುರುತಿಸಲಾಗಿದೆ. ಇವನು ಹಂಗಾರಕಟ್ಟೆ ಮೀನು ಫ್ಯಾಕ್ಟರಿಯಲ್ಲಿ ಕೆಲಸ ಮಾಡಿಕೊಂಡಿದ್ದನು. ಕೆಲವು ದಿನಗಳ ಹಿಂದೆಯಷ್ಟೇ ಇಲ್ಲಿಗೆ ಕೆಲಸಕ್ಕೆ ಸೇರಿಕೊಂಡಿದ್ದನು. ಬಾಡಿಗೆ ಮನೆಯಲ್ಲಿ



ವಾಸವಿದ್ದ ಬಿಜು ಮೋಹನ್, ನ.9ರಂದು ರಾತ್ರಿ ವೇಳೆ ಅಲ್ಲೇ ಸಮೀಪದ ಮನೆಯಲ್ಲಿ ವಾಸವಿದ್ದ ಮಹಿಳೆಯನ್ನು ಚುಡಾಯಿಸಿದ್ದನು ಎಂದು ಆರೋಪಿಸಲಾಗಿದೆ.

ಆ ವೇಳೆ ಮಹಿಳೆ ಬೊಬ್ಬೆ ಹಾಕಿದ್ದು, ಸ್ಥಳೀಯರು ಜಮಾಯಿಸಿ ಬಿಜು ಮೋಹನ್‌ನನ್ನು ಹಿಡಿದು ಮನೆಯೊಳಗೆ ಕೂಡಿ ಹಾಕಿದ್ದರು. ಬಳಿಕ ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಆಗಮಿಸಿದ ಪೊಲೀಸರು, ಆರೋಪಿಯನ್ನು ವಶಕ್ಕೆ ಪಡೆದು, ಠಾಣೆಗೆ ಕರೆದೊಯ್ದಿದ್ದರು ಎಂದು ತಿಳಿದುಬಂದಿದೆ.

ಮದ್ಯ ಸೇವಿಸಿದ್ದರೆನ್ನಲಾದ ಬಿಜು ಮೋಹನ್‌ನನ್ನು ಸೆಲ್‌ನಲ್ಲಿ ಇರಿಸಲಾಗಿದ್ದು, ಭಾನುವಾರ ನಸುಕಿನ ವೇಳೆ 3.30ರ ಸುಮಾರಿಗೆ ಸಮೀಪದ ಬಾತ್‌ರೂಮ್‌ನಲ್ಲಿ ಕುಸಿದುಬಿದ್ದಿರುವುದು ಕಂಡುಬಂದಿದೆ. ತಕ್ಷಣ ಅವನನ್ನು ಬ್ರಹ್ಮಾವರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದೊಯ್ದು ಪರೀಕ್ಷಿಸಿದಾಗ ಮೃತಪಟ್ಟಿರುವುದಾಗಿ ವೈದ್ಯರು ಘೋಷಿಸಿದ್ದಾರೆ.

ಘಟನೆ ಬಗ್ಗೆ ಮಾಹಿತಿ ನೀಡಿದ ಉಡುಪಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಕೆ. ಅರುಣ್‌ಕುಮಾರ್ ಅಂದು ಬೆಳಗ್ಗಿನ ಜಾವ ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ಒಂದು ಲಾಕಪ್ ಡೆತ್ ಆಗಿದೆ. ನಿನ್ನೆ ಸುಮಾರು 7.45ರ ಹೊತ್ತಿಗೆ ಗ್ರಾಮವೊಂದರ ಮಹಿಳೆ ಹಾಗೂ ಅವರ ಮಕ್ಕಳಿಗೆ ಯಾರೋ ಒಬ್ಬ ವ್ಯಕ್ತಿ ಕಿರುಕುಳ ನೀಡುತ್ತಿರುವುದಾಗಿ ಹೇಳಿ ಕರೆ ಬಂದಿತ್ತು. ತಕ್ಷಣ ಬ್ರಹ್ಮಾವರ ಠಾಣೆ ಸಿಬ್ಬಂದಿ ಸ್ಥಳಕ್ಕೆ ತೆರಳಿ ಪರಿಶೀಲಿಸಿದ್ದು, ಒಬ್ಬ ವ್ಯಕ್ತಿ ಮಹಿಳೆಗೆ ತೊಂದರೆ ನೀಡುತ್ತಿರುವುದು ಕಂಡು ಬಂದಿದೆ. ತಕ್ಷಣ ವ್ಯಕ್ತಿಯನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದಿದ್ದಾರೆ. ಅದರ ಬೆನ್ನಲ್ಲೇ ಆ ಮಹಿಳೆ ತಮ್ಮ ಸಹೋದರನೊಂದಿಗೆ ಠಾಣೆಗೆ ಬಂದು ತಮಗೆ ಹಾಗೂ ತಮ್ಮ ಮಕ್ಕಳಿಗೆ ಆ ವ್ಯಕ್ತಿ ಮನೆಯೊಳಗೆ ನುಗ್ಗಿ ಕಿರುಕುಳ ನೀಡಿರುವುದಾಗಿ ದೂರು ನೀಡಿದ್ದಾರೆ. ಅದರ ಆಧಾರದಲ್ಲಿ ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ತಿಳಿಸಿದರು.

ನಂತರ ಆ ವ್ಯಕ್ತಿಯನ್ನು ಲಾಕಪ್‌ನಲ್ಲಿ ಇಡಲಾಗಿತ್ತು. ನಸುಕಿನ ವೇಳೆ ಸುಮಾರು 3.45ರ ಸುಮಾರಿಗೆ ಠಾಣೆ ಸಿಬ್ಬಂದಿ ನೋಡಿದಾಗ ಆ ವ್ಯಕ್ತಿ ತಲೆಯನ್ನು ಗೋಡೆಗೆ ತಾಗಿಸಿ ಕುಳಿತುಕೊಂಡಿರುವುದು ಕಂಡಿಬಂದಿದೆ. ತಕ್ಷಣ ಸಬ್ ಇನ್ಸ್‌ಪೆಕ್ಟರ್ ಹಾಗೂ ಆ್ಯಂಬುಲೆನ್ಸ್‌ಗೆ ಮಾಹಿತಿ ನೀಡಿದ್ದು, ಆತನನ್ನು ಸಮುದಾಯ ಆಸ್ಪತ್ರೆಗೆ ಕೊಂಡೊಯ್ಯಲಾಗಿತ್ತು. ಅಲ್ಲಿ ವೈದ್ಯರು ಆತ ಮೃತಪಟ್ಟಿರುವುದಾಗಿ ತಿಳಿಸಿದ್ದಾರೆ. ಬೆಳಗ್ಗೆ ವ್ಯಕ್ತಿ ಯಾರೆಂದು ಪರಿಶೀಲಿಸಿದಾಗ ಕೇರಳದ ಕೊಲ್ಲಂನ ಬಿಜು ಮೋಹನ್, ಇಲ್ಲಿಗೆ ಕೂಲಿ ಕೆಲಸಕ್ಕಾಗಿ ಬಂದಿರುವುದು ಗೊತ್ತಾಗಿದೆ.

ವ್ಯಕ್ತಿಯ ಲಾಕಪ್ ಡೆತ್ ಪ್ರಕರಣಕ್ಕೆ ಸಂಬಂಧಿಸಿ ಮೃತರ ಮನೆಯವರಿಗೆ ಮಾಹಿತಿ ನೀಡಲಾಗಿದೆ. ಕೇರಳದಿಂದ ಆಗಮಿಸುತ್ತಿರುವ ಮೃತರ ಕುಟುಂಬಸ್ಥರು ಮುಂದೆ ನೀಡುವ ದೂರನ್ನು ಆಧರಿಸಿ ಕ್ರಮ ಜರುಗಿಸಲಾಗುವುದು. ಇದೊಂದು ಲಾಕಪ್ ಡೆತ್ ಪ್ರಕರಣ ಆಗಿರುವುದರಿಂದ ಇದರ ತನಿಖೆಯನ್ನು ಸಿಐಡಿ ವಹಿಸಿಕೊಳ್ಳಲಿದೆ. ಮರಣೋತ್ತರ ಪರೀಕ್ಷೆಯನ್ನು ಎರಡು ತಂಡಗಳು ನೆರವೇರಿಸಲಿದ್ದು, ಅದರ ಸಂಪೂರ್ಣ ವಿಡಿಯೋ ಚಿತ್ರೀಕರಣ ಮಾಡಲಾಗುವುದು. ನ್ಯಾಯಾಧೀಶರ ನೇತೃತ್ವದಲ್ಲಿ ಪ್ರಕರಣದ ತನಿಖೆ ನಡೆಯಲಿದೆ ಎಂದು ಎಸ್ಪಿ ಡಾ. ಕೆ. ಅರುಣ್‌ಕುಮಾರ್ ವಿವರಿಸಿದರು.

**ಸಬ್‌ಇನ್ಸ್‌ಪೆಕ್ಟರ್ ಸೇರಿ ಇಬ್ಬರ ಅಮಾನತುಗೊಳಿಸಿದ ಎಸ್ಪಿ**

ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ನಡೆದ ಲಾಕಪ್ ಡೆತ್ ಪ್ರಕರಣಕ್ಕೆ ಸಂಬಂಧಿಸಿ ಕರ್ತವ್ಯ ಲೋಪ ಎಸಗಿದ ಆರೋಪದಲ್ಲಿ ಬ್ರಹ್ಮಾವರ ಠಾಣೆ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಸೇರಿ ಇಬ್ಬರು ಪೊಲೀಸರನ್ನು ಉಡುಪಿ ಎಸ್ಪಿ ಡಾ. ಅರುಣ್‌ಕುಮಾರ್ ಅಮಾನತುಗೊಳಿಸಿ ಆದೇಶ ನೀಡಿದ್ದಾರೆ.

ಚೇರ್ಕಾಡಿ ಗ್ರಾಮದ ಮಹಿಳೆಗೆ ಶನಿವಾರ ರಾತ್ರಿ ಕಿರುಕುಳ ನೀಡಿದ ಆರೋಪದಲ್ಲಿ ಕೇರಳದ ಕೊಲ್ಲಂ ಮೂಲದ ಆರೋಪಿ ಬಿಜು ಮೋಹನ್ (45) ಎಂಬಾತನನ್ನು ಸ್ಥಳೀಯರು ಹಲ್ಲೆಗೈದು ಪೊಲೀಸರ ವಶಕ್ಕೆ ಒಪ್ಪಿಸಿದ್ದರು. ಆತನನ್ನು ವಶಕ್ಕೆ ಪಡೆದ ಬ್ರಹ್ಮಾವರ ಠಾಣೆಗೆ ಕರೆತಂದು ಪ್ರಕರಣ ದಾಖಲಿಸಿದ್ದರು. ಆದರೆ ಆರೋಪಿಯನ್ನು ಬಂಧಿಸುವ ಸಂದರ್ಭದಲ್ಲಿ ಮೆಡಿಕಲ್ ಟೆಸ್ಟ್ ಮಾಡಿಲ್ಲ ಎನ್ನಲಾಗುತ್ತಿದೆ. ಆರೋಪಿ ಬಂಧನ ವೇಳೆ ಸುಪ್ರೀಂ ಕೋರ್ಟ್ ನಿರ್ದೇಶನಗಳನ್ನು ಪಾಲಿಸಿಲ್ಲವೆಂದು ಬ್ರಹ್ಮಾವರ ಪೊಲೀಸ್ ಠಾಣೆಯ ಉಪ ನಿರೀಕ್ಷಕ ಮಧು ಬಿ.ಇ. ಮತ್ತು ಪ್ರಭಾರ ಠಾಣಾಧಿಕಾರಿ ಹೆಡ್‌ಕಾನ್‌ಸ್ಟೇಬಲ್ ಸುಜಾತ ಅವರನ್ನು ಅಮಾನತು ಮಾಡಲಾಗಿದೆ.



ಲಾಕಪ್ ಡೆತ್ ಪ್ರಕರಣದ ತನಿಖೆಗಾಗಿ



ಬೆಂಗಳೂರಿನ ಸಿಐಡಿ ಪೊಲೀಸ್ ಅಧೀಕ್ಷಕರು ಹಾಗೂ ಅವರ ತಂಡ ಸೋಮವಾರ ಉಡುಪಿಗೆ ಆಗಮಿಸಿದ್ದು, ಪ್ರಕರಣದ ತನಿಖೆ ಆರಂಭಿಸಿದ್ದಾರೆ. ಅದೇ ರೀತಿ ಬ್ರಹ್ಮಾವರ ತಾಲ್ಲೂಕು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ, ಶವಾಗಾರದಲ್ಲಿ ಮೃತದೇಹವನ್ನು ಪರಿಶೀಲನೆ ನಡೆಸಿ, ವೈದ್ಯಾಧಿಕಾರಿಗಳ ಜೊತೆ ಮಾತುಕತೆ ನಡೆಸಿದೆ ಎನ್ನಲಾಗಿದೆ. ಬಿಜು ಮೋಹನ್ ಲಾಕಪ್‌ನಲ್ಲಿ ಮೃತಪಟ್ಟಿರುವ ಮಾಹಿತಿಯನ್ನು ಪೊಲೀಸರು ನವೆಂಬರ್ 10ರಂದು ಬೆಳಗ್ಗೆ ಕೊಲ್ಲಂನಲ್ಲಿರುವ ಆತನ ಕುಟುಂಬಸ್ಥರಿಗೆ ನೀಡಿದ್ದರು. ಅದರಂತೆ ಅಲ್ಲಿಂದ ಹೊರಟ ಕುಟುಂಬಸ್ಥರು ಬ್ರಹ್ಮಾವರ ತಲುಪಿ ಶವಾಗಾರಕ್ಕೆ ಆಗಮಿಸಿದ ಕುಟುಂಬಸ್ಥರು ಬಿಜು ಮೋಹನನ ಮೃತದೇಹವನ್ನು ಪರಿಶೀಲಿಸಿದ್ದರು. ಬಳಿಕ ಬ್ರಹ್ಮಾವರ ಪೊಲೀಸ್ ಠಾಣೆಗೆ ತೆರಳಿದ ಮೃತ ಬಿಜು ಮೋಹನನ ಚಿಕ್ಕಪ್ಪನ ಮಗ ಅನೀಶ್ ಡೆನಿಲ್ ನೀಡಿದ ದೂರಿನಂತೆ ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

# ಪ್ರೊಫೆಸರ್‌ಗೆ ಹನಿಟ್ರ್ಯಾಪ್ ಮಾಡಿ 3 ಕೋಟಿ ರೂ. ಲೂಟಿ!

ಹೊರಗಿನವರ ಜೊತೆ ವ್ಯವಹಾರ ಆಗಲಿ ಸಂಬಂಧ ಆಗಲಿ ಜಾಗರೂಕತೆಯಿಂದ ಮಾಡಬೇಕು. ಯಾರನ್ನ ನಂಬಬೇಕು? ಯಾರನ್ನು ನಂಬಬಾರದು ಅನ್ನೋ ಬಹುಮುಖ್ಯ. ಯಾಕಂದ್ರೆ ಇಲ್ಲಿ ನಾಲ್ಕು ವರ್ಷಗಳ ಸ್ನೇಹವು ಹನಿಟ್ರಾಪ್ ಆಗಿ ಬದಲಾಗಬಹುದು. ಹೌದು...ಸ್ನೇಹ ಎಷ್ಟು ಹಳೆಯದಾಗಿರಲಿ ಅಥವಾ ಎಂತಹದ್ದೆ ಆಗಿರಲಿ ಎಚ್ಚರಿಕೆಯಿಂದ ಇದ್ದರೆ ಮಾತ್ರ ಒಳ್ಳೆಯದು. ಏಕೆ ಅಂತೀರಾ ಈ ಸ್ಟೋರಿ ನೋಡಿ.




ಬಂಧಿತ ಆರೋಪಿಗಳು

ತಬಸುಂ ಬೇಗಂ (38), ಅಜೀಂ ಉದ್ದೀನ್ (41), ಅಭಿಷೇಕ್ (33) ಇವರು ನಾಲ್ಕು ವರ್ಷಗಳ ಸ್ನೇಹಿತರು. ಬಳಿಕ ವ್ಯವಹಾರಿಕ ಸಂಬಂಧವನ್ನು ಹನಿಟ್ರಾಪ್ ಆಗಿ ಬದಲಾವಣೆ ಮಾಡಿಕೊಂಡು ಬ್ಲಾಕ್ ಮೇಲ್ ಮಾಡಿ ಅರ್ವ ಪ್ರೊಫೆಸರ್‌ನಿಂದ ಬರೋಬ್ಬರಿ ಎರಡು ಕೋಟಿ ಇಪ್ಪತ್ತೈದು ಲಕ್ಷಕ್ಕೂ ಹೆಚ್ಚಿನ ಹಣವನ್ನು ಸುಲಿಗೆ ಮಾಡಿದ್ದಾರೆ. ಹೌದು. 42 ವರ್ಷ ವಯಸ್ಸಿನ ಓರ್ವ ಪ್ರೊಫೆಸರ್‌ಗೆ ಖಾಸಗಿ ಫೋಟೋಗಳನ್ನು ಹಾಕಿ ಬರೋಬ್ಬರಿ ಎರಡು ಕೋಟಿ ಪೀಕಿದ್ದಾರೆ. ಇಷ್ಟಕ್ಕೆ ಹಣದ ದಾಹ ತೀರದಿದ್ದಾಗ ಇನ್ನಷ್ಟು ಹಣಕ್ಕೆ ಬೇಡಿಕೆ ಇಟ್ಟು ಇದೀಗ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಈ ಆರೋಪಿತೆ ಮಹಿಳೆ ತಬಸುಂ ಆರ್.ಟಿ. ನಗರದ ಒಂದು ಜಿಮ್‌ನಲ್ಲಿ ರಿಸೆಪ್ಶನಿಸ್ಟ್ ಆಗಿ ಕೆಲಸ ಮಾಡುತ್ತಿದ್ದಳಂತೆ. ಅದೇ ಜಿಮ್‌ಗೆ 2021ರಲ್ಲಿ 42 ವಯಸ್ಸಿನ ಓರ್ವ ಪ್ರೊಫೆಸರ್ ಜಾಯಿನ್ ಆಗಿದ್ದಾರೆ. ಆತ ಜಿಮ್‌ಗೆ ಸೇರಿದ ಕೆಲ ದಿನಗಳಲ್ಲಿ ತಬಸುಂ ಜೊತೆಗೆ ಪರಿಚಯ ಆಗಿ ಸ್ನೇಹ ಸಂಬಂಧ ಬೆಳೆದಿದೆ. ಈ ಸ್ನೇಹ ಇಬ್ಬರ ನಡುವೆ ಪ್ರೀತಿಯಾಗಿ ಬದಲಾಗಿದೆ . ನಂತರ ಆಕೆಗೆ ಮದುವೆಯಾಗಿ ಮಗು ಇದ್ದು ಗಂಡನ ಬಿಟ್ಟಿದ್ದಾಳೆ ಎನ್ನುವ ವಿಚಾರ ಪ್ರೊಫೆಸರ್‌ಗೆ ಗೊತ್ತಾಗಿ ಆತ ಗಲಾಟೆ ಮಾಡಿದ್ದನಂತೆ.

ಈ ನಡುವೆ ವ್ಯವಹಾರ ನಡೆಸಲು ಮತ್ತು ಒಂದಷ್ಟು ಬಿಜಿನೆಸ್ ಮಾಡಬೇಕು ಎಂದು ಹಂತ ಹಂತವಾಗಿ ಸುಮಾರು ಎರಡು ಕೋಟಿ ಇಪ್ಪತ್ತೈದು ಲಕ್ಷಕ್ಕೂ ಹೆಚ್ಚಿನ ಹಣವನ್ನು ಈಕೆ ಪಡೆದಿದ್ದಾಳೆ. ಇಬ್ಬರ ನಡುವೆ ಗಲಾಟೆ ಆದ ಬಳಿಕ ಪ್ರೊಫೆಸರ್ ಹಣ ಕೊಡಲ್ಲಾ ಎಂದಿದ್ದಾನೆ. ಈ ವೇಳೆ ಪ್ರೊಫೆಸರ್‌ಗೆ ವಾಟ್ಸ್ ಆಪ್ ಮೂಲಕ ಕೆಲ ಖಾಸಗಿ ಫೋಟೋಗಳನ್ನು ಕಳಿಸಿದ್ದ ತಬಸುಂ ಬೇಗಂ ತನಗೆ ಇನ್ನಷ್ಟು ಹಣ ಕೊಡಬೇಕು. ಇಲ್ಲವಾದ್ರೆ, ಈ ಫೋಟೋಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿ ವೈರಲ್ ಮಾಡುವುದಾಗಿ ಬೆದರಿಕೆ ಹಾಕಿದ್ದಾಳೆ. ನಂತರ ಆಕೆಯ ಸಹೋದರ ಎಂದು ಹೇಳಿಕೊಂಡು ಅಜೀಂ ಉದ್ದಿನ್ ಮತ್ತು ಆಕೆಯ ವಕೀಲ ಮತ್ತು ಪೊಲೀಸ್ ಎಂದು ಹೇಳಿ ಅಭಿಷೇಕ್ ಎಲ್ಲರು ಬೆದರಿಗೆ ಹಣ ವಸೂಲಿ ಮಾಡಿದ್ದಾರೆ.

ಯಾವಾಗ ಇವರುಗಳ ಕಾಟ ಹೆಚ್ಚಾಗಿತ್ತು ಆಗ ತನ್ನ ಪಿಎಫ್‌ನಲ್ಲಿ ಇದ್ದ ಹಣವನ್ನು ಸಹ ಪ್ರೊಫೆಸರ್ ನೀಡಿದ್ದ. ಅಷ್ಟು ಸಾಲುದು ಎಂದು ಆರೋಪಿಗಳು ಹೇಳಿದಾಗ ಕೊನೆಗೆ ಪ್ರೊಫೆಸರ್, ಸಿಸಿಬಿ ಮೆಟ್ಟಿಲೇರಿ ದೂರು ನೀಡಿದ್ದಾರೆ. ದೂರು ದಾಖಲಿಸಿಕೊಂಡು ಕಾರ್ಯಚರಣೆಗಿಳಿದ ಸಿಸಿಬಿ, ಆರೋಪಿಗಳನ್ನು ಅರೆಸ್ಟ್ ಮಾಡಿ ತನಿಖೆ ನಡೆಸುತ್ತಿದ್ದಾರೆ.

# ನಾಲ್ವರು ಚಂಡಾಲ ಚೌಕಡಿ ಕಳ್ಳರ ಬಂಧನ : 11.52 ಲಕ್ಷ ರೂ.ಗಳ ಮೌಲ್ಯದ ಸ್ವತ್ತು ವಶಕ್ಕೆ!

7 ☞

**ಐನಾತಿ ಕಳ್ಳರ ಬಗ್ಗೆ ಖಚಿತ ಮಾಹಿತಿ...**

ಅಂದುಕೊಂಡ ಹಾಗೇ ಪಿಎಸ್ಐ ಮಾಳಪ್ಪ ಪೂಜೇರಿ ಮತ್ತವರ ವಿಶೇಷ ತನಿಖಾ ತಂಡ ತಿಂಗಳುಗಟ್ಟಲೇ ಪರಿಶ್ರಮವಹಿಸಿ ಸಾಮಾನ್ಯರೊಂದಿಗೆ ಸಾಮಾನ್ಯರಾಗಿ ಮಾಹಿತಿ ತೆಗೆಯಲು ಆರಂಭಿಸಿದರು. ರಾಯಭಾಗ ತಾಲ್ಲೂಕಿನ ದಿಗ್ಗೇವಾಡಿಯ ಶಿವರಾಜ ಸುಭಾಸ ಕಾಂಬಳೆ ಎಂಬಾತನ ಬಗ್ಗೆ ಖಚಿತ ಮಾಹಿತಿ ಸಂಗ್ರಹಿಸಿ ಆತನ ಸಂಪೂರ್ಣ ಚಲನ-ವಲನದ ಮೇಲೆ ಗಮನವಿರಿಸಿದರು. ಸದರಿ ಮಾಹಿತಿಯನ್ನು ಸಿಪಿಐ ರವಿಚಂದ್ರ ಅವರ ಗಮನಕ್ಕೂ ತಂದರು. ಇದರ ಬೆನ್ನ ಹಿಂದೆ ನಿಡಗುಂದಿಯ ರಾಮಪ್ಪ ಲಕ್ಷ್ಮಣ ಕಾಂಬಳೆ, ಮುಗಳಖೋಡದ ಮಹಾದೇವ ಹಣಮಂತ ಕಾಂಬಳೆ, ಕಂಚಕಾರವಾಡಿಯ ರುದ್ರೇಶಕುಮಾರ ಶಿವಚಂದ್ರ ಕಾಂಬಳೆ ಎಂಬುವರ ಬೆನ್ನು ಬಿದ್ದರು. ಅಂದುಕೊಂಡಂತೆ ವಿಶೇಷ ತನಿಖಾ ತಂಡದವರು ನೇರವಾಗಿ ರಂಗಕ್ಕಿಳಿದಿದ್ದರು. ಸಿಪಿಐ ಅವರ ನಿರ್ದೇಶನದಂತೆ ಇವರ್‍ಯಾರು ತಲೆಮರೆಸಿಕೊಳ್ಳದಂತೆ ಎಚ್ಚರವಹಿಸಿ ಇತ್ತೀಚಿಗೆ ನಾಲ್ಕು ಜನರನ್ನು ವಶಕ್ಕೆ ಪಡೆದರು.



ನಾಲ್ವರು ಚಂಡಾಲ ಚೌಕಡಿ ಕಳ್ಳರ ತಂಡವನ್ನು ಬಂಧಿಸಿ 11.52 ಲಕ್ಷ ರೂ.ಗಳ ಮೌಲ್ಯದ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿರುವ ಹಾರೂಗೇರಿ ಪೊಲೀಸರು

**ಕಳ್ಳತನ ಮಾಡಿದ್ದಾಗಿ ಕಬೂಲಿ...**

ಹಾರೂಗೇರಿ ಸಿಪಿಐ ಕಚೇರಿಯಲ್ಲಿ ವಶಕ್ಕೆ ತೆಗೆದುಕೊಂಡ 1) ಶಿವರಾಜ ಸುಭಾಸ ಕಾಂಬಳೆ, 2) ರುದ್ರೇಶಕುಮಾರ ಶಿವಚಂದ್ರ ಕಾಂಬಳೆ, 3) ರಾಮಪ್ಪ ಲಕ್ಷ್ಮಣ ಕಾಂಬಳೆ, 4) ಹಣಮಂತ ಮಹಾದೇವ ಕಾಂಬಳೆ ಎಂಬ ನಾಲ್ಕು ಜನರನ್ನು ಬೇರೆ ಬೇರೆಯಾಗಿ ಸಿಪಿಐ ರವಿಚಂದ್ರ ಡಿ.ಬಿ., ಪಿಎಸ್ಐ ಮಾಳಪ್ಪ ಪೂಜೇರಿ ವಿಚಾರಣೆಗೊಳಪಡಿಸಿದರು. ಐನಾತಿಗಳು ಇಲ್ಲಿ ದಿಕ್ಕು ತಪ್ಪಿಸಲು ಆರಂಭಿಸಿದ್ದರು. ತಮ್ಮ ಸೇವಾವಧಿಯಲ್ಲಿ ಇಂತಹ ಎಷ್ಟೋ ಐನಾತಿಗಳನ್ನು ಕಂಡಿದ್ದ ಸಿಪಿಐ ರವಿಚಂದ್ರ ಅವರು ಕ್ಷಣ ಮಾತ್ರದಲ್ಲಿ ಇವರಿಂದ ಕಳ್ಳತನದ ಕೃತ್ಯಗಳನ್ನು ಬಾಯಿ ಬಿಡಿಸಿದರು. ಇದೇ ಐನಾತಿಗಳು ಅಳಗವಾಡಿ ಬಸ್ತವಾಡ, ಮುಗಳಖೋಡ, ಹಿಡಕಲ್, ಹಾರೂಗೇರಿ, ನಿಡಗುಂದಿ ಹಾಗೂ ಅಥಣಿ ತಾಲ್ಲೂಕಿನ ಸತ್ತಿ ಗ್ರಾಮದ ದೇವಸ್ಥಾನಗಳಲ್ಲಿ ಕಳ್ಳತನ ಮಾಡಿದ್ದಾಗಿ ಒಪ್ಪಿಕೊಂಡರು.

ಕದ್ದ ಚಿನ್ನಾಭರಣಗಳನ್ನು ಸೂತ್ರಧಾರನಾಗಿದ್ದ ಶಿವರಾಜ ಸುಭಾಸ ಕಾಂಬಳೆ, ರಾಯಭಾಗದ ಮುತ್ತೂಟ್ ಫೈನಾನ್ಸ್ ಒಂದರಲ್ಲಿ ಗಿರವಿ ಇಟ್ಟು ಹಣ ಪಡೆದು ನಾಲ್ವರು ಐನಾತಿಗಳು ಮೋಜು-ಮಜಾ ಮಾಡಿದ್ದರು. ಇನ್ನು ಕೆಲವು ಚಿನ್ನಾಭರಣಗಳನ್ನು ಮನೆಯಲ್ಲಿಟ್ಟುಕೊಂಡಿದ್ದರು. ದೇವಸ್ಥಾನಗಳಲ್ಲಿ ದೇವರೆಲ್ಲ ಎದ್ದು ನಿಂತಾಗ ಇವರು ಮಾಡಿದ ಕರ್ಮಗಳೆಲ್ಲ ಇವರಿಗೆ ಇಂದು ತಿರುಗಿವೆ. ಬಂಧಿತ ಕಳ್ಳರಿಂದ ಕಳ್ಳತನ ಮಾಡಲು ಬಳಸುತ್ತಿದ್ದ 1.25 ಲಕ್ಷ ರೂ. ಮೌಲ್ಯದ ಹೊಂಡಾ ಯುನಿಕಾರ್ನ್ ಮೋಟಾರ್ ಸೈಕಲ್, ದೇವಸ್ಥಾನಗಳಲ್ಲಿ ಕಳ್ಳತನ ಮಾಡಿದ್ದ 140.7 ಗ್ರಾಂ ಚಿನ್ನಾಭರಣ ಇದರ ಮೌಲ್ಯ 10.29 ಲಕ್ಷ ರೂ.ಗಳು, 3500 ರೂ. ಮೌಲ್ಯದ 43 ಗ್ರಾಂ ಬೆಳ್ಳಿಯ ಆಭರಣ ಸೇರಿದಂತೆ 11.52 ಲಕ್ಷ ರೂ.ಗಳ ಸ್ವತ್ತನ್ನು ಹಾರೂಗೇರಿ ಪೊಲೀಸರು ವಶಪಡಿಸಿಕೊಂಡಿದ್ದಾರೆ. ಇಲ್ಲಿ ನಿಜಕ್ಕೂ ಸಿಪಿಐ ರವಿಚಂದ್ರ ನೇತೃತ್ವದಲ್ಲಿ ವಿಶೇಷ ತನಿಖಾ ತಂಡದ ಸದಸ್ಯರು ಉತ್ತಮ ಕಾರ್ಯವನ್ನು ಮಾಡಿದ್ದಾರೆ. ಇದಕ್ಕೆಲ್ಲ ಇವರು ಸಾಕಷ್ಟು ಶ್ರಮ ವಹಿಸಿದ್ದಾರೆ. ನಿಜಕ್ಕೂ ಇವರಿಂದ ಏಳು ಗ್ರಾಮಗಳ ಎಂಟು ದೇವಸ್ಥಾನಗಳ ಭಕ್ತಾದಿಗಳು ನೆಮ್ಮದಿಯ ನಿಟ್ಟುಸಿರು ಬಿಟ್ಟು ಹಾರೂಗೇರಿ ಪೊಲೀಸರ ಧಾಡಸಿ ಕಾರ್ಯಾಚರಣೆಗಳನ್ನು ಕೊಂಡಾಡುತ್ತಿದ್ದಾರೆ.

**ಶ್ಲಾಘನೆ...**

ದೇವಸ್ಥಾನಗಳನ್ನೇ ಟಾರ್ಗೆಟ್ ಮಾಡಿಕೊಂಡು ಸದ್ದಿಲ್ಲದೇ ಕದ್ದು ಪರಾರಿಯಾಗುತ್ತಿದ್ದ ಚಾಲಾಕಿ ಕಳ್ಳರನ್ನು ಹೆಡೆಮುರಿ ಕಟ್ಟಿ ಅವರಿಂದ ಕಳುವು ಮಾಡಿದ್ದ ಚಿನ್ನಾಭರಣ ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾದ ಸಿಪಿಐ ರವಿಚಂದ್ರ ಡಿ.ಬಿ. ನೇತೃತ್ವದ ವಿಶೇಷ ತನಿಖಾ ತಂಡದ ಪಿಎಸ್ಐ (ಕಾ.ಸು) ಮಾಳಪ್ಪ ಪೂಜೇರಿ ಮತ್ತು ಸಿಬ್ಬಂದಿಗಳಾದ ಬಿ.ಎಲ್. ಹೊಸಟ್ಟಿ, ರಮೇಶ ಮುಂದಿನಮನಿ, ಎ.ಎಸ್. ಶಾಂಡಗೆ, ಪಿ.ಎಂ. ಸಪ್ತಸಾಗರ, ಹೆಚ್.ಆರ್. ಅಂಬಿ, ಟೆಕ್ನಿಕಲ್ ಸೆಲ್‌ನ ವಿನೋದ ಠಕ್ಕನ್ನವರ ಇವರ ಕಾರ್ಯಾಚರಣೆಯನ್ನು ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ, ಡಿವೈಎಸ್ಪಿ ಪ್ರಶಾಂತ ಮುನ್ನೊಳಿ ಅವರು ಶ್ಲಾಘಿಸಿದ್ದಾರೆ. ☯



ಸಿಬ್ಬಂದಿಗಳಾದ ಬಿ.ಎಲ್. ಹೊಸಟ್ಟಿ, ರಮೇಶ ಮುಂದಿನಮನಿ, ಎ.ಎಸ್. ಶಾಂಡಗೆ, ಪಿ.ಎಂ. ಸಪ್ತಸಾಗರ, ಹೆಚ್.ಆರ್. ಅಂಬಿ. ವಿನೋದ ಠಕ್ಕನ್ನವರ (ಟೆಕ್ನಿಕಲ್ ಸೆಲ್)

3 ☞

# ಕತ್ತು ಕೊಯ್ದು ಕೊಲೆ ಮಾಡಿದ ಪ್ರಿಯಕರ!

5ರಂದು ಬೆಳಿಗ್ಗೆ 9.30 ಗಂಟೆ ಸಮಯದಲ್ಲಿ ಪಾಳ್ಯ ಗ್ರಾಮದ ಹೊರವಲಯದಲ್ಲಿರುವ ಅರಣ್ಯ ಪ್ರದೇಶದಲ್ಲಿ ಆನಂದಪ್ಪನನ್ನು ವಶಕ್ಕೆ ಪಡೆದು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆಗೆ ಒಳಪಡಿಸಲಾಗಿ ಗ್ರಾಮದ ಶ್ರೀರಾಮ ರೆಡ್ಡಿರವರ ಪತ್ನಿ ರೂಪರವರೊಂದಿಗೆ ಸುಮಾರು ಎರಡು ವರ್ಷಗಳಿಂದ ಅಕ್ರಮ ಸಂಬಂಧವಿದ್ದು ಸುಮಾರು ಹದಿನೈದು ದಿನಗಳ ಹಿಂದೆ ಯಾವುದೋ ಹಣಕಾಸಿನ ವಿಚಾರವಾಗಿ ನಮ್ಮಿಬ್ಬರ ನಡುವೆ ಜಗಳವಾಗಿ ನನ್ನಿಂದ ದೂರವಾಗಿದ್ದರು. ಇತ್ತೀಚಿನ ದಿನಗಳಲ್ಲಿ ನನ್ನನ್ನು ಬಿಟ್ಟು ಬೇರೆ ಪುರುಷರೊಂದಿಗೆ ಅನೈತಿಕ ಸಂಬಂಧ ಇಟ್ಟುಕೊಂಡಿರುವ ಬಗ್ಗೆ ವಿಚಾರ ತಿಳಿದು ನಾನೇ ಆಕೆಯನ್ನು ಹುಡುಕಿಕೊಂಡು ಹೋಗಿ, ಪರಪುರುಷರೊಂದಿಗಿನ ಅನೈತಿಕ ಸಂಬಂಧದ ಬಗ್ಗೆ ಕೇಳಲಾಗಿ ನನ್ನ ನಿನ್ನ ನಡುವೆ ಸಂಬಂಧ ಮುರಿದು ಬಿದ್ದ ಮೇಲೆ ನಾನು ಯಾರ ಜೊತೆ ಸಂಬಂಧವನ್ನು ಇಟ್ಟುಕೊಂಡರೇ ನಿನಗೇನು ಎಂದು ಹೇಳಿ ಬೈದು ಕಳುಹಿಸಿಬಿಟ್ಟಳು. ಇದರಿಂದ ಅವಳ ಮೇಲೆ ಕೋಪ ಬಂದು ಅವಳಿಂದ ನನಗೆ ಸಿಗದ ಸುಖ, ಬೇರೆ ಯಾರಿಗೂ ಅವಳಿಂದ ಸುಖ ಸಿಗಬಾರದು. ಅದಕ್ಕೆ ಅವಳನ್ನು ಮುಗಿಸಿಬಿಡುವ ಪ್ಲಾನ್ ಮಾಡಿಕೊಂಡು ಸಮಯಕ್ಕಾಗಿ ಕಾದಿದ್ದೆನು.



ದೂರು ಮತ್ತು ಪೊಲೀಸ್ ಅಧಿಕಾರಿಗಳಿಂದ ಸ್ಥಳ ಪರಿಶೀಲನೆ

ಎಂದಿನಂತೆ ನವೆಂಬರ್ 4ರಂದು ಮಧ್ಯಾಹ್ನ 2 ಗಂಟೆ ಸಮಯದಲ್ಲಿ ನಮ್ಮ ಗ್ರಾಮದ ಬೈರೆಡ್ಡಿರವರ ಮಾವಿನ ತೋಪಿನಲ್ಲಿ ಹಸು ಮೇಯಿಸುತ್ತಿದ್ದ ರೂಪಾಳನ್ನು ಭೇಟಿಯಾಗಿ ನಾನು, ನೀನು ಎಷ್ಟು ಚೆನ್ನಾಗಿ ಇದ್ದೆವು. ಹಣಕಾಸಿನ ವಿಚಾರಕ್ಕೆ ವೈಮನಸ್ಯ ಏರ್ಪಟ್ಟು ನನ್ನಿಂದ ದೂರವಾಗಿ ನೀನು ಎಷ್ಟು ದಿನಗಳಾಗಿ ಹೋಯಿತು. ಈಗ ನಿನ್ನ ಜೊತೆ ಸ್ವಲ್ಪ ಹೊತ್ತು ಕಾಲ ಕಳೆಯಬೇಕೆಂದುಕೊಂಡು ನಿನ್ನ ಬಳಿಗೆ ಬಂದಿರುವೆ. ನಿರಾಸೆ ಮಾಡದೆ ನನ್ನ ಜೊತೆ ಬರುವಂತೆ ಕರೆದ್ದೆನು. ಅದರಂತೆ ರೂಪಾಳನ್ನು ಕರೆದುಕೊಂಡು ನಮ್ಮ ಗ್ರಾಮದ ವಾಸಿ ಬೈರೆಡ್ಡಿ ಮತ್ತು ಬರುವನ ಹಳ್ಳಿ ಗ್ರಾಮದ ವಾಸಿ ವೆಂಕಟೇಶ್ ರೆಡ್ಡಿರವರ ಮಾವಿನ ತೋಟಗಳ ಮಧ್ಯೆ ಇರುವ ನೀರು ಹೋಗುವ ಕಾಲುವೆ ಬಳಿಗೆ ಕರೆದುಕೊಂಡು ಹೋಗಿ ಹಳ್ಳದಲ್ಲಿ ನಾವಿಬ್ಬರು ಕುಳಿತುಕೊಂಡೆವು. ನಂತರ ಅವಳ ಬಳಿಗೆ ಹೋಗಿ ಲೈಂಗಿಕ ಸುಖ ನೀಡುವಂತೆ ಕೇಳಿ ತಬ್ಬಿಕೊಳ್ಳಲು ಪ್ರಯತ್ನಿಸಿದ್ದೆನು. ಆದರೆ ಅವಳು ತನ್ನ ಮೈ ಮುಟ್ಟಲು ಬಿಡದೆ, ನಮ್ಮಿಬ್ಬರ ನಡುವಿನ ಸಂಬಂಧದ ಮಧ್ಯೆ ಹಣದ ವಿಚಾರವನ್ನು ತಂದು ನನಗೆ ಮೋಸ ಮಾಡಿರುವೆ, ಇನ್ನು ಮುಂದೆ ನನ್ನ ನಿನ್ನ ನಡುವೆ ಯಾವುದೇ ಸಂಬಂಧ ಇರುವುದಿಲ್ಲವೆಂದು ಹೇಳಿಬಿಟ್ಟಳು. ಆಗ ನಾನು ಸಮಾಧಾನಪಡಿಸುತ್ತಾ ಇನ್ನು ಮುಂದೆ ಹಣದ ವಿಚಾರವನ್ನು ಎತ್ತುವುದಿಲ್ಲ. ಈ ಮೊದಲು ನಾವಿಬ್ಬರು ಯಾವ ರೀತಿ ಇದ್ದೆವು ಅದೇ ರೀತಿ ಇನ್ನು ಮುಂದೆ ಇದ್ದುಬಿಡೋಣವೆಂದು ಹೇಳಿದೆ. ಅದಕ್ಕೆ ಅವಳು ಇದು ನಡೆಯದ ವಿಚಾರ ನಿನ್ನೊಂದಿಗೆ ದೇಹ ಹಂಚಿಕೊಳ್ಳಲು ಸಾಧ್ಯವಿಲ್ಲವೆಂದು ಹೇಳಿಬಿಟ್ಟಳು. ಈ ಮಾತನ್ನು ಕೇಳಿದ್ದರಿಂದ ನನ್ನಲ್ಲಿದ್ದ ಕಾಮ ತಣ್ಣಗಾಗಿ ದ್ವೇಷದ ಬೆಂಕಿ ಉರಿಯಲು ಪ್ರಾರಂಭಿಸಿತು. ಕೋಪದಲ್ಲಿ ಅವಳ ಮೇಲೆ ಬಿದ್ದು ದೈಹಿಕವಾಗಿ ಹಿಂಸೆ ನೀಡಿದೇನಲ್ಲದೆ ಅವಳು ಹುಲ್ಲು ಕೊಯ್ಯಲು ತಂದಿದ್ದ ಕುಡಗೋಲನ್ನು ಎತ್ತಿಕೊಂಡು ನೆಲದ ಮೇಲೆ ಬಿದ್ದಿದ್ದ ರೂಪಾ ಮೇಲೆ ಏಳಲು ಪ್ರಯತ್ನಿಸುತ್ತಿರುವವಳ ಎದೆಯ ಮೇಲೆ ಕಾಲನ್ನಿಟ್ಟು ಬಲವಾಗಿ ಒತ್ತಿ ಹಿಡಿದು ಕುಡುಗೋಲಿನಿಂದ ಕತ್ತನ್ನು ಕೊಯ್ದು ಕೊಲೆ ಮಾಡಿ ಅಲ್ಲಿಂದ ಪರಾರಿಯಾಗಿ ತಲೆಮರೆಸಿಕೊಂಡಿದ್ದಾಗಿ ಹೇಳಿದನು.



ಆರೋಪಿ ಆನಂದಪ್ಪನನ್ನು ಬಂಧಿಸಿರುವ ಪೊಲೀಸರು

ಆರೋಪಿ ಆನಂದಪ್ಪನಿಂದ ಹೇಳಿಕೆ ಪಡೆದ ನಂತರ ಆತನನ್ನು ಕೃತ್ಯ ನಡೆಸಿದ ಸ್ಥಳಕ್ಕೆ ಕರೆದುಕೊಂಡು ಹೋಗಿ ಸ್ಥಳದ ಮಹಜರ್‌ನ್ನು ನಡೆಸಿದ ಮೇಲೆ ಆರೋಪಿ ಆನಂದಪ್ಪ ತಾನು ನೀರಿನ ಹಳ್ಳದಲ್ಲಿ ಅಡಗಿಸಿಟ್ಟಿದ್ದ ಕುಡುಗೋಲನ್ನು ತೆಗೆದುಕೊಟ್ಟಿದ್ದು, ಪಂಚರ ಸಮಕ್ಷಮದಲ್ಲಿ ವಶಕ್ಕೆ ಪಡೆದುಕೊಂಡ ನಂತರ ಆರೋಪಿ ಆನಂದಪ್ಪನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಈ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದ ಅಧಿಕಾರಿ ಮತ್ತು ಸಿಬ್ಬಂದಿಯವರ ಕಾರ್ಯವನ್ನು ಕೋಲಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ. ನಿಖಿಲ್‌ರವರು ಶ್ಲಾಘಿಸಿರುತ್ತಾರೆ. ☯

## ಕಚಗುಳಿ

# ಹಲೋ ನನ್ನ ಪ್ರಿಯ!

ಶ್ರೀನಿವಾಸ ಪ್ರಾವಿಷನ್ ಸ್ಟೋರ್. ಮಾಲೀಕರು ರಂಗನಾಥಶೆಟ್ಟಿ. ಪ್ರಾಯ ಐವತ್ತು. ಹಲವಾರು ವರ್ಷಗಳಿಂದ ವ್ಯಾಪಾರ ಮಾಡಿ ತುಂಬಾ... ತುಂಬಾ ಆಸ್ತಿ ಮಾಡಿದ್ದರು. ಅವರಿಗೆ ಮಕ್ಕಳಿರಲಿಲ್ಲ. ಅವರ ವ್ಯಾಪಾರ-ವ್ಯವಹಾರಗಳಲ್ಲಿ ಬಲಗೈ ಬಂಟನ ರೀತಿ ಇದ್ದವನು ಗೋವಿಂದ ಶೆಟ್ಟಿ. ಪ್ರಾಯದ ಯುವಕ! ತಮ್ಮ ನಂತರ ಆಸ್ತಿಯನ್ನೆಲ್ಲಾ ಅವನಿಗೆ ಕೊಡಲು ತೀರ್ಮಾನ ಮಾಡಿದ್ದಾರೆ. ಆದರೂ ಕೆಲವೊಮ್ಮೆ ಬೇರೆ ಬೇರೆ ಆಲೋಚನೆ ಬರುತ್ತದೆ.

ಸುಪ್ತ ಆಸೆ ಚಿಗುರುತ್ತದೆ. ಮದುವೆ ಆಗುವ ಆಸೆ. ಹೆಂಡತಿ ಬದುಕಿರುವಾಗ ಇವರಿಗೆ ಅದೆಂತಹ ಆಸೆ ಬಂದಿದೆ? ಹೆಂಡತಿ ಬದುಕಿದ್ದಾಳೆ ನಿಜ. ಆದರೆ ಅವಳು ನಿತ್ಯ ರೋಗಿಷ್ಠೆ. ಕೆಲವು ವರ್ಷಗಳಿಂದ ಅವಳನ್ನು ರೋಗಗಳು ಕಾಡುತ್ತಿವೆ. ಅವಳೇ ಗಂಡನಿಗೆ ಒಂದು ಸಲ ಹೇಳಿದ್ದಳು.

ಆಕೆ ಹೇಳಿದ್ದೇನು? ನನ್ನಿಂದ ನಿಮಗೆ ಸಂಸಾರ ಸುಖ ಇಲ್ಲ. ನೀವು ಮತ್ತೊಂದು ಮದುವೆ ಆಗಿ ಹೆಂಡತಿ ಈ ರೀತಿ ಹೇಳಿದ್ದರಿಂದ ಆಸೆ ಗರಿಕೆದರಿ ಹಾರಾಡಿತ್ತು. ಆಸೆಯೊಂದಿಗೆ ಈ ಆಲೋಚನೆ ಬಂದಿದೆ. ಮದುವೆಯಾದಾಗ ಇವರು ಶ್ರೀಮಂತರಾಗಿರಲಿಲ್ಲ. ಸಂಬಂಧಿಕರ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು. ಅಂತಹವರಿಗೆ ಸಿನಿಮಾ ಹೀರೋಯಿನ್ ರೀತಿ ಇರುವ ಹೆಣ್ಣು ಸಿಗಲು ಸಾಧ್ಯವೆ?

ಹೆಂಡತಿ ಬಲು ಕಪ್ಪು. ಮುಖ ಲಕ್ಷಣ ಇರಲಿಲ್ಲ. ಸೆಕ್ಸ್‌ನಲ್ಲಿ ಆಸಕ್ತಿ ಇರಲಿಲ್ಲ. ಹಗಲಿನ ವೇಳೆ ಹೆಂಡತಿಯನ್ನು ನೇರವಾಗಿ ನೋಡುತ್ತಿರಲಿಲ್ಲ. ರಸಿಕ ಶೆಟ್ಟಿಗೆ ನಿರಾಸೆಯಾಗಿತ್ತು. ಅವರಿಗೆ ಆಗಲು ಮತ್ತು ಈಗಲು ಇರುವ ಆಸೆ ಏನು?

ತೆಳಗ್ಗೆ-ಬೆಳ್ಳಗಿರುವ, ಮುದ್ದಾದ ಮುಖದ, ಮಾದಕ ಸೌಂದರ್ಯದ ಯುವತಿನ ಮದುವೆ ಆಗುವ ಬಯಕೆ ಇತ್ತು. ಆಗ ಬಡತನ ಅಂತ ಹೆಣ್ಣು ಕೊಟ್ಟಿರಲಿಲ್ಲ. ಆಗ ಐವತ್ತರ ಪ್ರಾರ ಪ್ರಾಯ ಆಗಿದೆ. ಅಂದ ಮೇಲೆ ಪ್ರಾಯ ತುಂಬಿರುವ ಚೆಲುವೆ ಹೆಂಡತಿ ಆಗಲು ಸಾಧ್ಯವೆ?

ಮದುವೆ ಆಗಬೇಕೆಂದಿರುವ ತಮ್ಮ ಆಸೆ ಬಗ್ಗೆ ಅಣ್ಣನ ಮಗ ಗೋವಿಂದ ಶೆಟ್ಟಿಗೆ ಹೇಳಿರಲಿಲ್ಲ. ಮುಂದೆ ಈ ಆಸ್ತಿ ನನಗೆ ಸಿಗುತ್ತದೆ ಎಂಬ ಆಸೆಯಿಂದ ದುಡಿಯುತ್ತಿದ್ದಾನೆ. ನಾಲ್ವರು ವ್ಯಾಪಾರ ಅಭಿವೃದ್ಧಿ ಮಾಡಿದ್ದಾನೆ. ತುಂಬಾ ಆತ್ಮೀಯರ ಹತ್ತಿರ ಮತ್ತೊಂದು ಮದುವೆ ಆಗುವ ಬಯಕೆ ಹೇಳಿಕೊಂಡಿದ್ದರು. ತಮಗೆ ಎಂತಹ ಹೆಣ್ಣು ಬೇಕು ಎಂಬುದನ್ನು ಹೇಳಿದ್ದರು.

ಇವರಿಗೆ ವಿಪರೀತ ಆಸ್ತಿ ಇರೋದ್ರಿಂದ ಮತ್ತು ಮನೆಯ ತಿಜೋರಿಯಲ್ಲಿ ಹಲವಾರು ಲಕ್ಷಗಳ ಮತ್ತು ಎಷ್ಟೋ ಲಕ್ಷಗಳು ಬೆಲೆಬಾಳುವ ಚಿನ್ನ, ಬೆಳ್ಳಿ, ಬಂಗಾರದ ಆಭರಣಗಳಿರೋದ್ರಿಂದ ಮದುವೆ ಆಗಲು ಕೆಲವರು ಒಪ್ಪಿದ್ದರು. ರಂಗನಾಥ ಶೆಟ್ಟಿ ಒಪ್ಪಿರಲಿಲ್ಲ. ಮದುವೆ ವಯಸ್ಸು ದಾಟಿರುವ ಮತ್ತು ಸೌಂದರ್ಯದ ಛಾಯೆ ಇಲ್ಲದ ಹೆಂಗಸರನ್ನು ಇವರೇಕೆ ಮದುವೆ ಆಗುತ್ತಾರೆ? ತಾವು ನಿರೀಕ್ಷೆ ಮಾಡಿರುವಂತಹ ಯುವತಿ ಸಿಗಲಾರಳು ಎಂಬ ನಿರಾಸೆ ತೀವ್ರವಾಗಿದೆ. ಮುಂದೇನು ಮಾಡಲಿ? ಚೆಲುವೆಗಾಗಿ ಹಂಬಲಿಸುತ್ತಿದ್ದಾರೆ.

●●●

ಬೆಳಗಿನ ಹತ್ತು ಗಂಟೆ. ಗೋವಿಂದ ಶೆಟ್ಟಿ ಇರಲಿಲ್ಲ. ಆಗ ಬ್ಯಾಗುಗಳನ್ನು ಹಿಡಿದು ಒಬ್ಬಳು ಅಂಗಡಿಗೆ ಬಂದಳು. ಬಿಸಿಲಲ್ಲಿ ಬೆಳದಿಂಗಳು ಬಂದಂತೆ ಆಗಿ ಮೈ ಪುಳುಕಗೊಂಡಿತು. ಆಕರ್ಷಕ ರೂಪವತಿ. ಹಾಲಿನ ಕೆನೆಯ ಬಣ್ಣದ ಮೈಕಾಂತಿ. ಆಕರ್ಷಕ ಎದೆ ಸೌಂದರ್ಯ . ಸಪೂರವಾದ ಸೊಂಟ. ಅವಳು ಸೀರೆ ಉಟ್ಟು, ಸಡಿಲವಾಗಿ ಜಡೆ ಹಾಕಿಕೊಂಡು ಮೆಲ್ಲಗೆ- ಕನಕಾಂಬರದ ಹೂವನ್ನು ಮುಡಿದು ಬಂದಿದ್ದಾಳೆ. ಕಣ್ಣುಗಳು ಮಿನುಗುತ್ತಿವೆ. ತುಟಿಗಳು ಮಿಂಚುತ್ತಿವೆ. ಈ ಹಿಂದೆ ಇವಳನ್ನು ನೋಡಿರಲಿಲ್ಲ. ಆಕೆ ಇವರು ಕುಳಿತಿದ್ದ ಗಲ್ಲಾ ಪೆಟ್ಟಿಗೆ (ಕ್ಯಾಶ್‌ಬಾಕ್ಸ್) ಹತ್ತಿರ ಬಂದು ''ನಮಸ್ಕಾರ ಶೆಟ್ರೆ. ನಾವು ಮಂಗಳೂರಿನಿಂದ ಇಲ್ಲಿಗೆ ಬಂದಿದ್ದೇನೆ. ನಿಮ್ಮ ಅಂಗಡಿ ಇರುವ ಈ ಬೀದಿಯ ಕೊನೆಯಲ್ಲಿ ನಮ್ಮ ಮನೆ ಇದೆ. ನಾನು, ನನ್ನ ತಾಯಿ ಮತ್ತು ತಮ್ಮ ಮಾತ್ರ ವಾಸ ಮಾಡುತ್ತಿದ್ದೇನೆ. ನಮಗೆ ದಿನಸಿ ಸಾಮಾನು ಬೇಕು'' ಎಂದಳು.

ಅವರು ಅವಳ ಮುಖ ಮತ್ತು ಎದೆ ಸೌಂದರ್ಯದ ಕಡೆ ಬೆರಗಾಗಿ ನೋಡುತ್ತಾ ''ನಿಮ್ಮ ಗಂಡ ಬೇರೆ ಊರಲ್ಲಿ ಕೆಲಸ ಮಾಡುತ್ತಿದ್ದಾರ'' ಎಂದು ಕೇಳಿದರು.

ಅವಳ ಮುಖ ಕೆಂಪಾಯಿತು.

''ನನಗಿನ್ನೂ ಮದುವೆ ಆಗಿಲ್ಲ.''

ಆ ಕ್ಷಣ ಪುಳುಕಗೊಂಡರು.

ಮೈಯಲ್ಲಿ ಸುಖದ ಕಂಪನವಾಯಿತು.

''ನೀವು ಏನು ಕೆಲಸ ಮಾಡುತ್ತಿದ್ದೀರ?''

''ಕೆಲಸ ಮಾಡುತ್ತಿದ್ದೇನೆ. ಬೇರೆ ಊರಲ್ಲಿ ಪ್ರೈವೇಟ್ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದೆ. ಯಾಕೋ ಸರಿ ಹೋಗಲಿಲ್ಲ. ಸಂಬಳ ಸರಿಯಾಗಿ ಕೊಡುತ್ತಿರಲಿಲ್ಲ. ಸರಿ ಈ ಊರಲ್ಲಿ ಕೆಲಸ ಇದೆ ಅಂತ ಪರಿಚಯದವರು ಹೇಳಿದ್ರು. ಅದಕ್ಕೆ ಬಂದಿದ್ದೀನಿ.''

ಶೆಟ್ಟರು ''ಕೆಲಸ ತಾನೇ ತಾನು ಕೊಡಿಸುತ್ತೇನೆ'' ಎಂದು ಹೇಳಿ ''ನಿಮಗೆ ಏನೇನು ಸಾಮಾನು ಬೇಕು'' ಎಂದರು.

''ನೀವು ಅಂತ ಗೌರವ ಬೇಡ. ಏಕವಚನದಲ್ಲಿ ಕೂಗಿ.''

''ನಿನ್ನ ಹೆಸರೇನು?''

''ಪದ್ಮಾವತಿ ಅಂತ. ನೀವು ಬೇಕಾದರೆ ಪದ್ಮಿನಿ ಅಂತ ಕೂಗಿ.''

ಪದ್ದು... ಪದ್ದು ಅಂತ ಕೂಗ್ತೀನಿ ಎಂದು ಹೇಳಲು ಬಾಯಿ ತೆರೆದರು. ಆದರೆ ಈಗಲೇ ಅಷ್ಟೊಂದು ಸಲಿಗೆ ಬೇಡ ಎಂದುಕೊಂಡು ''ಆಗಲಿ ಪದ್ಮಿನಿ'' ಎಂದರು.

ಒಂದು ತಿಂಗಳಿಗೆ ಆಗುವಷ್ಟು ಸಾಮಾನು ಪ್ಯಾಕ್ ಮಾಡಿಸಿದರು. ''ಇಷ್ಟೊಂದು ದೊಡ್ಡ ಲಗೇಜ್ ಅನ್ನು ನಿನ್ನಂತ ಕೋಮಲೆ ತಗೊಂಡು ಹೋಗಲು ಸಾಧ್ಯವೆ? ನೀನು ಮನೆಗೆ ಹೋಗು. ನಮ್ಮ ಕೆಲಸದ ಆಳು ತಂದುಕೊಡ್ತಾನೆ.''

''ತುಂಬಾ ಥ್ಯಾಂಕ್ಸ್ ಶೆಟ್ರೆ.''

ಅಂಗಡಿ ಬಿಲ್ ರೆಡಿಯಾಯಿತು. ಸಾಮಾನಿನ ಬಿಲ್ ನಾಲ್ಕು ಸಾವಿರದ ಎಂಟು ನೂರು ರೂಪಾಯಿ ಆಗಿದೆ. ಅವಳು ಗಾಬರಿಯಾದಳು. ಅವರ ಕಡೆ ನೋಡುತ್ತಾ ಸೆರಗನ್ನು ಸ್ವಲ್ಪ ಸರಿಸಿ ರವಿಕೆ ಒಳಗೆ ಕೈ ತೂರಿಸಿ ಪುಟ್ಟ ಪರ್ಸ್ ತೆಗೆದಳು. ಆಗ ರಸಿಕ ದರ್ಶನವಾಯಿತು. ಬ್ಯುಟಿಫುಲ್... ಸೂಪರ್! ಕೆಂಪು ಮತ್ತು ಬಿಳುಪಿನ ಛಾಯೆ ಇರುವಂತ ಎದೆ ಸೌಂದರ್ಯದ ದರ್ಶನ ಆಯಿತು. ಮೈ ಬೆಚ್ಚಗಾಯಿತು!

ಅವಳು ಗಾಬರಿಯಿಂದ ''ಶೆಟ್ರೆ... ಸಾರಿ... ಬರೀ ಐನೂರು ರೂಪಾಯಿ ಇದೆ. ಉಳಿದ ಹಣ ನನ್ನ ವ್ಯಾನಿಟಿ ಬ್ಯಾಗಲ್ಲಿ ಇದೆ. ಈಗಲೇ ತಂದುಕೊಡ್ತೀನಿ'' ಎಂದು ಏನೂರರ ನೋಟನ್ನು ಹಿಡಿದಳು.

''ಅಯ್ಯೋ... ಆಮೇಲೆ ಕೊಟ್ಟರಾಯಿತು ಬಿಡು'' ಎಂದು ಹೇಳಿ ಹಣ ಹಿಡಿದಿದ್ದ ಅವಳ ಕೈ ಅನ್ನು ಹಿಡಿದು ಒತ್ತಿದರು. ಅವಳು ವಿರೋಧಿಸಲಿಲ್ಲ.

''ಶೆಟ್ರೆ... ನೀವು ಮನೆಗೆ ಬನ್ನಿ. ಉಳಿದ ಹಣ ಕೊಡ್ತೀನಿ.''

''ಆಗಲಿ ಬರ್ತೀನಿ.''

ಅವಳು ಅವರ ಕಡೆ ನೋಡಿ ಬಲು ಮೋಹಕವಾಗಿ ನಗುತ್ತಾ ಕೈ ಆಡಿಸಿದಳು. ಕೆಲಸದ ಹುಡುಗ ತಿಂಗಳ ಸಾಮಾನಿನ ಲಗೇಜ್ ಹೊತ್ತುಕೊಂಡು ಹೊರಟನು.

●●●

ಮಧ್ಯಾಹ್ನ ಎರಡು ಗಂಟೆ. ಬಾಗಿಲ ಬಡಿತದ ಶಬ್ದ ಕೇಳಿ ಮಲಗಿದ್ದ ಪದ್ಮಿನಿ ಎದ್ದು ಬಾಗಿಲು ತೆಗೆದಳು.

ರಂಗನಾಥಶೆಟ್ಟಿ ನಿಂತಿದ್ದಾನೆ.

ಅವಳು ನಗುತ್ತಾ ''ಓ ಶೆಟ್ರೆ... ಬನ್ನಿ... ಬನ್ನಿ'' ಎಂದಳು. ತುಂಬಾ ಹತ್ತಿರದಿಂದ ವಳನ್ನು ನೋಡುತ್ತಿರೋದ್ರಿಂದ ಬಯಕೆ ಕೆರಳಿ ಮೈ ಬಿಸಿಯಾಗುತ್ತಿದೆ.

''ಮನೇಲಿ ತಾಯಿ, ತಮ್ಮ ಇದ್ದಾರ?''

''ಅವರೆಲ್ಲಾ ಸಿನಿಮಾಕ್ಕೆ ಹೋಗಿದ್ದಾರೆ.''

''ಮನೆಗೆ ಊಟ ಮಾಡಲು ಹೊರಟಿದ್ದೆ. ನಿನ್ನ ನೆನಪಾಯಿತು. ಅದಕ್ಕೆ ಬಂದೆ.''

ಅವಳು ತುಟಿಗಳನ್ನು ಅರಳಿಸಿ ಬಲು ಮೋಹಕವಾಗಿ ನಗುತ್ತಾ ''ಶೆಟ್ರೆ... ನಾನು ನಿಜವಾಗಿ ಅದೃಷ್ಟವಂತೆ'' ಎಂದಳು.

''ಯಾಕೆ ಪದ್ಮಿನಿ?''

''ನಿಮಗೆ ನನ್ನ ನೆನಪಾಗಿರೋದು ಅದೃಷ್ಟ ಅಲ್ವ. ಹೇಗಿದ್ದರೂ ಊಟ ಆಗಿಲ್ಲ. ಬನ್ನಿ ನನ್ನ ಜೊತೆ ಊಟ ಮಾಡಿ.''

''ನಿನಗ್ಯಾಕೆ ತೊಂದರೆ ಪದ್ಮಿನಿ.''

''ಇದರಲ್ಲಿ ತೊಂದರೆ ಯಾಕೆ ಆಗುತ್ತೆ. ನೀವು ನನ್ನ ಜೊತೆ ಊಟ ಮಾಡಲೇಬೇಕು. ಬನ್ನಿ... ಕೈ ತೊಳೆದುಕೊಂಡು ಬರೋಣ'' ಎಂದು ಅವಳ ಕೈ ಹಿಡಿದು ಮೃದುವಾಗಿ ಒತ್ತಿದಳು ಮತ್ತು ಕೈ ಹಿಡಿದುಕೊಂಡೇ ಸಿಂಕ್ ಹತ್ತಿರ ಬಂದಳು.

ಅವಳ ಕೈ ಬೆಚ್ಚಗಿದೆ. ಹತ್ತಿಯಂತೆ ಮೃದುವಾಗಿದೆ. ಅವರು ಅವಳ ಕೈ ಬೆರಳುಗಳನ್ನು ಬೆಸೆದು ಮೃದುವಾಗಿ ತೀಡಿದರು.

''ಶೆಟ್ರೆ ಕೈ ಬಿಡಿ.''

ಅವರು ಕೈ ಬಿಟ್ಟು ದೂರ ಸರಿದರು. ಅವಳ ಮುಖ ನೋಡಿದರು. ಅವಳು ಮೆಲುನಗೆ ಬೀರಿದಳು. ಇಬ್ಬರೂ ಎದುರು-ಬದರಾಗಿ ಕುಳಿತು ಊಟ ಮಾಡುತ್ತಿದ್ದಾರೆ. ಅವಳ ಸೌಂದರ್ಯ ಆರಾಧಿಸುವ ರೀತಿ ನೋಡುತ್ತಾಚ ನಿಧಾನವಾಗಿ ಊಟ ಮಾಡಿದರು. ಈ ಅವಧಿಯಲ್ಲಿ ಎರಡು ಸಲಕ್ಕೆ ಹಿಡಿದಿದ್ದರು. ಅವಳಿಂದ ವಿರೋಧ ಬಂದಿರಲಿಲ್ಲ. ತಿಂಗಳ ಸಾಮಾನಿನ ಬಿಲ್ ಮೂರು ಸಾವಿರದ ಎಂಟುನೂರು ರೂಪಾಯಿ. ಅವಳು ಕೊಡಲಿಲ್ಲ.

ಇವರು ಕೇಳಲಿಲ್ಲ. ಅವರು ಅಲ್ಲಿಂದ ಹೊರಡುವ ಮೊದಲು ''ಶೆಟ್ರೆ... ನಂಗೆ ನಿಮ್ಮ ಜೊತೆ ಆಗಾಗ ಫೋನ್‌ನಲ್ಲಿ ಮಾತಾಡುವ ಆಸೆ ಇದೆ. ಆದರೆ ನನ್ನ ಹತ್ತಿರ ಮೊಬೈಲ್ ಇಲ್ಲ'' ಎಂದು ಅವರ ಹತ್ತಿರ... ತುಂಬಾ ಹತ್ತಿರ ಬಂದು ಹೇಳಿದಳು. ಅವಳು ಬಿಡುತ್ತಿರುವ ಬಿಸಿ ಉಸಿರು ಇವರ ಮುಖದ ಮೇಲೆ ಬೀಳುತ್ತಿದೆ.

ಹೊಳೆಪು ಕಣ್ಣುಗಳು. ರಸದಿಂದ ಮಿನುಗುತ್ತಿರುವ ತುಟಿಗಳು. ಮುದ್ದಾದ ಮುಖ. ಹತ್ತಿರದಿಂದ ನೋಡುತ್ತಿದ್ದರಿಂದ ಅವರು ಆ ಕ್ಷಣಗಳಲ್ಲಿ ಮೈಮರೆತರು. ಬೆಚ್ಚನೆಯ ಕೈ ಸ್ಪರ್ಶವಾಯಿತು. ಅವರ ಎದೆ ಸವರುತ್ತಿದ್ದಾಳೆ.

''ಯಾಕೆ ಮಾತಾಡುತ್ತಿಲ್ಲ?''

''ಆಗಲಿ ಮೊಬೈಲ್ ಕೊಡುಸ್ತೀನಿ.''

''ಇಪ್ಪತ್ತೆದು ಸಾವಿರ ಆಗುತ್ತೆ.''

ತಮ್ಮ ಎದೆ ಸವರುತ್ತಿರುವ ಅವಳ ಕೈ ಮೇಲೆ ಕೈ ಹಾಕಿ ಅದುಮುತ್ತಾ ''ಮುವತ್ತು ಸಾವಿರ ಕೊಡ್ತೀನಿ. ನಿನಗೆ ಯಾವ ಕಂಪನಿ ಮೊಬಲ್ ಬೇಕಾದರೂ ತಗೋ'' ಎಂದು ಹೇಳುತ್ತಿರುವಾಗಲೇ ಅವಳು ಸರ್ರನೆ ಬಾಗಿ ಅವರ ಒರಟು ಕೆನ್ನೆಯ ಮೇಲೆ ಶಬ್ದ ಬರುವ ರೀತಿ ಮುತ್ತು ಕೊಟ್ಟು ದೂರ ಸರಿಯುತ್ತಾ ''ಥ್ಯಾಂಕ್ಸ್... ತುಂಬಾ ಥ್ಯಾಂಕ್ಸ್ ಶೆಟ್ರೆ'' ಎಂದಳು.

●●●

''ಶೆಟ್ರೆ... ನಾನು ನಿಮ್ಮ ಪದ್ಮಿನಿ... ಪದ್ದು'' ಎಂಬ ಧ್ವನಿಯನ್ನು ಮೊಬಲ್‌ನಲ್ಲಿ ಕೇಳಿ ಅವರು ಇಡೀ ಶರೀರದಲ್ಲಿ ಸುಖ ಕಂನವಾಯಿತು. ಆ ಕ್ಷಣಗಳಲ್ಲಿ ಅವರು ''ಏ... ಮೊಬೈಲ್ ಯಾವಾಗ ತಗೊಂಡೆ'' ಎಂದು ಕೇಳಿದರು.

''ನೆನ್ನೆ ನೀವು ಮುವತ್ತು ಸಾವಿರ ಕೊಟ್ರಿ. ಸಂಜೆ ತಗೊಂಡೆ. ಶೆಟ್ರೆ... ಪ್ಲೀಸ್... ಒಂದು ವರ್ಷದ ಕರೆನ್ಸಿ ಪ್ಲಾನ್ ಇರುತ್ತೆ. ನಂಗೆ ಆಗಾಗ ಕರೆನ್ಸಿ ಹಾಕಿಸೋದು ಮರೆತು ಹೋಗುತ್ತೆ. ಇವತ್ತೇ ಹಾಕುಸ್ತೀರ.''

''ಇವತ್ತೇ ಯಾಕೆ... ಈಗಲೇ ಹಾಕುಸ್ತೀನಿ ಪದ್ಮಿನಿ.''

''ಪದ್ದು ಅಂತ ಕೂಗಿ ಪರವಾಗಿಲ್ಲ.''

''ಅಂಗಡೀಲಿ ಕೆಲಸಗಾರರು, ಗಿರಾಕಿಗಳಿರುವಾಗ ಕೂಗಲು ಆಗುತ್ತಾ ?''

''ಮನೆಗೆ ಬಂದಾಗ ಕೂಗ್ತೀನಿ.''

''ಆಗಲಿ ಶೆಟ್ರೆ.''

''ನನಗೊಂದು ಆಸೆ ಇದೆ ಪದ್ಮಿನಿ.''

''ಏನದು ಹೇಳಿ ಶೆಟ್ರೆ ?''

ಅವರು ಸುತ್ತಲು ನೋಡಿದ ನಂತರ, ಹತ್ತಿರದಲ್ಲಿ ಯಾರೂ ಇಲ್ಲ ಎಂಬುದು ಖಚಿತವಾದ ನಂತರ ತುಂಬಾ ಮೆಲ್ಲಗೆ ''ನಂಗೆ ತುಂಬಾ ಬೋರ್ ಆಗಿದೆ. ಎರಡು ದಿವಸ ಬೇರೆ ಯಾವುದಾದರೂ ಊರಿಗೆ ಹೋಗಿ ಬರೋಣ ಬರ್ತೀಯ'' ಎಂದು ಕೇಳಿದರು.

ಅವಳಿಂದ ಪ್ರತಿಕ್ರಿಯೆ ಬರಲಿಲ್ಲ.

''ಹಲೋ... ಹಲೋ...''

''ಹಾಂ... ಹೇಳಿ.''

''ಯಾಕೆ ಉತ್ತರ ಕೊಡುತ್ತಿಲ್ಲ?''

''ಶೆಟ್ರೆ... ಇದನ್ನೆಲ್ಲಾ ಫೋನ್‌ನಲ್ಲಿ ಹೇಳಬಾರದು. ಮನೆಗೆ ಬನ್ನಿ. ಮಧ್ಯಾಹ್ನ ಊಟ ಮಾಡುತ್ತಾ ಮಾತಾಡೋಣ.''

ಅವರು ತುಂಬಾ ಉತ್ಸಾಹದಿಂದ ''ದದ್ಮಿನಿ... ಏನಾದರೂ ತರಬೇಕಾ?

''ನಾನೇ ಕೇಳಬೇಕು ಅಂತ ಅದ್ಕೊಂಡಿದ್ದೆ. ನಂಗೆ ಐವತ್ತು ಸಾವಿರ ಬೇಕು. ನನ್ನ ತಮ್ಮನ ಕಾಲೇಜ್ ಫೀಜ್ ಕಟ್ಬೇಕು. ನನಗೋಸ್ಕರ... ನಿಮ್ಮ ಪದ್ದುಗೋಸ್ಕರ ತಗೊಂಡು ಬರ್ತೀರ?''

''ಐವತ್ತು ಸಾವಿರ ಯಾಕೆ ಒಂದು ಲಕ್ಷ ತಂದುಕೊಡ್ತೀನಿ ಪದ್ಮಿನಿ.''

''ನನಗೆ ಏನಾದರೂ ಕೊಡ್ತೀಯ?''

ಅವಳು ನಗುತ್ತಾ ''ಕೊಡ್ತೀನಿ ಬನ್ನಿ.''

ಮಧ್ಯಾಹ್ನ ಅವಳ ಮನೆಗೆ ಊಟ ಮಾಡಲು ಹೋಗಿದ್ದಾಗ ಒಂದು ಲಕ್ಷ ಕೊಟ್ಟರು.

ಅವಳು ಸಹ ಕೊಟ್ಟಳು. ತುಟಿಗಳ ಚುಂಬನ.

●●●

ಶೆಟ್ರು ಅವಳ ಸೌಂದರ್ಯ ಮಜಾ ಮಾಡಲು ಬೇರೆ ಊರಿಗೆ ಹೋಗಿ ಬರೋಣ ಎಂದು ಒತ್ತಾಯ ಮಾಡುತ್ತಿದ್ದರು. ಅವಳು ಹೇಳಿದ್ದೇನು?

''ನಿಮ್ಮ ಆಸೆ ನನಗೆ ಗೊತ್ತಿದೆ. ಹೋಟೆಲ್‌ನಲ್ಲಿ ಬೇಡ. ನಾನು ಸಂಪ್ರದಾಯಸ್ಥ ಹೆಣ್ಣು. ನಾಳೆ ರಾತ್ರಿ ನೀವು ನಿಮ್ಮ ಮನೆಯವರನ್ನು ಎಲ್ಲಿಗಾದರೂ ಕಳಿಸಿ. ರಾತ್ರಿ ಎಂಟು ಗಂಟೆಗೆ ಬರ್ತೀನಿ. ಹೂವಿನ ಹಾರಗಳು, ಮಾಂಗಲ್ಯ ತನ್ನಿ. ನಿಮ್ಮ ಮನೆಯಲ್ಲಿರುವ ದೇವರ ಮುಂದೆ ಮದುವೆ ಆಗೋಣ. ಹೆಂಡತಿಯಾಗಿ ನೀವು ಬಯಸಿದ ರೀತಿ ಈ ದೇಹ ಸೌಂದರ್ಯದಿಂದ ಸುಖ ಕೊಡ್ತೀನಿ. ನಂತರ ನಾವಿಬ್ಬರು ಅಧಿಕೃತವಾಗಿ ಬಹಿರಂಗವಾಗಿ ಮತ್ತೊಂದು ಸಲ ಮದುವೆ ಆಗೋಣ.''

ಈ ಚೆಲುವೆನ ಮದುವೆ ಮಾಡಿಕೊಂಡರೆ ನಿರಂತರವಾಗಿ ರತಿಸುಖ ಅನುಭವಿಸಬಹುದು ಎಂದುಕೊಂಡು ಒಪ್ಪಿದರು. ರೋಗಿಷ್ಠ ಹೆಂಡತಿನ ಆಸ್ಪತ್ರೆಗೆ ಸೇರಿಸಿದರು ಮತ್ತು ಉಳಿದವರನ್ನು ಏನೋ ನೆಪ ಮಾಡಿ ಬೇರೆ ಊರಿಗೆ ಕಳಿಸಿದರು. ಪದ್ಮಿನಿ ಹೇಳಿದಂತೆ ಮದುವೆಗೆ ಬೇಕಾಗಿರೋದನ್ನೆಲ್ಲಾ ತಂದರು.

●●●

ರಾತ್ರಿ ಒಂಭತ್ತು ಗಂಟೆ. ದೇವರ ಕೋಣೆಯಲ್ಲಿ ದೀಪಗಳನ್ನು ಬೆಳಗಿಸಿ ಅವಳೇ ಪೂಜೆ ಮಾಡಿದಳು. ನಂತರ ಸಂಪ್ರದಾಯದ ರೀತಿ ಹೂವಿನ ಹಾರಗಳನ್ನು ಹಾಕಿಕೊಂಡರು. ಶೆಟ್ಟರು ಆಕೆಗೆ ಮಾಂಗಲ್ಯ ಕಟ್ಟಿದರು. ಅವಳು ಅವರಿಗೆ ನಮಸ್ಕಾರ ಮಾಡಿದಳು. ಅವಳನ್ನು ಬಿಗಿಯಾಗಿ ತಬ್ಬಿಕೊಂಡು ಮುಖ ಮುದ್ದಾಡಿದರು ಮತ್ತು ಗುಲಾಬಿ ರಂಗಿನ ತುಂಬು ಕೆನ್ನೆಯ ಮೇಲೆ ಹಲ್ಲಿನ ಗುರುತು ಮೂಡಿಸಿದರು. ತುಟಿಗಳನ್ನು ತುಂಬಾ ಹೊತ್ತು ಮುದ್ದಾಡಿ ಚಪ್ಪರಿಸಿದರು.

''ನಿಮ್ಮ ಹೆಂಡತಿಯ ಆಭರಣಗಳನ್ನು ಮೊದಲ ರಾತ್ರಿಯಲ್ಲಿ ಹಾಕಿಕೊಳ್ಳಬೇಕು.''

ಲಾಕ್ ಓಪನ್ ಮಾಡಿದರು. ಇಪ್ಪತ್ತೈದು ಲಕ್ಷ ರೂಪಾಯಿ ಬೆಲೆಬಾಳುವ ಎಲ್ಲಾ ಆಭರಣಗಳನ್ನು ತೆಗೆದು ಅವಳ ಮುಂದೆ ಇಟ್ಟರು. ಅವರ ಮೈ ಸವರಿ ಮುದ್ದಾಡುತ್ತಾ ಕಾಮ ಕೆರಳಿಸುತ್ತಾ ತಿಜೋರಿಯನ್ನು ಆಟೋ ಲಾಕರ್ ಅನ್ನು ಯಾವ ರೀತಿ ಓಪನ್ ಮಾಡಬೇಕು ಎಂದು ಬಾಯಿ ಬಿಡಿಸಿದಳು. ಅವಳ ಸೆರಗು ತೆಗೆದರು. ಅವಳು ಮೊದಲೇ ರೆಡಿ ಮಾಡಿದ್ದ ಸ್ಪೆಷಲ್ ಹಾಲನ್ನು ಕುಡಿಸಿದಳು. ಅವಳ ಮೈ ಸವರುತ್ತಿರುವಾಗಲೇ ಪ್ರಜ್ಞಾಶೂನ್ಯರಾದರು.

ಬೆಳಗಾಯಿತು ಎಂದಿನಂತೆ. ಪದ್ಮಿನಿ ಮಾಯ... ಚಿನ್ನದ ಆಭರಣಗಳು ಮಾಯ... ತಿಜೋರಿಯಲ್ಲಿದ್ದ ಎಷ್ಟೋ ಲಕ್ಷಗಳ ಹಣ ಮಾಯ...! ಶೆಟ್ಟರ ಹಣೆಯ ಮೇಲೆ ಮೂರು ನಾಮ (ತಿರುಪತಿ)ಗಳನ್ನು ಬಳಿದು ಈ ಊರಿಗೆ ಗುಡ್‌ಬೈ ಹೇಳಿದ್ದರು.

☯

# ಹಣ ಬೀಳಿಸಿದ ಗ್ರಾ.ಪಂ. ಸದಸ್ಯ!

2 ☜

ಹೆಚ್ಚಾದ್ದರಿಂದ ಅದು ಸಾಧ್ಯವಾಗಲಿಲ್ಲ. ಹೀಗಾಗಿ ಅ. 6ಕ್ಕೆ ಸ್ಕೆಚ್ ಹಾಕಿದ್ದರು.

ಅವತ್ತು ಅಕ್ಟೋಬರ್ 6 ಇಡೀ ಮೈಸೂರು ಜಿಲ್ಲೆ ದಸರಾ ಸಡಗರದಲ್ಲಿತ್ತು. ಹಳ್ಳಿಯಿಂದ ಆರಂಭವಾಗಿ ನಗರದ ತನಕ ಎಲ್ಲರೂ ಮೈಸೂರು ದಸರಾ ಸಂಭ್ರಮದಲ್ಲಿದ್ದರು. ಆದರೆ ಗೋವರ್ಧನ್ ಮಾತ್ರ ತನ್ನ ಪಟಾಲಂ ಜತೆ ಸೇರಿ ನಂಜುಂಡಸ್ವಾಮಿಯನ್ನು ಮುಗಿಸುವ ತೀರ್ಮಾನ ಮಾಡಿದ್ದನು. ಎಲ್ಲವನ್ನೂ ಮೊದಲೇ ತೀರ್ಮಾನ ಮಾಡಿಕೊಂಡಂತೆಯೇ ತನ್ನ ಪಟಾಲಂನ ಹಂತಕರಾದ ಧನರಾಜ್ ಭೋಲಾ, ಜಾಹಿರ್, ಮಣಿಕಂಠ, ಮಹೇಂದ್ರರಿಗೆ ಸನ್ನದ್ಧರಾಗಿರುವಂತೆ ಮೊದಲೇ ಸೂಚಿಸಿ ಅವರನ್ನು ನಂಜನಗೂಡಿನ ಹೊಸೂರು ಗೇಟ್ ಬಳಿ ಇರುವಂತೆ ತಿಳಿಸಿದ್ದನು.



ಪೊಲೀಸ್ ಠಾಣೆ ಮುಂದೆ ಪ್ರತಿಭಟಿಸುತ್ತಿರುವುದು

ಇತ್ತ ದೇವರಸನಹಳ್ಳಿ ಗ್ರಾಪಂ ಅಧ್ಯಕ್ಷ ಸ್ಥಾನದ ಕುರಿತಂತೆ ಮಾತನಾಡುವ ಸಲುವಾಗಿ ಒಂದಷ್ಟು ಗ್ರಾಪಂ ಸದಸ್ಯರನ್ನು ಡಾಬಾವೊಂದಕ್ಕೆ ಕರೆಯಿಸಿ ಅಲ್ಲಿ ಪಾರ್ಟಿ ವ್ಯವಸ್ಥೆ ಮಾಡಲಾಗಿತ್ತು. ಇದರಲ್ಲಿ ನಂಜುಂಡಸ್ವಾಮಿಯೂ ಭಾಗಿಯಾಗಿದ್ದನು. ಆದರೆ ಗೋವರ್ಧನ್ ತನ್ನನ್ನು ಮುಗಿಸಲೆಂದೇ ಈ ಪಾರ್ಟಿ ಮಾಡುತ್ತಿದ್ದಾನೆ ಎಂಬ ಸಣ್ಣ ಸುಳಿವು ಕೂಡ ಆತನಿಗೆ ಗೊತ್ತಿರಲಿಲ್ಲ. ಪಾರ್ಟಿಯನ್ನು ಸಂಜೆ ಹೊತ್ತು ಮಾಡಿದ್ದಲ್ಲದೆ, ಬೇಗ ಎದ್ದು ಹೋಗುವುದಕ್ಕೂ ಬಿಡದೆ ಎಣ್ಣೆ ಹೊಡೆಸಿದ್ದನು. ಹೀಗಾಗಿ ರಾಜಕೀಯವಾಗಿ ಒಂದಷ್ಟು ಮಾತನಾಡಿದ ಬಳಿಕ ಅಲ್ಲಿಂದ ಎಲ್ಲರೂ ಹೊರಬಂದಿದ್ದು ಮನೆ ಕಡೆಗೆ ಮುಖ ಮಾಡಿದ್ದಾರೆ.

ಯಾವಾಗ ನಂಜುಂಡಸ್ವಾಮಿ ಡಾಬಾದಿಂದ ಹೊರಗೆ ಬಂದನೋ ಹೊಸೂರು ಗೇಟ್ ಬಳಿಯಿದ್ದ ಪಟಾಲಂಗೆ ಫೋನ್ ಮಾಡಿದ ಗೋವರ್ಧನ್ ನೀವು ಅಲರ್ಟ್ ಆಗಿ ನಂಜುಂಡಸ್ವಾಮಿ ಬರುತ್ತಿದ್ದಾನೆ ಎಂದು ಹೇಳಿದ್ದಾನೆ. ಅತ್ತ ಹಂತಕರು ರೆಡಿಯಾಗಿದ್ದಾರೆ. ಎಣ್ಣೆ ಮತ್ತಿನಲ್ಲಿದ್ದ ನಂಜುಂಡಸ್ವಾಮಿ ತನ್ನ ಮನೆ ಹಾದಿ ಹಿಡಿದಿದ್ದನು. ಆದರೆ ರಾತ್ರಿಯಾದುದರಿಂದ ಹೊಸೂರು ಗೇಟ್ ಬಳಿಗೆ ಬರುತ್ತಿದ್ದಂತೆಯೇ ರೆಡಿಯಾಗಿ ನಿಂತಿದ್ದಧನರಾಜ್ ಭೋಲಾ ಜಾಹಿರ್, ಮಣಿಕಂಠ ಮತ್ತು ಮಹೇಂದ್ರ ಅವರ ಬೈಕನ್ನು ಅಡ್ಡಗಟ್ಟಿ ಮೊದಲು ಕೈಕಾಲನ್ನು ಮುರಿದು, ತಲೆಗೂ ಕೂಡ ಒಡೆದು ಗಂಭೀರವಾಗಿ ಗಾಯಗೊಳಿಸಿ ಬಳಿಕ ಗದ್ದೆಯ ಬದಿಗೆ ಎಸೆದು ಅಲ್ಲಿಂದ ಹೋಗಿದ್ದಾರೆ.

ಮಾರನೆಯ ದಿನ ಅಂದರೆ ಅಕ್ಟೋಬರ್ 7ರಂದು ಬೆಳಿಗ್ಗೆ ಅಡ್ಡಾಡುತ್ತಾ ಹೋದವರಿಗೆ ಅರೆಪ್ರಜ್ಞಾವಸ್ಥೆಯಲ್ಲಿ ಬಿದ್ದಿದ್ದ ನಂಜುಂಡಸ್ವಾಮಿಯನ್ನು ಕಂಡು ಕೂಡಲೇ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡುವ ಪ್ರಯತ್ನ ಮಾಡಲಾಯಿತಾದರೂ ಯಾವುದೇ ಪ್ರಯೋಜನವಾಗದೆ ಅವರು ಸಾವನ್ನಪ್ಪಿದ್ದಾರೆ. ನಂಜಂಡಸ್ವಾಮಿ ಸಾವಿಗೆ ಸಂಬಂಧಿಸಿದಂತೆ ಪತ್ನಿ ಸೌಭಾಗ್ಯ ಅವರು ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ನನ್ನ ಪತಿಯನ್ನು ರಾಜಕೀಯ ದ್ವೇಷದ ಹಿನ್ನಲೆಯಲ್ಲಿ ಕೊಲೆ ಮಾಡಲಾಗಿದೆ ಎಂದು ಆರೋಪಿಸಿ ದೂರು ನೀಡಿದ್ದರು. ಈ ಸಂಬಂಧ ಎಸ್‌ಐ ಸುನಿಲ್ ಕುಮಾರ್ ನೇತೃತ್ವದ ತಂಡ ತನಿಖೆಯನ್ನು ಆರಂಭಿಸಲಾಗಿತ್ತು.

ಈ ನಡುವೆ ನಂಜುಂಡಸ್ವಾಮಿಯದು ಕೊಲೆಯಲ್ಲ ಹಿಟ್ ಅಂಡ್ ರನ್ ಎಂದು ಬಿಂಬಿಸುವ ಪ್ರಯತ್ನವನ್ನು ಬಿಜೆಪಿ ಪಕ್ಷದ ಮುಖಂಡ ಬಾಲಚಂದ್ರ ಎಂಬುವರು ಮಾಡಿದ್ದರು. ಇದನ್ನು ಕಟುವಾಗಿ ವಿರೋಧಿಸಿದ ಕೆಬ್ಬೆಪುರ ಗ್ರಾಮಸ್ಥರು ಮತ್ತು ಹಗಿವಾಳು ಗ್ರಾಮದ ಹಿರಿಯ ರಾಜಕೀಯ ಮುಖಂಡ ಮೂಗ ಶೆಟ್ಟಿ ನೇತೃತ್ವದಲ್ಲಿ ಭಾರಿ ದೊಡ್ಡ ಮಟ್ಟದಲ್ಲಿ ಗ್ರಾಮಾಂತರ ಪೊಲೀಸ್ ಠಾಣೆಯ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿ, ಇದೊಂದು ಕೊಲೆ ಪ್ರಕರಣ ತನಿಖೆ ಮಾಡಿ ಕೊಲೆ ಆರೋಪಿಗಳನ್ನು ಬಂಧಿಸಿ ಮೃತ ವ್ಯಕ್ತಿಯ ಕುಟುಂಬಕ್ಕೆ ನ್ಯಾಯ ಕಲ್ಪಿಸಿಕೊಡಿ ಎಂದು ಆಗ್ರಹಿಸಿದ್ದರು. ಇದೆಲ್ಲ ಬೆಳವಣಿಗೆ ನಡುವೆ ಪೊಲೀಸರು ಆರೋಪಿಗಳ ಜಾಡು ಹಿಡಿದು ತನಿಖೆ ಶುರು ಮಾಡಿದ್ದರು. ಘಟನೆ ನಡೆದ ಸ್ಥಳದ ಲೊಕೇಶನ್ ಹುಡುಕುವ ಪ್ರಯತ್ನವಾದರೆ ಮತ್ತೊಂದೆಡೆ ಮೃತ ನಂಜುಂಡಸ್ವಾಮಿಗೆ ಬಂದಿದ್ದ ಕರೆಗಳನ್ನು ನೋಡಿದಾಗ ಅದರಲ್ಲಿ ಗೋವರ್ಧನ್ ಕರೆ ಮಾಡಿರುವುದು ಬೆಳಕಿಗೆ ಬಂದಿತ್ತು. ಹೀಗಾಗಿ ಆತನ ಮೇಲೆಯೇ ಅನುಮಾನಗಳು ಸುತ್ತಿಕೊಳ್ಳಲಾರಂಭಿಸಿದ್ದವು.

ಇತ್ತ ನಂಜುಂಡಸ್ವಾಮಿ ಸಾವಿನ ಕುರಿತಂತೆ ಪತ್ನಿ ಸೌಭಾಗ್ಯ ಅವರು ಕೂಡ ಗೋವರ್ಧನ್ ಮೇಲೆಯೆ ಅನುಮಾನ ವ್ಯಕ್ತಪಡಿಸಿದ್ದರು. ಆದರೆ ಗೋವರ್ಧನ್ ಮಾತ್ರ ಇದು ಅಪಘಾತ ಎಂದು ಬಿಂಬಿಸಿ ಪೊಲೀಸರನ್ನೇ ದಿಕ್ಕು ತಪ್ಪಿಸುವಂತೆ ಮಾಡಿದ್ದನು. ಮೃತ ನಂಜುಂಡಸ್ವಾಮಿ ಪರವಾಗಿ ಉಪ್ಪಾರ ಜನಾಂಗದ ಮುಖಂಡರು ಕೊಲೆ ಪ್ರಕರಣ ದಾಖಲಿಸಬೇಕೆಂದು ಒತ್ತಾಯಿಸಿ ನಂಜನಗೂಡು ಗ್ರಾಮಾಂತರ ಠಾಣೆಗೆ ಮುತ್ತಿಗೆ ಹಾಕಿದ್ದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿದ ಪೊಲೀಸರು ಸಾಕ್ಷಿ ಸಮೇತ ಗೋವರ್ಧನ್ ವಿಚಾರಣೆಗೊಳಪಡಿಸಿದಾಗ ಕೊಲೆ ವಿಚಾರ ಹೊರ ಬಂದಿತ್ತು. ಹೀಗಾಗಿ ಸಹಚರರಾದ ಜಾಹಿರ್, ಮಣಿಕಂಠ ಹಾಗೂ ಮಹೇಂದ್ರ ಅವರನ್ನು ಬಂಧಿಸಿ ವಿಚಾರಣೆಗೊಳಪಡಿಸಿದಾಗ ಕೊಲೆಯ ವಿಚಾರವನ್ನು ಒಪ್ಪಿಕೊಂಡಿದ್ದರು. ಇದಾದ ನಂತರ ಇನ್ನೊಬ್ಬ ಕೊಲೆಗಾರ ಧನರಾಜ್ ಭೋಲಾನನ್ನ ಪೊಲೀಸರು ಬಂಧಿಸಿದ್ದಾರೆ. ಒಟ್ಟಾರೆ ರಾಜಕೀಯ ಅಧಿಕಾರದ ಆಸೆಗೆ ಒಬ್ಬನ ಬಲಿಯಾಗಿದೆ. ಐವರು ಜೈಲ್ ಸೇರಿದ್ದಾರೆ. ಇಂತಹ ಪ್ರಕರಣಗಳು ಇಲ್ಲಿಗೆ ಅಂತ್ಯವಾಗಿ ಬಿಡಲಿ ಎಂಬುದೇ ಕಳಕಳೀಯ ಪ್ರಾರ್ಥನೆ. ☯

5 ☜

ಸೇರಿದಂತೆ ಪ್ರೀತಿಸಿ ಮದುವೆಯಾದ ಗಂಡನು ಕಿರುಕುಳ ನೀಡಿದ್ದು, ತವರುಮನೆಯವರು ಅಡ್ಜೆಸ್ಟ್ ಮಾಡಿಕೊಂಡು ಬಾಳಮ್ಮ ಅಂದಿದ್ರಂತೆ. ಜೊತೆಗೆ ಇದೇ ನೆಪದಲ್ಲಿ ಪದೇ ಪದೇ ಊಟ ಸೇರಿದಂತೆ ಸಣ್ಣಪುಟ್ಟ ವಿಚಾರಕ್ಕೂ ಗಂಡನ ಮನೆಯವರು ರೂಪಾಗೆ ಕಿರುಕುಳ ನೀಡುತ್ತಿದ್ದರಂತೆ. ಇನ್ನೂ ಗಂಡನ ಮನೆಯವರ ಕಿರುಕುಳ ತಾಳಲಾರದೆ ಬೇಸತ್ತ ತುಂಬು ಗರ್ಭಿಣಿ ರೂಪ ಗಂಡನ ಮನೆಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

### ಡೆತ್ ನೋಟ್‌ನಲ್ಲಿ ಏನಿದೆ?

ಆತ್ಮಹತ್ಯೆಗೆ ಶರಣಾಗುವ ಮುನ್ನ ಬುಕ್ ಒಂದರಲ್ಲಿ ಪ್ರೀತಿಯ ಅಣ್ಣನಿಗೆ ತಂಗಿ ಮಾಡುವ ನಮಸ್ಕಾರಗಳು. ಅಣ್ಣ ನಾನು ನಿನ್ನ ಮಾತು ಕೇಳದೆ ತಪ್ಪು ಮಾಡಿ ಈ ಮದುವೆ ಆದೆ. ಆದರೆ ನಾನು ಮದುವೆ ಆಗಿ ಎರಡು ವರ್ಷದಿಂದ ಒಂದು ದಿನವು ನನಗೆ ಇಲ್ಲಿ ನೆಮ್ಮದಿಯಿಲ್ಲ. ನನ್ನ ಜೀವನಕ್ಕೆ ನರಕವಾಗಿದೆ. ಇನ್ನೂ ನನಗೆ ಬದುಕಲು ಇಷ್ಟವಿಲ್ಲ. ಸಾಧ್ಯವಾದರೆ ಕ್ಷಮಿಸು. ಮುಂದಿನ ಜನ್ಮವಿದ್ದರೆ ನಿನ್ನ ಋಣ ತೀರಿಸುತ್ತೇನೆ. ಅಪ್ಪ, ಅಮ್ಮ, ಅಜ್ಜಿಗೆ ನನ್ನ ಕೊನೆಯ ನಮನಗಳು. ನನ್ನ ಸಾವಿಗೆ ದಯವಿಟ್ಟು ನ್ಯಾಯ ಕೊಡಿಸು. ನನ್ನ ಸಾವಿಗೆ ಅತ್ತೆ, ಮಾವ, ನನ್ನ ಗಂಡ ಮತ್ತು ಗಂಡನ ಮನೆಯವರೇ ಕಾರಣ. ನನ್ನ ಅತ್ತೆ ದೇವಮ್ಮ, ಮಾವ ನರಸಿಂಹಮೂರ್ತಿ ಮತ್ತು ಗಂಡ ಸುರೇಶ್ ಇವರಿಗೆ ಶಿಕ್ಷೆ ಕೊಡಿಸಿ ನನಗೆ ನ್ಯಾಯ ಕೊಡಿಸಿ ಅಣ್ಣ ದಯವಿಟ್ಟು. ಇಂತಿ ನಿಮ್ಮ ಪ್ರೀತಿಯ ತಂಗಿ ರೂಪ ರತ್ನಮ್ಮ ಜಿ.ಆರ್. ಎಂದು ಡೆತ್ ನೋಟ್ ಬರೆದು ಅಣ್ಣನಿಗೆ ವಾಟ್ಸ್ ಆಪ್ ಮೂಲಕ ಫೋಟೋ ಕಳಿಸಿದ್ದಾರೆ.

ಇನ್ನೂ ಈ ಕುರಿತು ಮೃತಳ ಗಂಡ ಸುರೇಶ್ ಸಹೋದರನನ್ನ ಕೇಳಿದರೆ ಮನೆಯಲ್ಲಿ ಯಾವುದೇ ಗಲಾಟೆಗಳು ಆಗ್ತಿರಲಿಲ್ಲ, ರೂಪ ಅವರ ಮಾವ ನಿವೃತ್ತ ಸರ್ಕಾರಿ ಅಧಿಕಾರಿಯಾಗಿದ್ದು ಹಣದ ಆಸೆ ಇದ್ದಿದ್ದರೆ ಮದುವೆ ಯಾಕೆ ಮಾಡ್ತಿದ್ರು ಅಂತ ವರದಕ್ಷಿಣೆ ಕಿರಕುಳ ಆರೋಪವನ್ನ ತಳ್ಳಿ ಹಾಕಿದ್ದಾರೆ. ಸದ್ಯ ದೊಡ್ಡಬೆಳವಂಗಲ ಠಾಣೆ ಪೊಲೀಸರು ಮೃತ ರೂಪ ಗಂಡ ಸುರೇಶನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದು, ಸಂಪೂರ್ಣ ತನಿಖೆ ನಂತರ ರೂಪಾಳ ಸಾವಿನ ಹಿಂದಿನ ಸತ್ಯ ಬೆಳಕಿಗೆ ಬರಬೇಕಿದೆ. ☯

# ಸುಫಾರಿ ನೀಡಿ ಬರ್ಬರವಾಗಿ ಕೊಲ್ಲಿಸಿದಳು!

9 ☜

### ಸವಾಲಾಗಿ ಸ್ವೀಕರಿಸಿದರು...

ನಿಂಗಪ್ಪ ಅರವಳ್ಳಿ ತುಂಬಾ ಸಂಭಾವಿತ. ಹೇಳಿಕೊಳ್ಳುವಂತಹ ವೈರತ್ವ ಯಾರೊಂದಿಗೂ ಇರಲಿಲ್ಲ. ಹೀಗಾಗಿ ಆತನ ಕೊಲೆ ನಿಗೂಢವಾಗಿತ್ತು. ಚತುರ ಮತ್ತು ಧಾಡಸಿ ಅಧಿಕಾರಿ ಎಂದೇ ಹೆಸರಾದ ಇನ್‌ಸ್ಪೆಕ್ಟರ್ ರಾಘವೇಂದ್ರ ಹವಾಲ್ದಾರ ಅವರು ಪ್ರಕರಣವನ್ನು ಸವಾಲಾಗಿ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಕಿತ್ತೂರು ಪಿಎಸ್‌ಐ ಪ್ರವೀಣ ಗಂಗೋಳ ಅವರು ತನಿಖೆಗೆ ಸಹಾಯಕರಾಗಿ ಬಂದು ಅಮೂಲ್ಯವಾದ ನೆರವು ನೀಡತೊಡಗಿದ್ದರು. ತನಿಖಾಧಿಕಾರಿ ರಾಘವೇಂದ್ರ ಅವರಿಗೆ ಯಾಕೋ ನಿಂಗಪ್ಪನ ಹೆಂಡತಿ ನೀಲಮ್ಮಳ ಮೇಲೆ ಸಂದೇಹ ಬಲವಾಗಿತ್ತು. ಅದಾಗಲೇ ತಮಗಿರುವ ಮಾಹಿತಿದಾರರಿಂದ ನೀಲಮ್ಮಳ ಪೂರ್ವಪರವನ್ನು ಅಂಗೈಯಲ್ಲಿರಿಸಿಕೊಂಡಿದ್ದರು. ನಿಂಗಪ್ಪನ ಕೊಲೆ ನಡೆದಾಗ ಪದೇ ಪದೇ ಆತಂಕದಿಂದ ನೀಲಮ್ಮ ಮೊಬೈಲ್‌ನಲ್ಲಿ ಯಾರೊಂದಿಗೋ ಮಾತನಾಡುತ್ತಿದ್ದಳು. ಇದೇ ಸಂದೇಹದ ಮೇಲೆ ನೀಲಮ್ಮಳ ಕಾಲ್ ಡಿಟೈಲ್ಸ್‌ಗೆ ಕೈ ಹಾಕಿದರು. ಇಬ್ಬರೊಂದಿಗೆ ಕಳೆದ ಸುಮಾರು ದಿನಗಳಿಂದಲೂ ನಿರಂತರವಾಗಿ ನೀಲಮ್ಮ ಮಾತನಾಡಿದ್ದು ಗೊತ್ತಾಯಿತು. ಆಗ ಮಹೇಶ ಗೂಳನ್ನವರ ಮತ್ತು ಯಲ್ಲಪ್ಪ ಕೋಣಿನ ಅವರನ್ನು ಠಾಣೆಗೆ ಕರೆತಂದು ವಿಚಾರಿಸಿದಾಗ ಅವರು ಕಾಗಕ್ಕ-ಗುಬ್ಬಕ್ಕನ ಕಥೆ ಕಟ್ಟತೊಡಗಿದರು. ಪೊಲೀಸ್ ಭಾಷೆ ಪ್ರಯೋಗ ಮಾಡಿದಾಗ ನಿಜ ಸಂಗತಿ ಒಪ್ಪಿಕೊಂಡು ಗಿಳಿಪಾಠ ಒಪ್ಪಿಸಿದರು. ಆಂಟಿ ಮೇಲಿನ ಪ್ರೀತಿಗಾಗಿ ತಾನೇ ಆಕೆಯ ಗಂಡನಿಗೆ ಕೊಲೆ ಮಾಡಲು ಯಲ್ಲಪ್ಪ ಕೋಣಿನಗೆ ಸುಫಾರಿ ಕೊಟ್ಟಿದ್ದೇನೆಂದನು. ಸುಫಾರಿ ಪಡೆದ ಯಲ್ಲಪ್ಪ ತಾನೇ ಸುಫಾರಿ ಪಡೆದು ನಿಂಗಪ್ಪನನ್ನು ಕೊಲೆ ಮಾಡಿದ್ದೇನೆ ಎಂದು ಒಪ್ಪಿಕೊಂಡನು.


ಹಂತಕ ಮಹೇಶನನ್ನು ಬಂಧಿಸಿ ಕರೆತರುತ್ತಿರುವುದು

### ಮೂವರು ಹಂತಕರ ಬಂಧನ...


ಅಂದುಕೊಂಡ ಹಾಗೇ ತನಿಖಾಧಿಕಾರಿ ರಾಘವೇಂದ್ರ, ಹವಾಲ್ದಾರ, ಪಿಎಸ್‌ಐಗಳಾದ ಪ್ರವೀಣ ಗಂಗೋಳ, ಕೋಟಿ ಮತ್ತು ಸಿಬ್ಬಂದಿಗಳ ಕಾರ್ಯಾಚರಣೆ ಅತ್ಯಂತ ಯಶಸ್ವಿಯಾಗಿ ಫಲಪ್ರದವಾಗಿತ್ತು. ನೀಲಮ್ಮಳ ಇಬ್ಬರು ಮಿಂಡಂದಿರ ಹೇಳಿಕೆಯಂತೆ ನೀಲಮ್ಮಳನ್ನು ವಿಚಾರಣೆಗೆ ಗುರಿಪಡಿಸಿದಾಗ ವಿಧಿಯಿಲ್ಲದೇ ಅವಳು ತನ್ನ ಕೃತ್ಯ ಒಪ್ಪಿಕೊಂಡಿದ್ದಾಳೆ. ಈ ಮೂವರು ಹಂತಕರೊಂದಿಗೆ ಕೆಲವು ಪಂಚನಾಮೆ ಕಾರ್ಯ ಮುಗಿಸಿ ಅವರನ್ನು ಬಂಧಿಸಿ ನ್ಯಾಯಾಂಗದ ವಶಕ್ಕೆ ಒಪ್ಪಿಸಿದಾಗ ನ್ಯಾಯಾಧೀಶರು ಇವರನ್ನು ಜೈಲಿಗಟ್ಟಿ ಆದೇಶ ಮಾಡಿದ್ದಾರೆ.

ನಿಜಕ್ಕೂ ಇಲ್ಲಿ ಕೊಲೆ ನಡೆದ ಕೇವಲ 24 ಗಂಟೆಗಳಲ್ಲಿ ಹಂತಕರನ್ನು ಪತ್ತೆ ಮಾಡಿದ ತನಿಖಾಧಿಕಾರಿ ರಾಘವೇಂದ್ರ ಹವಾಲ್ದಾರ, ಪಿಎಸ್‌ಐಗಳಾದ ಪ್ರವೀಣ ಗಂಗೋಳ, ಕೋಟಿ ಮತ್ತು ಸಿಬ್ಬಂದಿಗಳ ಕಾರ್ಯಾಚರಣೆಯನ್ನು ಮೆಚ್ಚಲೇಬೇಕು. ಇವರ ಜಾಣ್ಮೆಯ ತನಿಖಾ ವಿಧಾನಕ್ಕೆ ಡಿವೈಎಸ್ಪಿ ರವಿ ನಾಯಕ್, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ, ಎಸ್ಪಿ ಡಾ. ಭೀಮಾಶಂಕರ ಗುಳೇದ ಶ್ಲಾಘನೆ ವ್ಯಕ್ತಪಡಿಸಿದ್ದಾರೆ.


ಕಾಮುಕಿ ನೀಲಮ್ಮಳನ್ನು ಬಂಧಿಸಿ ಕರೆ ತರುತ್ತಿರುವುದು

ದಿಕ್ಕಿಲ್ಲದ ಮನೆ, ಆಸರೆ ಇಲ್ಲದಂತೆ ಪರದೇಶಿಗಳಾದ ಮೂರು ಮಕ್ಕಳು, ಹಡದಪ್ಪ ಜೈಲು ಸೇರಿಕೊಂಡರೆ, ತಾಯಿ ಕಾಮುಕಿ ಪಟ್ಟ ಹೊತ್ತುಕೊಂಡು ಜೈಲು ಸೇರಿದ್ದಾಳೆ. ಇದೀಗ ಮೂರು ಮಕ್ಕಳು ಅನಾಥರಾಗಿದ್ದಾರೆ. ಅಷ್ಟಕ್ಕೂ ಇಂತಹದೊಂದು ದುರಂತ ಘಟನೆಗೆ ಕೆಟ್ಟ 'ಕಾಮ'ವೇ ಕಾರಣವಾಗಿದೆ ಎಂಬುದನ್ನು ಯಾರು ಅಲ್ಲಗಳೆಯುವಂತಿಲ್ಲ. ☯

# ಪ್ಯಾನ್ ಇಂಡಿಯಾ 'ಯುಐ'ಚಿತ್ರಕ್ಕೆ ಕೆ.ವಿ.ಎನ್. ಸಾಥ್




ಉಪೇಂದ್ರ ನಿರ್ದೇಶನದ ಚಿತ್ರವೊಂದು ಬರುತ್ತಿದೆ ಎಂದರೆ ಅಲ್ಲಿ ಸಾಕಷ್ಟು ಕುತೂಹಲ, ಕೌತುಕಗಳು ಹುಟ್ಟಿಕೊಂಡಿರುತ್ತವೆ. ಅಂಥ ನೂರು ಪಟ್ಟು ಕ್ಯೂರಿಯಾಸಿಟಿ ಹುಟ್ಟಿಸಿರುವ ಮತ್ತೊಂದು ಚಿತ್ರ ಯುಐ. ಉಪೇಂದ್ರ ಅವರು ಯಾವುದೇ ಸಿನಿಮಾ ಮಾಡಿದರೂ ಅದರಲ್ಲಿ ಏನಾದರೂ ಅಚ್ಚರಿ ಇಟ್ಟಿರುತ್ತಾರೆ. 2015ರಲ್ಲಿ ಉಪ್ಪಿ 2 ಚಿತ್ರವನ್ನು ನಿರ್ದೇಶನ ಮಾಡಿದ್ದ ಉಪೇಂದ್ರ, ಎಂಟು ವರ್ಷಗಳ ಗ್ಯಾಪ್ ತೆಗೆದುಕೊಂಡು ಯುಐ ಮೂಲಕ ಮತ್ತೆ ಡೈರೆಕ್ಟರ್ ಕ್ಯಾಪ್ ತೊಟ್ಟಿದ್ದಾರೆ. ಈ ಸಿನಿಮಾ ನೋಡಲು ಉಪ್ಪಿ ಅಭಿಮಾನಿಗಳು ತುದಿಗಾಲಲ್ಲಿ ಕಾದು ನಿಂತಿದ್ದಾರೆ. ಈಗಾಗಲೇ ವಿಭಿನ್ನ ಶೈಲಿಯ ಟೀಸರ್ ರಿಲೀಸ್ ಮಾಡುವ ಮೂಲಕ ಆಡಿಯನ್ಸ್ ತಲೆಯಲ್ಲಿ ಹುಳ ಬಿಟ್ಟಿದ್ದಾರೆ, ಯುಐ ಚಿತ್ರವನ್ನು ಲಹರಿ ಫಿಲಂಸ್ ಮೂಲಕ ಜಿ.ಮನೋಹರನ್ ಹಾಗೂ ವೀನಸ್ ಎಂಟರ್‌ಟೈರ್ಸ್ ಮೂಲಕ ಕೆ.ಪಿ. ಶ್ರೀಕಾಂತ್ ಅವರುಗಳು ನೂರಾರು ಕೋಟಿ ರೂ.ಗಳ ಬೃಹತ್ ವೆಚ್ಚದಲ್ಲಿ ಅದ್ದೂರಿಯಾಗಿ ನಿರ್ಮಾಣ ಮಾಡುತ್ತಿದ್ದಾರೆ. ಉಪೇಂದ್ರ ಅವರು ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳುವ ಜೊತೆಗೆ ಚಿತ್ರದಲ್ಲಿ ನಾಯಕರಾಗಿಯೂ ಸಹ ಕಾಣಿಸಿಕೊಳ್ಳುತ್ತಿದ್ದಾರೆ. ಈಗಾಗಲೇ ಈ ಚಿತ್ರಕ್ಕೆ 130ಕ್ಕೂ ಹೆಚ್ಚು ದಿನಗಳ ಕಾಲದ ಚಿತ್ರೀಕರಣ ನಡೆಸಲಾಗಿದ್ದು, ನೈಸ್ ರಸ್ತೆಯಲ್ಲಿ ನಿರ್ಮಿಸಲಾಗಿದ್ದ ದುಬಾರಿ ವೆಚ್ಚದ ಯುಐ ವರ್ಡ್ಲ್ ಸೆಟ್‌ನಲ್ಲಿ ಕೊನೇ ಹಂತದ ಚಿತ್ರೀಕರಣವನ್ನು ನಡೆಸಲಾಗಿದೆ. ಅಲ್ಲದೆ ಬೆಂಗಳೂರು, ಮೈಸೂರು, ಸಕಲೇಶಪುರ ಹಾಗೂ ಹೈದರಾಬಾದ್‌ನ ವಿಶೇಷ ಲೊಕೇಶನ್‌ಗಳಲ್ಲಿ ಸಹ ಚಿತ್ರದ ಚಿತ್ರೀಕರಣ ಮಾಡಲಾಗಿದೆ. ಸಿನಿಮಾದ ಬಜೆಟ್ ಸುಮಾರು 100 ಕೋಟಿ ದಾಟಿ ಹೋಗಿದೆ ಎನ್ನಲಾಗಿದೆ. ಅಲ್ಲದೆ, ತಾಂತ್ರಿಕವಾಗಿಯೂ ಈ ಸಿನಿಮಾ ತುಂಬಾ ಅಡ್ವಾನ್ಸ್ ಆಗಿರುತ್ತೆ ಎಂದು ಗೊತ್ತಾಗಿದೆ. ನಟ, ನಿರ್ದೇಶಕ ಉಪೇಂದ್ರ ಅವರು ಯುಐ ಸಿನಿಮಾದಲ್ಲಿ 3ಡಿ ಬಾಡಿ ಸ್ಕ್ಯಾನ್ ತಂತ್ರಜ್ಞಾನವನ್ನು ಬಳಸಿದ್ದಾರೆ. ಸುಮಾರು 200 ಕ್ಯಾಮೆರಾಗಳನ್ನು ಬಳಸಿ ಶೂಟ್ ಮಾಡಲಾಗಿದ್ದು, ಮೊದಲ ಬಾರಿಗೆ ಈ ತಂತ್ರಜ್ಞಾನವನ್ನು ಬಳಸಿದ ದಕ್ಷಿಣ ಭಾರತದ ಸಿನಿಮಾ ಎಂಬ ಹೆಗ್ಗಳಿಕೆಗೆ ಯುಐ ಪಾತ್ರವಾಗಿದೆ. ಈ ಹಿಂದೆ ತಂತ್ರಜ್ಞಾನವನ್ನು ಜೇಮ್ಸ್ ಕೆಮರಾನ್ ಅವರು ಅವತಾರ್ 2 ಸಿನಿಮಾಗೆ ಬಳಸಿದ್ದರು. ಇಷ್ಟೇ ಅಲ್ಲದೆ ಸುಮಾರು 14 ಸಾವಿರ ವಿಎಫ್ ಎಕ್ಸ್ ಶಾಟ್ಸ್ ಅನ್ನು ಬಳಸಲಾಗಿದೆ. ಇದು ಉಪೇಂದ್ರ ಅವರ ನಿರ್ದೇಶನದ ಪ್ಯಾನ್ ಇಂಡಿಯಾ ಚಿತ್ರವಾದ ಕಾರಣ ಸಿನಿಮಾದ ಮೇಕಿಂಗ್, ಸ್ಟಾರ್‌ಕಾಸ್ಟ್ ಎಲ್ಲವೂ ದೊಡ್ಡ ಮಟ್ಟದಲ್ಲಿ ಇರಲಿದೆ. ಬಾಲಿವುಡ್‌ನ ಸನ್ನಿಲಿಯೋನ್ ಅವರು ಈ ಚಿತ್ರದ ಪ್ರಮುಖ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದಾರೆ. ಈಗಾಗಲೇ ಕೆಲ ಕನ್ನಡ ಸಿನಿಮಾಗಳ ಐಟಂ ಸಾಂಗ್‌ನಲ್ಲಿ ಹಾಡಿ ಕುಣಿದಿದ್ದ ಬಾಲಿವುಡ್ ನಟಿ ಸನ್ನಿ ಲಿಯೋನ್ ಅವರು ಈ ಚಿತ್ರದ ಮೂಲಕ ಬಹಳ ದಿನಗಳ ನಂತರ ಮತ್ತೆ ಕನ್ನಡ ಚಿತ್ರರಂಗಕ್ಕೆ ರೀಎಂಟ್ರಿ ಕೊಟ್ಟಿದ್ದಾರೆ.

'ಯುಐ' ಸೂಪರ್ ಸ್ಟಾರ್ ಉಪೇಂದ್ರ ಅವರ ನಟನೆಯ ವರ್ಷದ ಬಹು ನಿರೀಕ್ಷಿತ ಚಿತ್ರ. ಜೊತೆಗೆ ಹಲವಾರು ವರ್ಷಗಳ ನಂತರ ಉಪ್ಪಿ ಡೈರೆಕ್ಟರ್ ಕ್ಯಾಪ್ ತೊಟ್ಟು ಆ್ಯಕ್ಷನ್ ಕಟ್ ಹೇಳಿರೋ ಸಿನಿಮಾ ಕೂಡ ಹೌದು. ಉಪ್ಪಿ ಡೈರೆಕ್ಷನ್ ಅಂದಾಕ್ಷಣ ಬರೀ ಕರ್ನಾಟಕದಲ್ಲಷ್ಟೇ ಅಲ್ಲ, ಪ್ರಪಂಚದ ಮೂಲೆ ಮೂಲೆಯಲ್ಲೂ ಇವರ ಸಿನಿಮಾಗಳಿಗೆ ಕೋಟ್ಯಂತರ ಅಭಿಮಾನಿಗಳು ಕಾಯುತ್ತಿದ್ದಾರೆ. ಸದ್ಯ 'ಯುಐ' ರಿಲೀಸ್ ಡೇಟ್ ಅನೌನ್ಸ್ ಆದಾಗಿನಿಂದಲೂ ಸಿನಿಮಾದ ಮೇಲಿರೋ ಕುತೂಹಲ ಜಾಸ್ತಿಯಾಗ್ತಾನೇ ಇದೆ, ಚಿತ್ರ ಯಾವಾಗ ರಿಲೀಸ್ ಆಗುತ್ತೆ ಅಂತ ಉಪ್ಪಿ ಫ್ಯಾನ್ಸ್ ತುದಿಗಾಲಿನಲ್ಲಿ ಕಾದು ಕುಂತಿದ್ದಾರೆ. ಯುಐ ಚಿತ್ರ ಡಿಸೆಂಬರ್ 20ರಂದು ಪ್ಯಾನ್ ಇಂಡಿಯಾ ಮಟ್ಟದಲ್ಲಿ ಪ್ರಪಂಚದಾದ್ಯಂತ ರಿಲೀಸ್ ಆಗಲಿದೆ ಅಂತ ಉಪ್ಪಿ ತಮ್ಮ ಸೋಶಿಯಲ್ ಮೀಡಿಯಾ ಖಾತೆಯಲ್ಲಿ ಪೋಸ್ಟ್ ಮಾಡೋ ಮೂಲಕ ಗುಡ್ ನ್ಯೂಸ್ ಕೊಟ್ಟಿದ್ದಾರೆ.

ಅಷ್ಟೇ ಅಲ್ಲ ಇಷ್ಟು ದೊಡ್ಡ ಮಟ್ಟದ ಸಿನಿಮಾಗೆ ಪ್ಯಾನ್ ಇಂಡಿಯಾ ಲೆವೆಲ್‌ನಲ್ಲಿ ಬಜ್ ಕ್ರಿಯೇಟ್ ಆದ್ಮೇಲೆ, ಪ್ರಪಂಚದ ಪ್ರತಿ ಮೂಲೆಯ ಚಿತ್ರ ಪ್ರೇಕ್ಷಕರಿಗೆ ದೊಡ್ಡಮಟ್ಟದಲ್ಲಿ ಸಿನಿಮಾವನ್ನು ತಲುಪಿಸೋದಕ್ಕೆ ಕರ್ನಾಟಕದಲ್ಲಿ ಚಿತ್ರವನ್ನು ರಿಲೀಸ್ ಮಾಡುವ ಜವಾಬ್ದಾರಿಯನ್ನು ಹೆಸರಾಂತ ಚಿತ್ರ ನಿರ್ಮಾಣ ಸಂಸ್ಥೆಯಾದ ಕೆವಿಎನ್ ಪ್ರೊಡಕ್ಷನ್ಸ್ ಹೌಸ್ ಹೊತ್ತುಕೊಂಡಿದೆ. ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲಿ ಈಗಾಗಲೇ ದೊಡ್ಡ ಮಟ್ಟಕ್ಕೆ ಹೆಸರಾಗಿರುವ ಗೀತಾ ಆರ್ಟ್ಸ್ ಸಂಸ್ಥೆ ವಿತರಣೆ ಮಾಡ್ತಿದೆ. ಇನ್ನೂ ಕೇರಳದಲ್ಲಿ ಎಪಿ ಇಂಟರ್ ನ್ಯಾಷನಲ್ ಪ್ರೊಡಕ್ಷನ್ ಹೌಸ್ ಈ ಸಿನಿಮಾವನ್ನು ರಿಲೀಸ್ ಮಾಡ್ತಿದೆ. ಓವರ್ ಸೀಸ್‌ನಲ್ಲಿ ಹೋಮ್ ಸ್ಕ್ರೀನ್ ಎಂಟರ್ ಟೈನ್ಮೆಂಟ್ ರಿಲೀಸ್ ಮಾಡ್ತಿದೆ. ಈಗಾಗಲೇ ಸಾಂಗ್ ಹಾಗೂ ಟೀಸರ್ ಎಲ್ಲಾ ಭಾಷೆಯ ಆಡಿಯನ್ಸ್‌ಗೂ ತಲುಪಿದ್ದು, ಇದರ ಬೆನ್ನಲ್ಲೆ ದೊಡ್ಡ ದೊಡ್ಡ ಸಂಸ್ಥೆಗಳು ಸಿನಿಮಾ ರಿಲೀಸ್ ಮಾಡೋ ಜವಾಬ್ದಾರಿಯನ್ನು ಹೊತ್ತಿರೋದು ಸಿನಿಮಾದ ಮೇಲಿದ್ದ ನಿರೀಕ್ಷೆ ಮತ್ತಷ್ಟು ದುಪ್ಪಟ್ಟಾಗಿಸಿದೆ.

# ಧೀರ ಭಗತ್ ರಾಯ್



ಸ್ಟಾರ್ ಸಿನಿಮಾದೆದುರು ಕರ್ಣನ್ ಅವರ ನಿರ್ದೇಶನದ, ಹೋರಾಟದ ಕಿಚ್ಚು ಹಚ್ಚುವಂಥ ಕಥೆ ಹೊಂದಿದ ಧೀರ ಭಗತ್ ರಾಯ್ ಚಿತ್ರವೂ ಬಿಡುಗಡೆಯಾಗಲಿದೆ. ಈ ಹಿಂದೆ ಬಾಹುಬಲಿಯಂಥ ದೊಡ್ಡ ಚಿತ್ರದ ಎದುರು ರಂಗಿತರಂಗ ಸಿನಿಮಾ ಗೆದ್ದ ಇತಿಹಾಸವೇ ನಮಗೆ ಧೈರ್ಯ ಎಂದು ಚಿತ್ರತಂಡ ಹೇಳಿಕೊಂಡಿದೆ. ಜೈಭೀಮ, ವಿಸಾರಣೈ ಚಿತ್ರಗಳ ಛಾಯೆ ಈ ಚಿತ್ರದಲ್ಲಿದೆ ಎಂದು ಹೇಳಲಾಗುತ್ತಿದ್ದು, ಇದು ಅದೇ ಕಥೆಯಾ..? ಧೀರ ಭಗತ್ ರಾಯ್ ಚಿತ್ರದ ಅಸಲಿ ಕಥೆಯೇನು..? ಎಂಬುದಕ್ಕೆ ಚಿತ್ರತಂಡ ಸಿನಿಮಾ ರಿಲೀಸಾದ ನಂತರ ಉತ್ತರ ಸಿಗಲಿದೆ ಎಂದು ಹೇಳಿದೆ.

ಧೀರ ಭಗತ್ ರಾಯ್, ಯಾವ ದೊಡ್ಡ ಚಿತ್ರಕ್ಕೂ ಕಮ್ಮಿಯಿಲ್ಲ ಎಂದು ಸಂಗೀತ ನಿರ್ದೇಶಕ ಪೂರ್ಣ ಚಂದ್ರ ತೇಜಸ್ವಿ ಅವರು ಹೇಳಿದ್ದಾರೆ. ಈ ಚಿತ್ರದಲ್ಲಿ ರಾಕೇಶ್ ದಳವಾಯಿ ಅವರು ನಾಯಕನಾಗಿ ಕಾಣಿಸಿಕೊಂಡಿದ್ದು, ನಾಯಕಿಯಾಗಿ ಸುಚಾರಿತಾ ನಟಿಸಿದ್ದಾರೆ. ಡಿಸೆಂಬರ್ 6 ರಂದು ರಾಜ್ಯದಾದ್ಯಂತ ರಿಲೀಸಾಗುತ್ತಿದೆ. ಈ ಚಿತ್ರವನ್ನು ಪ್ರವೀಣ್‌ಗೌಡ ಅವರು ನಿರ್ಮಾಣ ಮಾಡಿದ್ದು ಕರ್ಣನ್ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ನಮ್ಮ ಸೊನಿಮಾ ಜೈಭೀಮಾ, ವಿಸಾರಣೈ ಹಾಗೂ ಕಾಟೇರ ಚಿತ್ರದ ರೀತಿ ಧೀರ ಭಗತ್ ರಾಯ್ ಚಿತ್ರವೂ ಕಾಣ್ತಿದೆ ಅಂದ್ರೆ ಅದು ನಿಜ, ಅಷ್ಟು ಅತ್ಯುತ್ತಮ ಗುಣಮಟ್ಟದಲ್ಲಿ ಈ ಚಿತ್ರವನ್ನು ಎಲ್ಲಾ ಆಯಾಮದಲ್ಲೂ ನಿರ್ಮಿಸಲಾಗಿದೆ. ಧೀರ ಭಗತ್ ರಾಯ್ ಕನ್ನಡ ಚಿತ್ರರಂಗದಲ್ಲಿ ಹೊಸ ಪರ್ವಕ್ಕೆ ಕಾರಣವಾಗಬಹುದು ಅನ್ನೋ ನಿರೀಕ್ಷೆ ಇದೆ ಎಂದ ಚಿತ್ರತಂಡ ಹೇಳಿಕೊಂಡಿದೆ.

ದರ್ಶನ್ ಅವರ ಕಾಟೇರನಂತೆಯೇ ಧೀರ ಭಗತ್‌ರಾಯ್ ಅದೇ ಕಾಲಘಟ್ಟದಲ್ಲಿ ನಡೆಯೋ ಬೇರೆ ಆಯಾಮದ ಚಿತ್ರ. ಸ್ಯಾಂಡಲ್‌ವುಡ್ ಸಲಗ ವಿಜಯ್‌ಕುಮಾರ್ ಅವರು ನಮ್ಮ ಬೆನ್ನಿಗೆ ನಿಂತಿದ್ದಾರೆ, ನಮಗೆ ಅವ್ರು ದೊಡ್ಡ ಶಕ್ತಿ. ಧೀರ ಭಗತ್ ರಾಯ್ ಟ್ರೈಲರ್ ಕನ್ನಡ ಪ್ರೇಕ್ಷಕರ ಹೃದಯ ಗೆದ್ದಿದೆ. ಮಾಧ್ಯಮದ ಸಹಕಾರ ನಮಗೆ ಈ ಧೈರ್ಯ ಕೊಟ್ಟಿದೆ. ಡಿಸೆಂಬರ್ 6ಕ್ಕೆ ನಾವು ನಿಮ್ಮ ಮುಂದೆ ಬರ್ತಿದ್ದೀವಿ. ಕಾಟೇರ ಚಿತ್ರದಲ್ಲಿ ಕೆಲಸ ಮಾಡಿದ ಸೌಂಡ್ ಡಿಸೈನರ್ ನಮ್ಮ ಚಿತ್ರಕ್ಕೆ ಕೆಲಸ ಮಾಡಿದ್ದಾರೆ. ಮ್ಯೂಸಿಕಲಿ ಇದೊಂದು ದೊಡ್ಡ ಕಮರ್ಷಿಯಲ್ ಪ್ರಯೋಗವಾಗಿದೆ ಎಂದು ಚಿತ್ರತಂಡ ಹೇಳಿಕೊಂಡಿದೆ. ಕರ್ಣನ್ ಅನ್ನೋ ಯುವ ನಿರ್ದೇಶಕ ಈ ಚಿತ್ರಕ್ಕೆ ಕಥೆ, ಚಿತ್ರಕತೆ ಬರೆದು ನಿರ್ದೇಶನ ಮಾಡಿದ್ದಾರೆ. ಯುವನಟ ರಾಕೇಶ್ ದಳವಾಯಿ ಈ ಚಿತ್ರದ ಮೂಲಕ ಸ್ಯಾಂಡಲ್‌ವುಡ್ ಅಂಗಳದಲ್ಲಿ ಸಂಚಲನ ಸೃಷ್ಟಿಸೋದಕ್ಕೆ ಸಜ್ಜಾಗಿದ್ದು, ನಾಯಕಿಯಾಗಿ ಸುಚರಿತಾ ಸಹಾಯ್ ಎಂಬ ಹೊಸ ಮುಖ ಪರಿಚಯವಾಗ್ತಿದೆ. ಇವರ ಜೊತೆಗೆ ಶರತ್ ಲೋಹಿತಾಶ್ವ, ನೀನಾಸಂ ಅಶ್ವಥ್, ಪ್ರವೀಣ್‌ಗೌಡ ಹೆಚ್.ಸಿ, ಹರಿರಾಮ್, ಕೆ.ಎಮ್. ಸಂದೇಶ್ ಸೇರಿದಂತೆ ಪ್ರತಿಭಾನ್ವಿತರ ತಾರಾಬಳಗವೇ ಈ ಚಿತ್ರದಲ್ಲಿದೆ. ವೈಟ್ ಲೋಟಸ್ ಎಂಟರ್‌ಟೈನ್ಮೆಂಟ್ ಮತ್ತು ಶ್ರೀ ಓಂ ಸಿನಿ ಎಂಟರ್‌ಟೈನರ್ಸ್ ಬ್ಯಾನರ್ ಅಡಿಯಲ್ಲಿ ಈ ಚಿತ್ರ ನಿರ್ಮಾಣವಾಗಿದೆ. ತಾಂತ್ರಕವಾಗಿ ಸಖತ್ ಸ್ಟ್ರಾಂಗ್ ಆಗಿ ಮೂಡಿಬಂದಿರುವ ಈ ಚಿತ್ರಕ್ಕೆ ಪೂರ್ಣಚಂದ್ರ ತೇಜಸ್ವಿ ಅವರು ಸಂಗೀತ ಸಂಯೋಜಿಸಿದ್ದು, ಸೆಲ್ವಂ ಜಾನ್ ಛಾಯಾಗ್ರಹಣ ನಿರ್ವಹಿಸಿದ್ದಾರೆ. ಎನ್.ಎಂ. ವಿಶ್ವ ಈ ಚಿತ್ರಕ್ಕೆ ಸಂಕಲನ ಮಾಡಿದ್ದಾರೆ.

# ಹಾಟ್ ಆಗಿ ಕಾಣಿಸಿಕೊಂಡು ಪಡ್ಡೆ ಹುಡುಗರ ನಿದ್ದೆ ಕದ್ದ ಶಾನ್ವಿ



ಕನ್ನಡದ ಮಾಸ್ಟರ್ ಪೀಸ್ ನಟಿ ಶಾನ್ವಿ ಶ್ರೀವಾಸ್ತವ ಬಹುಭಾಷಾ ನಟಿಯಾಗಿ ಹಲವು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಇದರ ನಡುವೆ ಮಾಲ್ಡೀವ್ಸ್ ತೆಗೆದ ಹಾಟ್ ಫೋಟೋವೊಂದನ್ನು ನಟಿ ಹಂಚಿಕೊಂಡಿದ್ದಾರೆ. ಸಿನಿಮಾಗೆ ಬ್ರೇಕ್ ಕೊಟ್ಟು ಮಾಲ್ಡೀವ್ಸ್‌ಗೆ ಶಾನ್ವಿ ತೆರಳಿದ್ದಾರೆ. ಕಡಲ ತೀರದಲ್ಲಿ ಹಾಟ್ ಆಗಿ ಪೋಸ್ಟ್ ನೀಡಿದ್ದಾರೆ. ವಿವಿಧ ಭಂಗಿಯಲ್ಲಿ ನಿಂತಿರುವ ಸುಂದರ ಫೋಟೋವನ್ನು ನಟಿ ಹಂಚಿಕೊಂಡಿದ್ದಾರೆ. ನಟಿಯ ಬೋಲ್ಡ್ ಅವತಾರಕ್ಕೆ ಫ್ಯಾನ್ಸ್ ಫಿದಾ ಆಗಿದ್ದಾರೆ.

ಇನ್ನೂ 'ಚಂದ್ರಲೇಖ' ಸಿನಿಮಾ ಮೂಲಕ ಶಾನ್ವಿ ಕನ್ನಡ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟರು. ಚಿರಂಜೀವಿ ಸರ್ಜಾಗೆ ನಾಯಕಿಯಾಗಿ ನಟಿಸಿದರು. ಈ ಚಿತ್ರವನ್ನು ಓಂಪ್ರಕಾಶ್ ರಾವ್ ನಿರ್ದೇಶನ ಮಾಡಿದರು. ಆ ನಂತರ ಯಶ್ ಜೊತೆ 'ಮಾಸ್ಟರ್ ಪೀಸ್' ಸಿನಿಮಾದಲ್ಲಿ ಶಾನ್ವಿ ನಟಿಸಿದರು. ಭಲೇ ಜೋಡಿ, ಸುಂದರಾಂಗ ಜಾಣ, ಮಫ್ತಿ, ಗೀತಾ, ತಾರಕ್ ಸೇರಿದಂತೆ ಹಲವು ಸಿನಿಮಾಗಳಲ್ಲಿ ನಟಿಸಿದ್ದಾರೆ. ಕನ್ನಡದ ಜೊತೆ ತೆಲುಗು, ತಮಿಳು, ಮಲಯಾಳಂನಲ್ಲೂ ಶಾನ್ವಿ ಗುರುತಿಸಿಕೊಂಡಿದ್ದಾರೆ. ಪ್ರಸ್ತುತ ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ ಸಿನಿಮಾದಲ್ಲಿ ನಿರೂಪ್ ಭಂಡಾರಿ, ಪೃಥ್ವಿ ಅಂಬರ್ ಜೊತೆ ಶಾನ್ವಿ ನಟಿಸಿದ್ದಾರೆ. ತ್ರಿಶೂಲಂ ಎಂಬ ಸಿನಿಮಾದಲ್ಲಿಯೂ ಕಾಣಿಸಿಕೊಂಡಿದ್ದಾರೆ.

# 2025ರ ಅಕ್ಟೋಬರ್ 2ಕ್ಕೆ ಕಾಂತಾರ ಚಾಪ್ಟರ್ 1

ಹೊಂಬಾಳೆ ಫಿಲಂಸ್ ಲಾಂಛನದಲ್ಲಿ ಮೂಡಿಬರುತ್ತಿರುವ ಬಹು ನಿರೀಕ್ಷಿತ ಚಿತ್ರ ಕಾಂತಾರ ಚಾಪ್ಟರ್ 1. ಇದೀಗ ಈ ಚಿತ್ರತಂಡದಿಂದ ಬಿಗ್ ಬ್ರೇಕಿಂಗ್ ನ್ಯೂಸ್ ಹೊರಬಿದ್ದಿದೆ. ಈಗಾಗಲೇ ಶೂಟಿಂಗ್ ಹಂತದಲ್ಲಿರುವ ಈ ಸಿನಿಮಾದ ಬಿಡುಗಡೆಯ ದಿನಾಂಕವನ್ನು ಚಿತ್ರತಂಡ ರಿವೀಲ್ ಮಾಡಿದೆ. 2025ರ ಅಕ್ಟೋಬರ್ 2ರ ಗಾಂಧಿ ಜಯಂತಿಯ ದಿನದಂದು ಕಾಂತಾರ ಚಾಪ್ಟರ್ 1 ಪ್ಯಾನ್ ಇಂಡಿಯಾ ಮಟ್ಟದಲ್ಲಿ ಬಿಡುಗಡೆ ಆಗಲಿದೆ. ಕನ್ನಡ, ತೆಲುಗು, ತಮಿಳು, ಮಲಯಾಳಂ, ಹಿಂದಿ, ಸೇರಿ ಇನ್ನೂ ಹಲವು ಭಾಷೆಗಳಲ್ಲಿ ಈ ಸಿನಿಮಾ ಗ್ರ್ಯಾಂಡ್ ಆಗಿ ರಿಲೀಸ್ ಆಗಲಿದೆ. ಸದಭಿರುಚಿಯ ಚಿತ್ರಗಳನ್ನು ಮಾಡುತ್ತಲೇ ಗೆದ್ದ, ಸ್ಯಾಂಡಲ್‌ವುಡ್‌ನ ಭರವಸೆಯ ನಿರ್ದೇಶಕ ಕಮ್ ನಾಯಕನಾಗಿ ಗುರುತಿಸಿಕೊಂಡವರು ರಿಷಬ್ ಶೆಟ್ಟಿ. ಗಟ್ಟಿ ಕಥೆಯಿದ್ದರೆ ಚಿತ್ರದ ಗೆಲುವು ನಿಶ್ಚಿತ ಎಂಬುದನ್ನು ನಿರೂಪಿಸುತ್ತಲೇ ಬಂದ ರಿಷಭ್, ಸದ್ಯ ಕಾಂತಾರ-1 ಚಿತ್ರದ ಕೆಲಸದಲ್ಲಿ ಮಗ್ನರಾಗಿದ್ದಾರೆ. ಶ್ರದ್ಧೆ ಮತ್ತು ಭಕ್ತಿಯಿಂದ ಚಿತ್ರ ಮತ್ತು ಪಾತ್ರಕ್ಕೆ ಜೀವ ತುಂಬಲು ಶ್ರಮಿಸುತ್ತಿದ್ದಾರೆ. ಈ ಹಿಂದೆ ಕಾಂತಾರ ಚಿತ್ರ ಮಾಡಿದಾಗ ಖುದ್ದು ನಿರ್ದೇಶಕ ರಿಷಬ್ ಶೆಟ್ಟಿ ಮತ್ತು ನಿರ್ಮಾಪಕ ವಿಜಯ್ ಕಿರಗಂದೂರು ಅವರಿಗೇ ಕಾಂತಾರ ಇಂಥ ಮೈಲಿಗಲ್ಲಾಗುತ್ತೆ ಎಂದುಕೊಂಡಿರಲಿಲ್ಲ, ಆದರೆ, ಕಾಂತಾರ ಚಿತ್ರವನ್ನು ಭಾಷೆಯ ಭೇದ ಭಾವ ಇಲ್ಲದೇ ಎಲ್ಲರೂ ನೋಡಿ ಮೆಚ್ಚಿಕೊಂಡರು. ನಂತರ ಚಿತ್ರವನ್ನು ಆಯಾ ಭಾಷೆಗೆ ಡಬ್ ಮಾಡಿ ಬಿಡುಗಡೆ ಮಾಡಲಾಯಿತು, ಈ ಬಾರಿ ಚಿತ್ರವನ್ನು ಅದ್ದೂರಿಯಾಗಿಯೇ ನಿರ್ಮಾಣ ಮಾಡುತ್ತಿದ್ದಾರೆ. ಈ ಹಿಂದೆ ಕಾಂತಾರ ಕೇವಲ ಕನ್ನಡದಲ್ಲಿ ಮಾತ್ರ ಬಿಡುಗಡೆಯಾಗಿತ್ತು. ಆದರೆ ಕಾಂತಾರ ಚಾಪ್ಟರ್ 1 ಹಾಗಲ್ಲ, ಕನ್ನಡದ ಜೊತೆ ಜೊತೆ ಇಂಗ್ಲೀಷ್, ಹಿಂದಿ, ತೆಲುಗು, ತಮಿಳು, ಮಲಯಾಳಂ ಮತ್ತು ಬೆಂಗಾಲಿಯಲ್ಲಿ ಏಕಕಾಲಕ್ಕೆ ಬಿಡುಗಡೆಯಾಗಲಿದೆ. ಈ ಕಾರಣಕ್ಕೆ ಕಾಂತಾರ ಚಿತ್ರದ ಮೊದಲ ಭಾಗದ ಮೇಲೀಗ ವಿಪರೀತ ನಿರೀಕ್ಷೆಗಳಿವೆ. ನಿರ್ದೇಶಕ ರಿಷಬ್ ಶೆಟ್ಟಿ ಮತ್ತು ನಿರ್ಮಾಪಕ ವಿಜಯ್ ಕಿರಗಂದೂರು ಅವರ ಮೇಲೆ ಜವಾಬ್ದಾರಿ ಕೂಡ ಹೆಚ್ಚಿದೆ.



ಈ ಎಲ್ಲ ಕಾರಣಗಳಿಂದ ಈಸಲ ಕಾಂತಾರ ಚಾಪ್ಟರ್ 1 ಚಿತ್ರದ ಬಿಡುಗಡೆಯ ದಿನಾಂಕವನ್ನು ಚಿತ್ರತಂಡ ಅಳೆದು ತೂಗಿ ನಿರ್ಧರಿಸುತ್ತೆ ಎನ್ನಲಾಗಿತ್ತು. ಆ ಕುತೂಹಲಕ್ಕೀಗ ಉತ್ತರ ಸಿಕ್ಕಿದೆ. ಕಾಂತಾರ ಮೊದಲ ಭಾಗ ಗಾಂಧಿ ಜಯಂತಿ ಮತ್ತು ದಸರಾ ಹಬ್ಬದ ಸಮಯದಲ್ಲಿ 2025ರ ಅಕ್ಟೋಬರ್ 2ರಂದು ಬಿಡುಗಡೆಯಾಗಲಿದೆ. 2022ರಲ್ಲಿ ಕಾಂತಾರ ಚಿತ್ರ ಸೆಪ್ಟೆಂಬರ್ 30ರಂದು ಬಿಡುಗಡೆಯಾಗಿ ಐತಿಹಾಸಿಕ ದಾಖಲೆಯನ್ನು ಬರೆದಿತ್ತು. ಈಗ ಮೂರು ವರ್ಷಗಳ ನಂತರ ಎರಡು ದಿನ ತಡವಾಗಿ ಅಂದರೆ ಅಕ್ಟೋಬರ್ 2ರಂದು ಕಾಂತಾರದ ಮೊದಲ ಅಧ್ಯಾಯ ಬಿಡುಗಡೆಯಾಗುತ್ತಿದೆ. ಆಗ ಸೃಷ್ಟಿಯಾದ ಇತಿಹಾಸ ಇನ್ನೊಮ್ಮೆ ಸೃಷ್ಟಿಯಾಗುತ್ತಾ ಎಂದು ಕಾದುನೋಡಬೇಕಿದೆ, ಇನ್ನುಳಿದಂತೆ ಕೆರಾಡಿಯಲ್ಲಿ ದೊಡ್ಡ ಮಟ್ಟದ ಸೆಟ್ ನಿರ್ಮಿಸಿ ಕಾಂತಾರ ಪ್ರೀಕ್ವೆಲ್‌ಗೆ ಚಿತ್ರೀಕರಣ ನಡೆಸಲಾಗುತ್ತಿದೆ. ಕುಂದಾಪುರದಲ್ಲಿ 22 ಸಾವಿರ ಚದರ ಅಡಿ ವಿಸ್ತೀರ್ಣದ ಶೂಟಿಂಗ್ ಫ್ಲೋರ್ ನಿರ್ಮಿಸಿ ಚಿತ್ರೀಕರಣ ನಡೆಸಲಾಗುತ್ತಿದೆ. ಮೊದಲ ಭಾಗಕ್ಕಿಂತ ಹತ್ತು ಪಟ್ಟು ದೊಡ್ಡದಾಗಿ ಎರಡನೇ ಭಾಗ ಪ್ರೇಕ್ಷಕರ ಮುಂದೆ ಬರಲಿದೆ. ಹೊಂಬಾಳೆ ಫಿಲಂಸ್‌ನ ವಿಜಯ್ ಕಿರಗಂದೂರು ಅವರು ಈ ಚಿತ್ರವನ್ನು ಅದ್ದೂರಿಯಾಗಿ ನಿರ್ಮಾಣ ಮಾಡುತ್ತಿದ್ದು, ಸಿನಿಮಾ ಸಖತ್ ರಿಚ್ ಆಗಿ ಮೂಡಿಬರುತ್ತಿದೆ. ಕುಂದಾಪುರದಲ್ಲಿ ಐತಿಹಾಸಿಕ ಕದಂಬ ಸಾಮ್ರಾಜ್ಯವನ್ನು ಚಿತ್ರತಂಡ ಮರುಸೃಷ್ಟಿಸಿ ಅಲ್ಲೇ ಶೂಟಿಂಗ್ ಮುಂದುವರಿಸಿದೆ. ಈ ಮೂಲಕ ಪ್ರೇಕ್ಷಕನಿಗೆ ಶೌರ್ಯ, ಸಂಸ್ಕೃತಿ ಮತ್ತು ಅತೀಂದ್ರಿಯ ಯುಗಕ್ಕೆ ಕರೆದೊಯ್ಯಲಿದೆ. ಈ ಚಿತ್ರಕ್ಕಾಗಿ ಮತ್ತು ತಮ್ಮ ಪಾತ್ರದ ಸಲುವಾಗಿ ನಟ ಮತ್ತು ನಿರ್ದೇಶಕ ರಿಷಬ್ ಶೆಟ್ಟಿ ಅವರು ವಿಶೇಷ ತಯಾರಿಯನ್ನೇ ಮಾಡಿಕೊಂಡಿದ್ದಾರೆ. ಕೇರಳದ ಅತ್ಯಂತ ಹಳೆಯ ಸಮರ ಕಲೆಯ ಪ್ರಕಾರಗಳಲ್ಲಿ ಒಂದಾದ ಕಲರಿಪಯಟ್ಟು ತರಬೇತಿ ಪಡೆದಿದ್ದಾರೆ. ಕಲೆಯನ್ನು ಕರಗತ ಮಾಡಿಕೊಳ್ಳಲು ಸಾಕಷ್ಟು ಶ್ರಮಿಸಿದ್ದಾರೆ. ಅದರಂತೆ ಅಚ್ಚುಕಟ್ಟಾಗಿ ಸಿನಿಮಾ ಮೂಡಿಬರುತ್ತಿದೆ. ☯



# ‘ಟಾಕ್ಸಿಕ್’ ಅಡ್ಡಕ್ಕೆ ಎಂಟ್ರಿಯಾದ ಹುಮಾ ಖುರೇಷಿ

ಕೆಲ ಸಿನಿಮಾಗಳೇ ಹಾಗೆ. ಆರಂಭದಿಂದಲೇ ಕುತೂಹಲ ಹುಟ್ಟಿಸಿಬಿಡುತ್ತವೆ. ರಾಕಿಂಗ್ ಸ್ಟಾರ್ ಯಶ್ ಅಭಿನಯದ ಟಾಕ್ಸಿಕ್ ಇದೇ ಸಾಲಿಗೆ ಸೇರುವಂತಹ ಸಿನಿಮಾ. ಕಳೆದ ಡಿಸೆಂಬರ್‌ನಲ್ಲಿ ಅಧಿಕೃತವಾಗಿ ಘೋಷಿಸಲಾದ ಈ ಸಿನಿಮಾ ಕೆಜಿಎಫ್ ಚಿತ್ರವನ್ನೂ ಮೀರಿಸುತ್ತೆ ಅನ್ನೋದು ರಾಕಿಂಗ್ ಅಭಿಮಾನಿಗಳ ಮಾತು. ಇದಕ್ಕೆ ಪೂರಕವಾಗಿ ಯಶ್ ತಮ್ಮ ತಂಡದ ಜೊತೆ ಕೆಲಸ ಮಾಡುತ್ತಿದ್ದಾರೆ ಕೂಡ. ಇನ್ನು ಚಿತ್ರದ ನಾಯಕಿಯ ವಿಚಾರಕ್ಕೆ ಬಂದರೆ ಮೊದಲಿಂದ ಹಲವಾರು ಹೆಸರುಗಳು ಕೇಳಿಬರ್ತಾನೇ ಇವೆ. ಆ ಪೈಕಿ ಬಾಲಿವುಡ್ ಬೆಡಗಿ ಕಿಯಾರಾ ಅಡ್ವಾಣಿ ಹೆಸರು ಮುಂಚೂಣಿಯಲ್ಲಿದೆ. ಚಿತ್ರದ ನಾಯಕಿ ಬೇರೆ ಯಾರೂ ಅಲ್ಲ, ಬದಲಿಗೆ ಕಿಯಾರಾ ಅನ್ನುವ ಮಾತು ಇದೆ. ಈ ಮಾತು ನಿಜಾಕೂಡ ಆಗಿದೆ.

ಕಿಯಾರಾ ಈಗಾಗಲೇ ಟಾಕ್ಸಿಕ್ ಚಿತ್ರದ ಚಿತ್ರೀಕರಣದಲ್ಲಿ ಭಾಗಿಯಾಗಿದ್ದಾರೆ. ಚಿತ್ರತಂಡವಾಗಲಿ, ಯಶ್ ಆಗಲಿ ಇದಕ್ಕೆ ಸ್ಪಷ್ಟನೆ ನೀಡಿಲ್ಲವಾದರೂ, ಕಿಯಾರಾ ಟಾಕ್ಸಿಕ್ ಚಿತ್ರದ ನಾಯಕಿ ಎನ್ನುವ ವಿಚಾರವನ್ನು ಕೆಲ ವೈರಲ್ ವಿಡಿಯೋಗಳು ಈಗಾಗಲೇ ಜಗಜ್ಜಾಹೀರು ಮಾಡಿವೆ. ಇನ್ನೂ ದಕ್ಷಿಣ ಭಾರತದ ಲೇಡಿ ಸೂಪರ್ ಸ್ಟಾರ್ ನಯನತಾರಾ ಕೂಡ ಟಾಕ್ಸಿಕ್ ಚಿತ್ರದಲ್ಲಿರುವುದು ಖಚಿತವಾಗಿದೆ. ನಯನತಾರಾ ಯಶ್ ಅವರ ಸಹೋದರಿಯ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ ಎನ್ನುವ ಮಾತೂ ಇದೆ. ಇದರ ನಡುವೆ ಈಗ ಟಾಕ್ಸಿಕ್ ಅಂಗಳಕ್ಕೆ ಮತ್ತೊಬ್ಬ ಬಾಲಿವುಡ್ ಸ್ಟಾರ್ ನಟಿ ಪ್ರವೇಶಿಸಿದ್ದಾರೆ. ಅವರು ಬೇರೆ ಯಾರೂ ಅಲ್ಲ, ಹುಮಾ ಖುರೇಷಿ.

ಹೌದು, ಟಾಕ್ಸಿಕ್ ಚಿತ್ರದ ಚಿತ್ರೀಕರಣಕಾಗಿ ಯಶ್, ಕಳೆದ ಕೆಲದಿನಗಳಿಂದ ಮುಂಬೈನಲ್ಲಿ ಬಿಡಾರ ಹೂಡಿದ್ದಾರೆ. ಕಿಯಾರಾ ಅಡ್ವಾಣಿ ಕೂಡ ಚಿತ್ರದ ಚಿತ್ರೀಕರಣದಲ್ಲಿ ಭಾಗಿಯಾಗಿದ್ದಾರೆ. ವಿಶೇಷ ಅಂದರೆ ಈಗ ನಟಿ ಹುಮಾ ಖುರೇಷಿ ಕೂಡ ಟಾಕ್ಸಿಕ್ ಚಿತ್ರತಂಡವನ್ನು ಸೇರಿಕೊಂಡಿದ್ದಾರೆ. ಇದಕ್ಕೆ ಕೈಗನ್ನಡಿ ಎಂಬಂತೆ ಟಾಕ್ಸಿಕ್ ಚಿತ್ರದ ಚಿತ್ರೀಕರಣಕ್ಕೆ ಹುಮಾ ಖುರೇಷಿ ತೆರಳುತ್ತಿರುವ ವಿಡಿಯೋ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಯಶ್ ಅಭಿಮಾನಿಗಳ ಸಂಭ್ರಮವನ್ನೂ ಹೆಚ್ಚಿಸಿದೆ. ಅಂದ್ಹಾಗೆ ಹುಮಾ ಖುರೇಷಿ ಕೇವಲ ರೂಪವತಿ ಅಷ್ಟೇ ಅಲ್ಲ, ಅಭಿನಯದ ವಿಚಾರದಲ್ಲಿ ಕೂಡ ಇವರದ್ದು ಎತ್ತಿದ ಕೈ. ಗ್ಯಾಂಗ್ಸ್ ಆಫ್ ವಾಸೇಪುರ್, ಬದ್ಲಾಪುರ್ ಮತ್ತು ಮಹಾರಾಣಿ ಎಂಬ ವೆಬ್ ಸರಣಿ ಇದಕ್ಕೆ ಕೈಗನ್ನಡಿ. ರಜಿನಿಕಾಂತ್ ಅಭಿನಯದ ಕಾಲಾ ಚಿತ್ರದ ಮೂಲಕ ದಕ್ಷಿಣ ಭಾರತ ಚಿತ್ರರಂಗಕ್ಕೆ ಬಂದಿದ್ದ ಹುಮಾ ಖುರೇಶಿ, ಸದ್ಯ ಜಾಲಿ ಎಲ್‌ಎಲ್‌ಬಿ-3 ಮತ್ತು ಗುಲಾಬಿ ಎಂಬ ಚಿತ್ರಗಳಲ್ಲಿ ನಟಿಸುತ್ತಿದ್ದಾರೆ. ಹುಮಾ ಖುರೇಷಿ ಅವರ ಪಾತ್ರ ಟಾಕ್ಸಿಕ್ ಚಿತ್ರದಲ್ಲಿ ಹೇಗಿರಲಿದೆ ಎನ್ನುವುದು ಸದ್ಯಕ್ಕೆ ನಿಗೂಢವಾದರೂ ಹುಮಾ ಖುರೇಷಿ ಅವರದ್ದು ಚಿತ್ರದಲ್ಲಿ ತುಂಬಾ ಮಹತ್ತರವಾದ ಪಾತ್ರ ಎನ್ನುವ ಮಾತು ದಕ್ಷಿಣದಿಂದ ಉತ್ತರದವರೆಗೆ ಕೇಳಿಬರುತ್ತಿದೆ. ಚಿತ್ರದ ಮೇಲಿನ ಕುತೂಹಲವನ್ನು ಹುಮಾ ಖುರೇಷಿ ಅವರ ಪಾತ್ರ ಹೆಚ್ಚಿಸಿದೆ. ☯




# ಕುತೂಹಲಕರವಾಗಿ ಕಟ್ಟಿರುವ ದ್ರೋಹದ ಕಥನ ‘ಟೆನೆಂಟ್’

ದ್ರೋಹದ ಕತೆ ಕಾಡುತ್ತದೆ. ಕ್ರೌರ್ಯ ಮನಸ್ಸಲ್ಲಿ ಉಳಿಯುತ್ತದೆ. ಇದು ಅಂಥದ್ದೊಂದು ಕತೆ. ಮನುಷ್ಯನ ಮನಸ್ಸಿನ ಅನಂತ ಸಾಧ್ಯತೆಗಳನ್ನು ಅನಾವರಣಗೊಳಿಸುವ ದ್ರೋಹದ, ಕ್ರೌರ್ಯದ, ಆಸೆಯ, ದುರಾಸೆಯ ಕತೆ. ಕತೆ ಸರಳವಾಗಿ ಆರಂಭವಾಗುತ್ತದೆ. ಒಂದು ಮನೆಯಲ್ಲಿ ಗಂಡ ಮತ್ತು ಹೆಂಡತಿ. ಆ ಮನೆಯ ಟೆರೇಸಿನ ಒಂಟಿ ಕೋಣೆಯಲ್ಲಿ ಒಬ್ಬ ಬ್ಯಾಚುಲರ್. ಯಾವಾಗ ಕೋವಿಡ್ ಬಂದು ಜಗತ್ತನ್ನು ನೋಯಿಸಲು ಶುರು ಮಾಡುತ್ತದೋ ಈ ಪುಟ್ಟ ಕುಟುಂಬದಲ್ಲಿಯೂ ಅಲ್ಲೋಲಕಲ್ಲೋಲ ಆಗುತ್ತದೆ. ಆಗ ಕತೆ ತೆರೆದುಕೊಳ್ಳುತ್ತದೆ.

ನಿರ್ದೇಶಕರು ಒಂದು ಕತೆಯನ್ನು ಸೊಗಸಾಗಿ ಕಟ್ಟುತ್ತಾ ಹೋಗುತ್ತಾರೆ. ಆರಂಭದಲ್ಲಿ ಎಲ್ಲವೂ ಸಹಜ ಮತ್ತು ನಿರಾಳ, ಕೊಂಚ ನಿಧಾನವಾಗಿ ಸಾಗುವಂತೆ ಅನ್ನಿಸುತ್ತದೆ. ದ್ವಿತೀಯಾರ್ಧದಲ್ಲಿ ಕತೆಗೊಂದು ವೇಗ ದಕ್ಕುತ್ತದೆ. ಮೇಲ್ನೋಟಕ್ಕೆ ಕಾಣದ್ದು ಕಾಣಿಸುತ್ತದೆ. ತಿರುವುಗಳು ಸಿಕ್ಕಿ ಪ್ರಯಾಣ ರೋಚಕವಾಗುತ್ತದೆ. ಆ ನಿಟ್ಟಿನಲ್ಲಿ ನಿರ್ದೇಶಕರು ಸೊಗಸಾಗಿ ಚಿತ್ರಕತೆ ಬರೆದಿದ್ದಾರೆ. ಅಂತ್ಯದಲ್ಲಿ ಎಲ್ಲವೂ ನಿಚ್ಚಳವಾಗುತ್ತಾ ಹೋಗುವಾಗ ಪ್ರೇಕ್ಷಕನಿಗೆ ಪಾತ್ರಗಳ ನಿಜ ಅರಿವಾಗುತ್ತಾ ಹೋಗುತ್ತದೆ. ಆಗ ಅಚ್ಚರಿಯೂ ಆಗಬಹುದು ಮತ್ತು ಬೇಸರವೂ ಆಗಬಹುದು.

ದ್ರೋಹದ ಕತೆಯನ್ನು ಕುತೂಹಲಕರ ಕಟ್ಟಿಕೊಟ್ಟಿರುವ ನಿರ್ದೇಶಕ ಶ್ರೀಧರ್ ಶಾಸ್ತ್ರಿಯುವರ ಸೊಗಸಾದ ಬರವಣಿಗೆ ಮತ್ತು ಪಾತ್ರಗಳನ್ನು ಜೀವಿಸಿರುವ ಸೋನು ಗೌಡ, ಧರ್ಮ ಕೀರ್ತಿರಾಜ್, ಉಗ್ರಂ ಮಂಜು, ರಾಕೇಶ್ ಮಯ್ಯ, ತಿಲಕ್ ಇವರೆಲ್ಲರ ನಟನೆ ಶ್ಲಾಘನೀಯ. ಇದೊಂದು ಕುತೂಹಲಕರ ಕಥನ. ☯

Vol. 40 No. 25 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com